ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು):- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಪರವಾಗಿ 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಉಪಾಧ್ಯಕ್ಷಿಣಿಯವರು:- ಪ್ರಸ್ತಾವ ಏನೆಂದರೆ: "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2ರಿಂದ 3ರವರೆಗೆ:-

ಉಪಾಧ್ಯಕ್ಷಿಣಿಯವರು:- ಖಂಡ 2 ಮತ್ತು 3, ಎರಡೂ ಸೇರಿದಂತೆ ವಿಧೇಯ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ, " ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ, 1992ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ: 1992ನೇ ಸಾಲಿನ ಕರ್ನಾಟಕ ಧನವಿನಿಯೋಗ ವಿಧೇಯಕವನ್ನು ಸಭೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು,

ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ 1992

(ಪರ್ಯಾಲೋಚನಾ ಪ್ರಸ್ತಾವ)

ಉಪಾಧ್ಯಕ್ಷಿಣಿಯವರು:- ಈಗ ವಿಧೇಯಕವನ್ನು ಪುನರ್‌ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು. ಕರ್ನಾಟಕ ಜಿಲ್ಲಾಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ(ತಿದ್ದುಪಡಿ) ವಿಧೇಯಕ 1992ನ್ನು ಮಾನ್ಯ ಕಂದಾಯ ಸಚಿವರು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ...

SRI. D. B. CHANDREGOWDA:- I have a point of order.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಂಡಿಸಿದ ಮೇಲೆ ಅವರು ಹೇಳಬಹುದು.

(ಗೊಂದಲ)

ಶ್ರೀ ಶಿವಾನಂದ.ಹೆಚ್. ಕೌಜಲಗಿ:- ಮಾನ್ಯ ಅಧ್ಯಕ್ಷರೇ, ಮೇಲ್ಮನೆಯಲ್ಲಿ...

(ವಿರೋಧ ಪಕ್ಷದ ಕೆಲವು ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು)

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ:- ಮೇಲ್ಮನೆಯಲ್ಲಿ ವಿರೋಧ ಪಕ್ಷದವರು ಗಲಾಟೆ ಮಾಡಿದಮೇಲೆ ಮತ್ತೆ ಇದು ಇಲ್ಲಿಗೆ ಬಂದಿದೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ವಿರೋಧ ಪಕ್ಷದ ನಾಯಕರು ತಮ್ಮ ಕ್ರಿಯಾಲೋಪ ಏನೆಂದು ಹೇಳಬಹುದು

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೆ ಗೌಡ:- ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ.

(ಗೊಂದಲ)

SRI. D. B. CHANDREGOWDA:- He should know his limits. I am not here making irrelevant, inconsistent points or say that there is no point or order. There should be some decorum in this House. If he is not aware of the provisions or rules or the Act or the conventions of the House, he should try to know it. I would like to bring to your kind notice the statement of objects and reasons which the Hon. Minister is trying to introduce in the form of a Bill to be taken up for consideration of the House. It was considered - let me go on record, necessary to appoint administrators for Zilla Parishad and Mandal Panchayat and to hold the elections after changes contemplated in the legislation relating to the Zilla Parishads and Mandal Panchayats. Accordingly, the Karnataka Zilla Parishads, Taluk Panchayat Samitis, Mandal Panchayats, Nyaya Panchayats Ordinance 1992 was promulgated.

ಕನ್ನಡದಲ್ಲಿ- " ಜಿಲ್ಲಾಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳಿಗೆ ಆಡಳಿತಗಾರರನ್ನು ನೇಮಕ ಮಾಡುವುದು ಮತ್ತು ಜಿಲ್ಲಾಪರಿಷತ್ತುಗಳು ಮತ್ತು ಮಂಡಲ ಪಂಚಾಯಿತಿಗಳಿಗೆ ಸಂಬಂಧಿಸಿದ ಕಾನೂನಿಗೆ ಪ್ರಸ್ತಾವಿಸಲಾದ ಬದಲಾವಣೆಗಳನ್ನು ಮಾಡಿ ಅಧಿನಿಯಮಿಸಿದ ತರುವಾಯ ಸಾರ್ವತ್ರಿಕ ಚುನಾವಣೆಗಳನ್ನು ನಡೆಸುವುದು..."

Under the Act, there is a provision to have the Administrators if the exigencies arise. What are the circumstances? Under Sec. 160 and 272, there are two circumstances and only two circumstances wherein the Administrators could be appointed.

(1) Whenever

(a) Any general election to a Mandal Panchayat or Zilla Praishad under this Act or any proceedings consequent thereon have been stayed by an order of a competent court or authority; or

(b) All the members or more than two-thirds of the Members of a Mandal Panchayat or Zilla Parishad have resigned, the Government Shall, by notification in the official gazette appoint an administrator for such period as may be specified in the notification and may, by like notification, curtail or extend the period of such appointment.

These are the two circumstances under which an Administrator could be appointed. I will go to the details. Before that, ತಮ್ಮ ಮಸೂದೆಯಲ್ಲಿ ಅಬ್ಜೆಕ್ಟ್ಸ ಮತ್ತು ರೀಜನ್ಸ್‌ನಲ್ಲಿ ಏನು ಹೇಳುತ್ತಾರೆ, ಕಾರಣಗಳನ್ನು ಏನು ಕೊಟ್ಟಿದ್ದಾರೆ ಆ ಕಾರಣಗಳಿಗೆ ವಿಭಿನ್ನವಾದಂತಹ ಶಾಸನವನ್ನು ಇಲ್ಲಿ ಜಾರಿಗೆ ಕೊಡತಕ್ಕ ಇಂಟರ್‌ಡ್ಯೂಸ್ ಮಾಡತಕ್ಕ ಪ್ರಯತ್ನ ನಡೆದಿದೆ. ಆ ಕಾರಣ ಮೊದಲಿನ ಈ ಉದ್ದೇಶ ಅಪಾಯಿಂಟ್‌ಮೆಂಟ್ ಆಫ್ ಅಡ್ಮಿನಿಸ್ಟ್ರೇಟರ್ ಯಾವಾಗ ಮಾಡಬಹುದು? ಶಾಸನಕ್ಕೆ ತಿದ್ದುಪಡಿಯನ್ನು ಮಾಡಿ ಚುನಾವಣೆಯನ್ನು ಮಾಡದೇ ಇರತಕ್ಕ ಸಂದರ್ಭವನ್ನು ವಿವರಿಸಿ ಇಂತಹ ಕಾರಣಕ್ಕಾಗಿ ಚುನಾವಣೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿ ಅದನ್ನು ಶಾಸನಸಭೆಯಲ್ಲಿ ಮಾನ್ಯತೆ ಮಾಡಿದರೆ ಆಗ ಆಡಳಿತಾಧಿಕಾರಿಯನ್ನು ನೇಮಕ ಮಾಡತಕ್ಕ ಅಧಿಕಾರವನ್ನು ತೆಗದುಕೊಳ್ಳಬಹುದು. ಅಲ್ಲಿಯವರೆಗೆ ಇಂತಹ ಮಸೂದೆಯನ್ನು ಶಾಸನ ಸಭೆಯಲ್ಲಿ ಇಂಟ್ರಡ್ಯೂಸ್ ಮಾಡಲಿಕ್ಕೆ ಈ ಸರ್ಕಾರಕ್ಕೆ ಶಾಸನಬದ್ಧವಾದ ಅಧಿಕಾರವಿಲ್ಲ ಎನ್ನತಕ್ಕದ್ದು ನನ್ನ ಮೂಲಭೂತವಾದಂತಹ ಅಬ್ಜೆಕ್ಷನ್. ಅದಕ್ಕಾಗಿ ನಾನು ಮತ್ತೆ ಮತ್ತೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಶಾಸನಸಭೆಯಲ್ಲಿನ ಬಹು ಸಂಖ್ಯೆಯನ್ನು ಆಧರಿಸಿ ಶಾಸಕಾಂಗದ ಅಧಿಕಾರ ವ್ಯಾಪ್ತಿಯನ್ನು ಮೀರಿ ಅಥವಾ ನಮಗೆ ಕಾಂಪಿಟೆನ್ಸಿ ಇದೆ ಎನ್ನತಕ್ಕ ಭಾವನೆಯಿಂದ ಶಾಸನವನ್ನು ರಚನೆ ಮಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟರೆ ಇದೊಂದು ಹೊಸ ಮತ್ತು ನನ್ನ 22 ವರ್ಷಗಳ ಸಂಸದೀಯ ಜೀವನದಲ್ಲಿ ಕಂಡು ಕೇಳಿ ಅರಿಯದೆ ಇರತಕ್ಕ ಮತ್ತು ಈ ಶಾಸನಸಭೆಯಲ್ಲಿ ಹಿಂದೆ ಯಾವಾಗಲೂ ಮಾಡದೇ ಇರತಕ್ಕ ಒಂದು ನಿರ್ಣಯಕ್ಕೆ ನಾಂದಿಯನ್ನು ಹಾಕುತ್ತಿದ್ದೇವೆ ಎಂದು ಭಾವಿಸಿಕೊಳ್ಳಬೇಕಾಗುತ್ತದೆ. ಈವೊಂದು ಬಿಲ್ಲನ್ನು ಮಂಡನೆ ಮಾಡುವುದಕ್ಕೆ ಮುನ್ನ ನಿಮ್ಮಿಂದ ನಿರೀಕ್ಷೆಮಾಡುತ್ತೇನೆ ಏನೆಂದರೆ ಇದು ಈ ವ್ಯಾಪ್ತಿಯಲ್ಲಿ ಬರುತ್ತದೆಯೇ? ಬರುತ್ತದೆಂದು ಹೇಳಿದರೆ ನನಗೆ ಬೇಕಾಗಿರತಕ್ಕ ಮಾಹಿತಿಯುನ್ನು ಒದಗಿಸಬೇಕು. ಒದಗಿಸಲ್ಲಿಲ್ಲವೆಂದರೆ ತಾವು ಇಂಟ್ರಡ್ಯೂಸ್‌ನ್ನು ತಡೆಹಿಡಿಯಬೇಕು. ನಾನು ಸೂಕ್ಷ್ಮವಾಗಿ ಈ ವಿಚಾರ ಹೇಳಿದ್ದೇನೆ. ತಾವು ನಾನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ಮಾನ್ಯ ಆಳ್ವರವರೆ, ಈ ಕಡೆಯವರು ಏನು ಹೇಳುತ್ತಾರೆ

ನೋಡೋಣ ಆಮೇಲೆ ಬೇಕಾದರೆ ತಾವು ಮಾತನಾಡಿ.

ಡಾ || ಜೀವರಾಜ ಆಳ್ವ:- ಮಾನ್ಯ ಉಪಾಧ್ಯಕ್ಷಿಣಿಯವರೇ, ಟ್ರಾಜಿಡಿ ಎಂದು ಹೇಳಿದರೆ ಇಷ್ಟು ಸವಿಸ್ತಾರವಾಗಿ ಪಾಯಿಂಟ್ ಆಫ್ ಆರ್ಡರ್ ಮೂಲಕ ನಮ್ಮ ನಾಯಕರು ಹೇಳಿದ್ದನ್ನು ಟ್ರಜರಿ ಬೆಂಚ್‌ನಲ್ಲಿ ಕೂತವರಾಗಲೀ, ಈ ಬಿಲ್ಲನ್ನು ಮಂಡನೆ ಮಾಡಿಸಿರುವ ರೆವಿನ್ಯೂ ಮಿನಿಸ್ಟರ್ ಆಗಲೀ, ಮಾನ್ಯ ವೀರಪ್ಪ ಮೊಯಿಲಿಯವರಾಗಲಿ ಹೇಳಲಿಲ್ಲ.(interruptions). The apathies have shown ನೀವು ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತುಕೊಂಡಿದ್ದೀರಿ; ಸರ್ಕಾರದ ಪರವಾಗಿ ವಿರೋಧ ಪಕ್ಷದ ನಾಯಕರು ಹೇಳಿದ್ದನ್ನು ಅವರು ಏನಾದರೂ ಕೇಳಿದ್ದಾರೆಯೇ? Very very fundamental issues he has raised. ಇವರು ಕುಳಿತುಕೊಂಡು ಇಲ್ಲಿ ಬೇರೇನೋ ಮಾತನಾಡುತ್ತಿದ್ದಾರೆ. ಏನು ಮಾತನಾಡಿದರು ಎಂದು ಅವರು ಕೇಳಿದ್ದಾರೆಯೇ? ಇಲ್ಲಿ ಮಂತ್ರಿಗಳಾದವರಿಗೆ ಏನು ಮಾತುಕತೆಯಿತ್ತೆಂದು ನೀವು ಕೇಳಿದಿರಾ?

(ಗೊಂದಲ)

ಸರ್ಕಾರದ ಪರವಾಗಿ ಉತ್ತರ ಕೊಡುವವರು, ನಮ್ಮ ನಾಯಕರು ಏನು ಹೇಳುತ್ತಾರೆಂದು ಕೇಳಬೇಕೋ ಇಲ್ಲವೋ?

SRI. M. VEERAPPA MOILY:- It is a very fertile imagination. I am very sorry.

Dr. JEEVARAJ ALVA:- The basic, fundemantal issue is being raised...

MADAM DEPUTY SPEAKER:- Let us hear them.

ಡಾ || ಜೀವರಾಜ ಆಳ್ವ:- ಸಂಬಂಧಪಟ್ಟ ರೆವಿನ್ಯೂ ಮಂತ್ರಿಗಳು ಮಾನ್ಯ ಚಂದ್ರೇಗೌಡರು ಏನು ಹೇಳಿದರು ಅಂತ ಹೇಳಿ ಅದಕ್ಕೆ ಉತ್ತರ ಕೊಟ್ಟರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳಿದರೆ ನೀವು ನಿಮ್ಮ ಸ್ಥಾನ ಬಿಡುತ್ತೀರಾ? I have gone there to seek. What he has raised is regarding Statement of Objectsand Reasons. We were discussing the samething.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜನ ಖರ್ಗೆ:- ನೀವು ಆ ರೀತಿ ಮಾತನಾಡಿದರೆ ನಾನು ನೀವು ನಿಮ್ಮ ಸ್ಥಾನ ಬಿಡುತ್ತೀರಾ ಎಂದು ಕೇಳಲೇಬೇಕಾಗುತ್ತದೆ.

(ಗೊಂದಲ)

ಡಾ || ಜೀವರಾಜ ಆಳ್ವ:- ಒಂದು ರಾಜ್ಯದ ದೊಡ್ಡ ವಿಚಾರಕ್ಕೆ ಸಂಬಂಧಪಟ್ಟಂತೆ ಚರ್ಚೆ ಮಾಡಲು ನಾವು ಧರಣಿ ನಿಲ್ಲಿಸಿ ಒಳಗೆ ಬಂದಿದ್ದೇವೆ. ಒಳಗೆ ಬಂದು when a most pertinent question has been raised...

ಶ್ರೀ. ಅಂಜನಮೂರ್ತಿ:- ಜನ ನಿಮ್ಮನ್ನು ಆರಿಸಿ ಕಳಿಸಿದ್ದು ಒಳಗೆ ಬಂದು ಕುಳಿತು ಮಾತನಾಡುವುದಕ್ಕೆಂದು.

(ಗೊಂದಲ)

MADAM DEPUTY SPEAKER:- You cannot question

that way.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ, ತಮಗೆ ಕೂಡ ಚೆನ್ನಾಗಿ ಗೊತ್ತಿದೆ ಈ ಮನೆಯಲ್ಲಿ ಈ ಒಂದು ಮಸೂದೆ ಮೇಲೆ ಸುಮಾರು ಐದಾರು ಗಂಟೆಕಾಲ ಚರ್ಚೆಯಾಯಿತು. ಬಹುಶಃ ಆವಾಗ ಶ್ರೀಮಾನ್ ಚಂದ್ರೇಗೌಡರು ಮತ್ತು ಜೀವರಾಜ ಆಳ್ವರವರು ಮತ್ತು ಅನೇಕ ಮಾನ್ಯ ಸದಸ್ಯರು ಇಲ್ಲಿ ಇದ್ದಿದ್ದರೆ ಒಳ್ಳೆಯದಾಗುತ್ತಿತ್ತು. ಇದು ಬಹಳ ಸಣ್ಣ ತಿದ್ದುಪಡಿ ಇದೆ. ಇದು ಆಡಳಿತಾತ್ಮಕ ದೃಷ್ಟಿಯಿಂದ ತಂದಂಥ ಒಂದು ತಿದ್ದುಪಡಿ. ಈ ತಿದ್ದುಪಡಿಯನ್ನು ತರುವಾಗ ಅವರು ಆಗಲೇ ಬೆಳಕು ಚೆಲ್ಲಿದ್ದರೆ ಬಹಳ ಚೆನ್ನಾಗಿ ಇತ್ತು. ಆದರೆ ಕಾರಣಾಂತರದಿಂದ ಅವರು ಬರಲಿಲ್ಲ. ಇವತ್ತು ಏನೋ ಪುನಃ ಈ ಸದನದಲ್ಲಿ ಪಾಸ್ ಆಗಿ ಹೋದಮೇಲೆ ಈಗ ಕೌನ್ಸಿಲ್‌ನಲ್ಲಿ ತಿರಸ್ಕರಿಸಿ ಆದಮೇಲೆ ಪುನಃ ನಾನು ಇಲ್ಲಿ ಮಂಡಿಸಬೇಕೂಂತ ಹೇಳಿ ನಿಂತಿದ್ದೇನೆ. ಈ ಮಧ್ಯೆ ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಈ statement of objects and reasons ಸರಿ ಇಲ್ಲ, ಇದರಲ್ಲಿ ನಮೂದು ಆಗಿರುವಂಥ ಕಾರಣಗಳು ಸಮಂಜಸ ಇಲ್ಲ, ಮತ್ತು ಅದು ಪರಸ್ಪರ ವಿರುದ್ಧವಾಗಿದೆ. ನೀವು ತಂದಂಥ ಅಮೆಂಡ್‌ಮೆಂಟೇ ಬೇರೆ ಮತ್ತು ರೀಸನ್ಸ್ ಕೊಟ್ಟಿದ್ದು ಮತ್ತು ನಿಮ್ಮ ಗುರಿ ಇರತಕ್ಕದ್ದು ಬೇರೆ. ಇದು ಒಂದಕ್ಕೊಂದು ಹೊಂದಾಣಿಕೆ ಇಲ್ಲ. ಅದಕ್ಕಾಗಿ ಇದನ್ನು ಮಂಡಿಸಬಾರದು ಎನ್ನತಕ್ಕಂಥಾದ್ದು ಅವರ ವಾದವೆಂದು ನಾನು ಭಾವಿಸಿದ್ದೇನೆ. ಅವರು ಹೇಳಿದ್ದರ ಅರ್ಥ ಇಷ್ಟು ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಬಿಟ್ಟು ಮತ್ತೆ ಏನು ಚರ್ಚೆಯಾಗಿದೆ, ನಾನು ಅಲ್ಲಿ ಕುಳಿತಿದ್ದಾಗ ಗೊತ್ತಾಗಲಿಲ್ಲ. ಈ ವಾದದ ಬಗ್ಗೆ ಆ ಮನೆಯಲ್ಲಿ ಕೂಡ ಸಾಕಷ್ಟು ಚರ್ಚೆಯಾಗಿದೆ. ಸುಮಾರು ಮೂರು ತಾಸಿಗಿಂತ ಹೆಚ್ಚು ಕಾಲ ಶ್ರೀಮಾನ್ ನಾಣಯ್ಯನವರು, ಸತ್ಯನಾರಾಯಣರಾವ್ ಅವರು ಮತ್ತು ಅನೇಕ ವಿರೋಧ ಪಕ್ಷದ ನಾಯಕರು ಸೇರಿ ಸುಮಾರು 31 ಜನ ಅಲ್ಲಿ ಕೂಡ ಹಾಜರಾತಿ ಇದ್ದರು. ಅವರಲ್ಲಿ ಬಹುಶಃ 15 ಜನ ಇದರ ಮೇಲೆ ಬೆಳಕು ಚೆಲ್ಲಿದ್ದಾರೆ. ಕೊನೆಗೆ ನಾವು ಕೇಳತಕ್ಕಂಥಾದ್ದನ್ನು ಬಹಳ ಸ್ಪಷ್ಟವಾಗಿ ನಮೂದು ಮಾಡಿದ್ದೇವೆ. ನಮ್ಮ ಉದ್ದೇಶ ಏನಿದೆ, ನಮ್ಮ ಗುರಿ ಏನಿದೆ, ಯಾವ ಕಾರಣಕ್ಕಾಗಿ ತಂದಿದ್ದೇವೆ ಎಂಬುದನ್ನು ಸ್ಪಷ್ಟಪಡಿಸಿದ್ದೇನೆ. ನಮ್ಮ ಧ್ಯೇಯ ಇರತಕ್ಕದ್ದು ಏನೆಂದರೆ ಈಗೇನು ಜಿಲ್ಲಾಪರಿಷತ್ ಅಥವಾ ಮಂಡಲ್ ಪಂಚಾಯತ್‌ಗಳ ಅವಧಿ ಮುಗಿದುಹೋಗಿದೆ. ಐದು ವರ್ಷ ಆದನಂತರ ಏನೊಂದು ವ್ಯಾಕ್ಯೂಮ್ ಕ್ರಿಯೇಟ್ ಆಗುತ್ತದೆ, ಚುನಾವಣೆ ಆಗದೇ ಇದ್ದ ಕಾರಣ, ಈ ವ್ಯಾಕ್ಯುಮ್‌ನ್ನು ಫಿಲಪ್ ಮಾಡುವುದಕ್ಕೋಸ್ಕರ ಅಡ್ಮಿನಿಸ್ಟ್ರೇಟರುಗಳನ್ನು ನೇಮಕ ಮಾಡಬೇಕು. ಇದೇನು ಹೊಸ ನೀತಿ ಅಲ್ಲ. ಈ ನೀತಿ, ತತ್ವ ನಮ್ಮ ಮುನಿಸಿಪಲ್ ಆಕ್ಟ್‌ನಲ್ಲಿದೆ; ಕಾರ್ಪೊರೇಷನ್ ಆಕ್ಟ್‌ನಲ್ಲಿದೆ ಮತ್ತು ಸಹಕಾರ ಇಲಾಖೆಯಲ್ಲಿ ಸಹಕಾರಿ ಸಂಸ್ಥೆಗಳನ್ನು ಸೂಪರ್ ಸೀಡ್ ಮಾಡಿದರೆ ಅಡ್ಮಿನಿಸ್ಟ್ರೇಟರುಗಳನ್ನು ಹಾಕತಕ್ಕದ್ದು ಇದೆ. ಇದು ಏನೋ ಒಂದು ದೊಡ್ಡ ಅನಾಹುತವಾಗಿದೆ, ಅನ್ಯಾಯವಾಗಿದೆ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಮುಂದೆ ಸಮಗ್ರವಾದಂಥ ತಿದ್ದುಪಡಿಯನ್ನು ನಾವು ತರುತ್ತೇನೆ. ಈ ಬಗ್ಗೆ ಕೆಲವು ವಿಷಯಗಳನ್ನು ಈಗಾಗಲೇ ನಾನು ಈ ಮನೆಯಲ್ಲಿ ಹೇಳಿದ್ದೇನೆ. ಸಮಗ್ರವಾದ ತಿದ್ದುಪಡಿಗಳನ್ನು ತಂದಾಗ ಮಾತ್ರ ಅವರು ಅನೇಕ ಸಲಹೆಗಳನ್ನು ಕೊಡಬಹುದು, ಬೇಕಾದರೆ ಅದರ ಮೇಲೆ ಅವರಿಗೆ ಏನು ಅನಿಸುತ್ತದೆ, ಅದನ್ನು ಹೇಳಬಹುದು. ಆದರೆ ಇದರ ಬಗ್ಗೆ ಕಾರಣಗಳು ಸಮಂಜಸ ಇಲ್ಲ ಮತ್ತು ತಂದಿರತಕ್ಕ ತಿದ್ದುಪಡಿ ಒಂದಾದರೆ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್ ಕೊಟ್ಟಿದ್ದು ಬೇರೆ ಎಂಬ ವಾದ ಏನಿದೆ, ಅದು ಸರಿ ಇಲ್ಲ. ನಮ್ಮ ಆಬ್ಜೆಕ್ಟ್ಸ್ ಏನಿದೆ, ಕಾರಣಗಳನ್ನು ಏನು ಕೊಟ್ಟಿದ್ದೇವೆ, ಅದರ

ಆಧಾರದ ಮೇಲೆ ಇವತ್ತಿನ ದಿವಸ ತಿದ್ದುಪಡಿ ತಂದಿದ್ದೇವೆ. ಮುಖ್ಯವಾಗಿ ತಿದ್ದುಪಡಿಯಲ್ಲಿ ಏನಿರುತ್ತದೆ, ಅದೇ ನಮ್ಮ ಗುರಿ ಆಗಿರುತ್ತದೆ. ನಾನು ಆಡಳಿತಾಧಿಕಾರಿಗಳನ್ನು ಹಾಕತಕ್ಕಂತಾದ್ದು ಇಲ್ಲವೇ ಇಲ್ಲ. ಅದಕ್ಕೆ, ಇದನ್ನು ತೋರಿಸಿದ್ದೇವೆ. ವ್ಯತ್ಯಾಸ ಮಾಡಿದ್ದೇವೆ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ಇದರಲ್ಲಿ ಅವರು ಎತ್ತಿದ ಪಾಯಿಂಟ್ ಆಫ್ ಆರ್ಡರಿನಲ್ಲಿ ಹುರುಳಿಲ್ಲ. ಆದುದರಿಂದ ನನಗೆ ತಾವು, ಪುನಃ ಇದನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ(ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಬಹಳ ಸ್ಪಷ್ಟವಾಗಿ ಇಲ್ಲಿಯೂ ಹೇಳಿದ್ದಾರೆ ಮತ್ತು ಆ ಸದನದಲ್ಲಿಯೂ ಹೇಳಿದ್ದಾರೆ. ನಮ್ಮಲ್ಲಿ ಒಂದು ಕ್ರಮ ಇಟ್ಟುಕೊಂಡಿದ್ದೇವೆ, ನಿಮ್ಮಲ್ಲಿಯೂ ಈ ಕ್ರಮವನ್ನು ಇಟ್ಟು ಕೊಳ್ಳಬಹುದು ಅಥವಾ ಬಿಡಬಹುದು. ನಮ್ಮಲ್ಲಿ ಏನು ಕ್ರಮ ಇಟ್ಟುಕೊಂಡಿದ್ದೇವೆಂದರೆ, ವಿರೋಧ ಪಕ್ಷದವರು ಒಂದು ವಿಚಾರವನ್ನು ಒಂದು ಪ್ರಸ್ತಾವನೆಯನ್ನು ಮಾಡಿದಾಗ, ಅದನ್ನು ಬಹಳ ಸಲಿಗೆಯಿಂದ ನಾವು ತೆಗೆದುಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ಅದನ್ನು ಗಂಭೀರವಾಗಿ ತೆಗೆದು ಕೊಳ್ಳುತ್ತೇವೆ. ಇಲ್ಲಿರುವ ಪ್ರತಿಯೊಬ್ಬರೂ ಬೃಹ್ಮರೆಂದು ನಾನು ತಿಳಿದುಕೊಂಡಿಲ್ಲ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರೇ ಇದನ್ನು ಎತ್ತಿದಾಗ, ನಾವು ಗಂಭೀರವಾಗಿ ಆಲೋಚನೆ ಮಾಡಬೇಕು. ಅದರ ಸಾಧಕಬಾಧಕಗಳು ಮತ್ತು ವಿಚಾರವನ್ನು ಇಲ್ಲಿ ಕುಳಿತುಕೊಂಡು ಸಮಾಲೋಚನೆ ಮಾಡಬೇಕು. ನೀವು ಸಮಾಲೋಚನೆ ಬೇಡ, ನಿಮ್ಮ ವಿಚಾರ ಸಮಾಲೋಚನೆಯೇ ಬೇಡ ಎಂದು ಹೇಳುವುದಾದರೆ, ನನಗೆ ಗೊತ್ತಿದೆ, Mr. Jeevaraj, you are more interested in action than thinking. You don't think sometimes and act. But we invariably think and act. That is the difference.

DR. JEEVARAJ ALVA:- I must submit that I have thought acted and evoked substantial response from them. He knows it and I know it.

ಶ್ರೀ ಎಂ. ವೀರಪ್ಪ ಮೊಯಿಲಿ:- ಸ್ವಲ್ಪ ಆಲೋಚನೆ ಮಾಡಿ ಕೆಲಸ ಮಾಡಿದರೆ ಸುಗಮವಾಗುತ್ತದೆ, ತಾವು ಆಲೋಚನೆಯನ್ನೇ ಮಾಡುವುದಿಲ್ಲ; ಕೆಲಸವನ್ನೂ ಮಾಡುವುದಿಲ್ಲ.

ಡಾ || ಜೀವರಾಜ ಆಳ್ವ:- ನೀವು ಏನು ಆಲೋಚನೆ ಮಾಡಿದ್ದೀರಿ ಎಂಬುದು ನನಗೆ ಗೊತ್ತಿದೆ.

SRI. M. VEERAPPA MOILY:- It is brotherly advise. Always you should have plan, thinking and then act. Then you don't get into problem. Otherwise, you will get into this kind of a problem. ಅದು ಮಾಡುವುದಕ್ಕೆ ಹೋಗಬೇಡಿ. ಪಾಪ ವಿರೋಧ ಪಕ್ಷದ ನಾಯಕರು he will think and act. Don't allow him to clash.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್:- ನಿಮ್ಮದು ಒಡೆದು ಆಳುವಂಥ ನೀತಿ, ಅದು ಸರಿಯಲ್ಲ.

ಡಾ: ಜೀವರಾಜ ಆಳ್ವ:- ಮಾನ್ಯ ಮೊಯ್ಲಿಯವರಿಗೆ ಇದರ ವಿಚಾರದಲ್ಲಿ ಆಳವಾಗಿ

ಗೊತ್ತಿಲ್ಲ. ಸಭಾನಾಯಕರಿಗೆ ಗೊತ್ತು, ನನಗೆ ಗೊತ್ತು, ಇಬ್ಬರಿಗೇ ಗೊತ್ತು, ಬೇರೆ ಯಾರಿಗೂ ಗೊತ್ತಿಲ್ಲ. Conscience vote, ಇದರಿಂದ ಲಾಭವಾಗಿದೆಯೇ ಅಥವಾ ಏನಾಗಿದೆ ಎಂಬುದು ನನಗೆ ಗೊತ್ತು, ಮತ್ತೆ ಅವರಿಗೆ ಗೊತ್ತು. ಇದು ನಮ್ಮ ಇಬ್ಬರಲ್ಲೇ ಇರಲಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ಸ ಮತ್ತು ರೀಸನ್ಸ್ ಮತ್ತು ನಾವು ಏನು ತಿದ್ದುಪಡಿ ತರುವುದಕ್ಕೆ ಹೊರಟಿದ್ದೇವೆ, ಅದು ಪೂರ್ತಿ ಪರಸ್ಪರ ಹೊಂದಾಣಿಕೆ ಮತ್ತು ಪರಸ್ಪರ ಪೂರಕವಾಗಿವೆ. ಏಕೆಂದರೆ, ಈಗ ಕಾನೂನಿನಲ್ಲಿ ಆಡಳಿಕಾಧಿಕಾರಿಗಳನ್ನು ನೇಮಕ ಮಾಡುವುದಕ್ಕೆ ಅಧಿಕಾರ ಇಲ್ಲ. ಈ ಕಾನೂನು ಯಾವಾಗ ಜಾರಿಗೆ ಬರುತ್ತದೆ ಎಂದು ಹೇಳಿದರೆ, ತಿದ್ದುಪಡಿ ತಂದ ಮೇಲೆ ಮಾತ್ರ ಆಡಳಿತಾಧಿಕಾರಿಗಳನ್ನು ನೇಮಕ ಮಾಡತಕ್ಕ ಅಧಿಕಾರ ನಮಗೆ ಬರುತ್ತದೆ.

SRI. D. B. CHANDRE GOWDA:- I am thankful to the Minister for Law and Parliamentary Affairs.... ಆಲೋಚನೆ ಮಾಡಿ ನಿರ್ಣಯ ಮಾಡುತ್ತೇವೆಂದು ಹೇಳಿದ್ದೀರಿ, ನೀವು ಆಲೋಚನೆ ಮಾಡಿದ್ದೀರಿ; ಸಂತೋಷ, ಆದರೆ ಏನು ಪ್ರಶ್ನೆ ಕೇಳಿದ್ದೇನೆ, ಅದರ ಬಗ್ಗೆ ಅರ್ಥ ಮಾಡಿಕೊಂಡಿದ್ದೀರಿ. ಈ ಶಾಸನವನ್ನು ತಿದ್ದುಪಡಿ ಮಾಡಿದಮೇಲೆ ನಿಮಗೆ ಆಡಳಿತಾಧಿಕಾರಿಗಳನ್ನು ಹಾಕತಕ್ಕ ಅಧಿಕಾರ ಬರುತ್ತದೆ. This is exactly my point. ಈ ಶಾಸನದಲ್ಲಿ ನಿಮಗೆ 6 ತಿಂಗಳ ಕಾಲ ಅವಧಿ ವಿಸ್ತರಿಸತಕ್ಕಂಥ ಅವಕಾಶ ಇತ್ತು. ಆ ಅವಕಾಶವನ್ನು ಬಳಸಿಕೊಂಡು ಈ ಶಾಸನ ಸಭೆಗೆ ಬಂದು ಆಡಳಿತಾತ್ಮಕ ಅಧಿಕಾರಿಯನ್ನು ನೇಮಕ ಮಾಡುವುದಕ್ಕೆ ಅವಕಾಶ ಕೊಡಿ ಎಂದು ಕೇಳಿದರೆ ,ನಾವು ಈ ಅಬ್ಜಕ್ಷನ್ ಹಾಕುತ್ತಿರಲಿಲ್ಲ. ನಮ್ಮ ಅಭ್ಯಂತರ ಏನು ಇರಲಿಲ್ಲ. ಆದರೆ ನಿಮಗೆ ಇಲ್ಲದೇ ಇರತಕ್ಕಂಥ ಅಧಿಕಾರವನ್ನು ಬಳಸಿ ಅಡ್ಮಿನಿಸ್ಟ್ರೇಟರ್‌ನ್ನು ಹಾಕಿದ್ದೀರಿ. That is the crux of the point. ಆದ್ದರಿಂದ ನೀವು ಇಲ್ಲಿ ನಿಮ್ಮ ಆಬ್ಜಕ್ಟ್ ಅಂಡ್ ರೀಸನ್ಸ್ ಹೇಳತಕ್ಕಂಥ ಮಾತು ಏನಿದೆ.

SRI. M. VEERAPPA MOILY:- I will explain that. ತಮ್ಮ ಆಲೋಚನೆಯ ಧಾಟಿ ಹಾಗೂ ದಾರಿ ಸರಿಯಾಗಿದೆ. I am not disputing about it. That is why I distinguished between the two. You have really thought about this. You are on the correct path. That is what I am telling. ತಮ್ಮ ಆಲೋಚನೆ ಕರೆಕ್ಟ್ ಇದೆ. ಈಗ ನಮಗೆ ಅಡ್ಮಿನಿಸ್ಟ್ರೇಟರ್‌ನ್ನು ಹಾಕತಕ್ಕಂಥ ಅಧಿಕಾರ ಯಾವಾಗ ಬರುತ್ತದೆ? 272(ಬಿ)ಯನ್ನು ಇನ್‌ಸರ್ಟ್ ಮಾಡಿದಾಗ ಮಾತ್ರ ಬರುತ್ತದೆ. ತಮಗೆ ಗೊತ್ತಿದೆ, ಆರ್ಡಿನೆನ್ಸ್ ಮುಖಾಂತರ ಆ ಅಧಿಕಾರ ಪಡೆದಿದ್ದೇವೆ. This is an Ordinance replacing Bill. ಆರ್ಡಿನೆನ್ಸ್‌ನಲ್ಲಿ ಅಧಿಕಾರ ಪಡೆದ ಮೇಲೆ we have appointed administrators, not before the Ordinance. ಅಡ್ಮಿನಿಸ್ಟ್ರೇಟರ್‌ನ್ನು ನಾವು ನೇಮಕ ಮಾಡಿದ್ದೇವೆ. ನೇಮಕ ಮಾಡಿದ ಮೇಲೆ ಆ ಆರ್ಡಿನೆನ್ಸ್‌ನ್ನು ಇವತ್ತು ರೆಗ್ಯುಲರೈಸ್ ಮಾಡಬೇಕು. ಅದನ್ನು ರೆಗ್ಯುಲರೈಸ್ ಮಾಡಲಿಕ್ಕೆ ಇವತ್ತು ಆರ್ಡಿನೆನ್ಸ್ ರೀಪ್ಲೇಸ್‌ಮೆಂಟ್ ಬಿಲ್ ತಂದಿದ್ದೇವೆ. ಇದು ಒಂದು ಭಾಗ. ಮತ್ತೊಂದು ಭಾಗ ಏನು ಹೇಳಿದ್ದೇವೆ? To hold elections in future we are also contemplating some more measures. You may think; nothing worng. You can think beyound this Ordinance, beyound this legislation also and

which is also provided in the statement of objects and reasons. That is an additional point. The additional pointer which is given in this Ordinance and in this legislation is, we are also contemplating some more things. That means we propose to have two packages of amendments. One package is consequential, viz., enabling the government to appoint an administrator. That is before you. There is another set of package amendment which is not before this House, but which we are going to have it immediately. We have also said we would like to hold the elections. But one thing you must appreciate is the greatest component of a democratic gesture or a commitment which you don't usually find in an Ordinance, you don't usually find in any legislation is, commitment to hold elections immediately after the second set of legislation, that means the substantive amendments which we are going to bring. That means to say, here is a legislation which I must tell it has gone beyond the periphery of an amendment which is just before you and which speaks of certain commitment on the part of the government, certain commitment of the part of this House to hold the elections immediately after the second set of amendments which we are going to bring. You must appreciate this kind of gesture. Therefore, it was considered necessary to appoint administrators to Zilla Parishads and Mandal Panchayats and to hold elections after changes contemplated to the legislation relating to Zilla Parishads and Mandal Panchyats are enacted. On the other hand, it contains and comprehends two sets of amendements, one is just before you and another is which we are going to enact. Under this we get the power for administrator. Under the other amendment, we get the power of holding election after effecting necessary amendment. Therefore, I must tell you ಇಷ್ಟು ವಿಸ್ತಾರವಾದಂತಹ ಅರ್ಥೈಸತಕ್ಕಂಥ ಅರ್ಥವುಳ್ಳ ಪರಿಣಾಮಕಾರಿಯಾಗಿರತಕ್ಕಂಥ ಸ್ಟೇಟ್‌ಮೆಂಟ್ ಅಂಡ್ ರೀಸನ್ಸ್ ಬೇಕಾಗಿರಲಿಲ್ಲ. I agree with you it was not necessary. But suppose, we have provided for some more thing or incorporated more words to read certain things beyond the comprehension of the Bill in question, I think

you are rather welcome it than say deficiency. There is no deficiency either in incorporating meaning to it, or there is no deficiency in specifying or comprehending the whole compact of the Act. ಅವರು ಹೇಳಿದ್ದು ಕರೆಕ್ಟ್, ಏಕೆಂದರೆ ಇಷ್ಟು ಬೇಕಾಗಿರಲಿಲ್ಲ. ಇಷ್ಟು ಅರ್ಥೈಸತಕ್ಕಂಥ ಅವಶ್ಯಕತೆ ಇರಲಿಲ್ಲ. ಇಷ್ಟು ವಿಸ್ತಾರವಾಗಿರತಕ್ಕಂಥ ಒಂದು ಆದರ್ಶವಾದಂತಹ ಕೆಲವು ಪ್ರಜಾಪ್ರಭುತ್ವ ಅಂಶಗಳನ್ನು ಅಳವಡಿಸಬೇಕಾದಂತಹ ಅಗತ್ಯ ಇರಲಿಲ್ಲ. I agree with you, But that doesn't mean there is deficiency that doesn't mean there is any scope for any misinterpretation. Therefore, I don't think, there is any substance, whatsoever, in the submission made. Of course, it is rightful thing. I would rather compliment the Hob'ble Opposition Leader for having cited this becase, after all, according to me, the objects and reasons which are now set out in this Bill does not come in common parlance of any Ordinance or an Act. But it has come and I would rather say such objects and reasons contribute lot of substantive spirit into an Ordinance or an Act which is rather welcome than to be negatived.

ಶ್ರೀ ಡಿ. ಬಿ. ಚಂದ್ರೇಗೌಡ:- ಮ್ಯಾಡಮ್, ನನಗೆ ಸರ್ವಜ್ಞನ ಒಂದು ಮಾತು ನೆನಪು ಬರುತ್ತದೆ. ಆತ ಏನು ಹೇಳಿದ್ದಾನೆ ಅಂದರೆ "ಮೂರ್ಖನಿಗೆ ಬುದ್ಧಿ ನೂರ್ಕಾಲ ಹೇಳಿದೊಡೆ ಗೋರ್ಕಲ್ಲಿನ ಮೇಲೆ ಮಳೆ ಸುರಿದಂತೆ ಸರ್ವಜ್ಞ"

ಶ್ರೀ ಎಂ. ಮಹದೇವ್:- ಇದು ಯಾರಿಗೆ ಅಪ್ಲೈ ಆಗುತ್ತದೆ? ಮೂರ್ಖರು ಯಾರು ಈಗ...

(ಗೊಂದಲ)

ಶ್ರೀ ಎಂ. ಮಹದೇವ್:- ಮೂರ್ಖರು ಯಾರು ಅಂತ ಸ್ಪಷ್ಟಪಡಿಸಬೇಕು...

(ಗೊಂದಲ)

ಶ್ರೀ ಎಂ. ಮಹದೇವ್:- ಮೂರ್ಖರು ಈಗ ಯಾರು ಅಂತ ಹೇಳಿ...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ನಿಮಗೆ ಕೇಳುವಷ್ಟು ಬುದ್ದಿ ಇದೆ ಎಂದು ಗೊತ್ತಾಯಿತು ಈಗ...

(ಗೊಂದಲ)

ಶ್ರೀ ಎಂ. ಮಹದೇವ್:- ಈಗ ನಮ್ಮ ವಿದ್ಯಾ ಮಂತ್ರಿಗಳು ಹೇಳಿದ್ದಾರೆ, ನಮಗೆ ತಾಳ್ಮೆ, ಸೌಜನ್ಯ ಎಲ್ಲಾ ಇದೆ ಎಂದು. ಆದರೆ ತಾವೀಗ ವಚನ ಹೇಳಿದಿರಿ; ಸರ್ವಜ್ಞನ ವಚನ ಹೇಳಲು ತಾವೇ ಪ್ರಾರಂಭ ಮಾಡಿದವರು ಅದಕ್ಕೆ ಮೂರ್ಖರು ಯಾರು ಎನ್ನುವುದು ಒಂದು ಪ್ರಶ್ನೆ ಈಗ...

ಶ್ರೀ ಡಿ. ಬಿ. ಚಂದ್ರೇಗೌಡ:- ಮೂರ್ಖರು ಯಾರು ಅಂತ ಹೇಳುತ್ತೇನೆ...

ಡಾ: ಎನ್. ಬಿ. ನಂಜಪ್ಪ:- ಚಂದ್ರೇಗೌಡ್ರೇ, ತಾವು ಸರ್ವಜ್ಞನ ವಚನವನ್ನು ತಪ್ಪಾಗಿ

ಹೇಳಿದಿರಿ. ಅದೇನೆಂದರೆ ಗೋರ್ಖಲ್ ಮೇಲೆ ಮಳೇಗೆರೆದಂತೆ ಸರ್ವಜ್ಞ ಅಂತ ಇರುವುದು ಅದು...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ಅಲ್ಲ ಅಲ್ಲ ಅದು ಗೋರ್ಖಲ್ಲ ಮೇಲೆ ನೀರ್ಕಲ್ಲ ಮಳೆ ಸುರಿದಂತೆ ಅದು ನಿಮಗೆ ಗೊತ್ತಾಗಬೇಕಾದರೆ ಪುಸ್ತಕ ಕೊಡುತ್ತೇನೆ ಓದಿ...

ಶ್ರೀ ಎನ್. ಬಿ. ನಂಜಪ್ಪ: ಅಂದ್ರೆ ಗೋರ್ಖಲ್ ಮೇಲೆ ಮಳೆ ನೀರು ಸುರಿದರೆ ಮಳೆ ನೀರನ್ನು ಅದು ಹೀರಿಕೊಳ್ಳುವುದಕ್ಕೆ ಸಾಧ್ಯವಿಲ್ಲ...

(ಗೊಂದಲ)

ಉಪಾಧ್ಯಕ್ಷಿಣಿಯವರು:- ಯಾವುದು ಸರಿ ಯಾವುದು ಸರಿ ಇಲ್ಲ ಎನ್ನತಕ್ಕಂಥ ಪ್ರಶ್ನೆ ಈಗ ಬೇಡ.

ಶ್ರೀ ಡಿ. ಬಿ. ಚಂದ್ರೇಗೌಡ:- ಮಾನ್ಯ ಉಪಾಧ್ಯಕ್ಷರೇ, ನಾವು ಶಾಸನವನ್ನು ಮಾಡುವಾಗ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಬೇಕು. ಇಲ್ಲದಿದ್ದರೆ ಶಾಸನಗಳನ್ನು ಪರಿಶೀಲನೆ ಮಾಡತಕ್ಕಂಥ ಕೋರ್ಟ್‌ಗಳು ಇವತ್ತು ಪ್ರತಿಯೊಂದು ಮಂಡಲ ಪಂಚಾಯಿತಿಗೆ ತಡೆ ಆಜ್ಞೆಗಳನ್ನು ಕೊಟ್ಟಿವೆ. ಓಹೋ ಓಹೋ ಎಂದು ಕೂತುಕೊಂಡು ಮಾತನಾಡುವುದಲ್ಲ. please try to understand. Once the Courts have gone into this question. ಇದು ಬಹಳ ಮುಖ್ಯವಾಗಿರತಕ್ಕಂಥ ಪ್ರಶ್ನೆ. ಇಲ್ಲಿ ಏನು ಹೇಳುತ್ತಾರೆ? ಈ ಶಾಸನವನ್ನು ರಚನೆ ಮಾಡತಕ್ಕಂಥ ಕಾಲದಲ್ಲಿ ತುಂಬಾ ದೀರ್ಘವಾದ ಆಲೋಚನೆಗಳು ನಡೆದಿದ್ದಾವೆ. ಈ ಆಲೋಚನೆಗಳಲ್ಲಿ ಈಗಿರತಕ್ಕಂಥ ಹೊಸ ಶಾಸಕರಿಗೆ ಅದರ ಪರಿಚಯ ಇಲ್ಲದಿದ್ದರೆ ಅದರ ಪರಿಚಯವನ್ನು ಮಾಡಿಕೊಡುತ್ತೇವೆ. ಮುಂದೆ ಬಿಲ್ ಬಗ್ಗೆ ಮಾತನಾಡುತ್ತಾ, ಮುಂದುಗಡೆ ಇರತಕ್ಕಂಥ ಬಹುತೇಕ ಸದಸ್ಯರಿಗೆ ಇದರ ಪ್ರತಿಯೊಂದು ಶಾಸನದ ಪ್ರತಿಯೊಂದು ಕಲಮುಗಳ ಬಗ್ಗೆ ಚರ್ಚೆ ಮಾಡಿದಂಥ ಕೀರ್ತಿಗೆ ಅವರೂ ಭಾಜನರಾಗಿದ್ದಾರೆ. ಆ ಕಾರಣಕ್ಕಾಗಿ ನಾವು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಒಂದು ವೇಳೆ ಅನಿವಾರ್ಯ ಕಾರಣಗಳಿಗಾಗಿ ಮಂಡಲಪಂಚಾಯಿತಿಗಳ ಚುನಾವಣೆಗಳು, ಜಿಲ್ಲಾಪರಿಷತ್ತಿನ ಚುನಾವಣೆಗಳು ನಡೆಯುವುದಕ್ಕೆ ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಇಂಥಾ ಮಂಡಲ ಪ್ರಧಾನರ ಅವಧಿ, ಮುಂದೆ ಬರತಕ್ಕಂಥ ಪ್ರಧಾನ ಬಂದು ಅವನು ಜವಾಬ್ದಾರಿಯನ್ನು ಹೊತ್ತುಕೊಳ್ಳುವವರೆಗೆ ಇವನು ಮುಂದುವರಿಯುತ್ತಾನೆ ಅನ್ನತಕ್ಕಂಥ ಒಂದು ಸಬ್ ಕ್ಲಾಸ್ ಅನ್ನು ಇದರಲ್ಲಿ ಅಳವಡಿಸಿದ್ದೇವೆ. ಇಲ್ಲಿ ತಪ್ಪಾಗಿದ್ದರೆ ತಿದ್ದಿಕೊಳ್ಳಿ 190 ಜನ ಇದ್ದೀರಿ

(ಅನೇಕ ಮಾನ್ಯ ಸದಸ್ಯರು ಮಾತನಾಡುತ್ತಿದ್ದರು)

ಉಪಾಧ್ಯಕ್ಷಿಣಿಯವರು:- ಮಾನ್ಯ ನಾಗಪ್ಪನವರೇ, ಅವರು ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

ಶ್ರೀ ಡಿ. ಬಿ. ಚಂದ್ರೇಗೌಡ:- ಸಕ್ಷನ್ 44 ಸಬ್ ಕ್ಲಾಸ್ 2 ರಲ್ಲಿ "After the expiry of his term of office the Pradhan shall continue to carry on the current duties of his office until such time as a new Pradhan shall have been elected and shall has taken over charge" ಎಂದು ಇದೆ. Every day hundreds of cases are being heard in the High Court of Karnataka. Every day number of stay

orders have been issued. Before taking up such issues, we have to go through them. I will read writ Petition No. 6386/92 in the High Court of Karnataka, at Bangalore:

"A. G. Chinnappa C/o Rangappa Gowda, Pradhan, Anewari Mandal Panchayat, Bhadravati Taluk, Shimoga District"

v/s

"The State of Karnataka, Deputy Commissioner, Anewari Mandal Panchayat and the Assistant Executive Engineer".

This is important. I am quoting from the judgement. "Pending issue of rule nisi in the aforesaid writ petition it is hereby ordered by this court on 11.3.1992 by the Hon'ble Justice P. K. Shyamsundar, that the operation of the notification dated 12.2.1992, which they are trying to amend and bring it in the form of a bill, issued by the Deputy Commissioner, Shimoga District in No. ELI 4CR 273/5/91-92, Annexure 'B' to writ petition, in so far as it relates to Anewari Mandal Panchayat, Bhadravati Taluk, and the same is hereby stayed". ಆನೆವಾರಿದು ಅಲ್ಲದಿದ್ದರೆ ಬೇರೆದೂ ಇದೆ. ಅದನ್ನು ಬೇಕಾದರೆ ಕೊಡುತ್ತೇನೆ. ಇಂಥಾದ್ದು ನೂರಾರು ಮಂಡಲಗಳಿಗೆ ಹೈಕೋರ್ಟ್‌ನವರು ಸ್ಟೇ ಕೊಟ್ಟಿದ್ದಾರೆ. ಆ ಕಾರಣ, ನೀವು ಈ ಶಾಸನಕ್ಕೆ ತಿದ್ದುಪಡಿ ತರತಕ್ಕಂಥ ಕಾಲದಲ್ಲಿ ತೀರ್ಪುಗಳನ್ನು ಗಮನದಲ್ಲಿಟ್ಟುಕೊಂಡು ಅಚ್ಚುಕಟ್ಟಾದ ಶಾಸನವನ್ನು ಮಾಡಬೇಕು. ನೀವು ನಾವು ಆಲೋಚನೆ ಮಾಡಿ ಶಾಸನ ಮಾಡೋಣ. ನಿಮಗೆ ಪಥ್ಯವಾಗದೇ ಇರಬಹುದು. ಚುನಾಯಿತ ಪ್ರತಿನಿಧಿ ಕೆಳಗಡೆ ಅಧಿಕಾರವನ್ನು ತೆಗೆದುಕೊಳ್ಳತಕ್ಕಂಥಾದ್ದು ನಿಮಗೆ ಸರಿಹೋಗದೇ ಇರಬಹುದು. ಅಧಿಕಾರಿಗಳ ಕೆಳಗಡೆ ಚುನಾಯಿತ ಪ್ರತಿನಿಧಿಗಳು ಕೆಲಸ ಮಾಡತಕ್ಕಂಥಾದ್ದು ನಿಮ್ಮ ಈಗಿನ ಪರಿಸ್ಥಿಗೆ ಒಗ್ಗದೇ ಇರಬಹುದು. ಒಂದು ದುರ್ದೈವದ ಸಂಗತಿ ಏನೆಂದರೆ ಈ ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ಈ ಸರಕಾರದವರು ಬಂದ ಮೇಲೆ ಬದಲಾವಣೆ ಮಾಡಬೇಕೆಂದು ಹೇಳುತ್ತಾ ಬಂದಿದ್ದಾರೆ.

ಶ್ರೀ ಕೆ. ಹೆಚ್. ಹನುಮೇಗೌಡ:- ಜನತಾದಳದವರು ಈ ಮಂಡಲಪಂಚಾಯತ್ ಮತ್ತು ಜಿಲ್ಲಾಪರಿಷತ್ ಬಿಲ್ ತಂದು ಯದ್ವಾತದ್ವ ಕಾರ್ಯಗತ ಮಾಡಿ 144 ಜನ ಇದ್ದವರು ಈಗ 24 ಜನ ಆಗಿದ್ದಾರೆ. ಇಷ್ಟಾದರೂ ಕೂಡ ಆ ಬಿಲ್‌ನ ಮೇಲಿನ ವ್ಯಾಮೋಹ ಏತಕ್ಕಾಗಿ ಅವರಿಗೆ ಹೋಗಿಲ್ಲ?

ಶ್ರೀ ಬಿ. ಹೆಚ್. ಬನ್ನಿಕೋಡ್:- ನಮಗೆ ಅಧಿಕಾರ ಇಲ್ಲದಿದ್ದರೂ ಚಿಂತೆ ಇಲ್ಲ, ಜನರಿಗೆ ಅಧಿಕಾರ ಕೊಡಬೇಕೆಂಬುದು ನಮ್ಮ ಉದ್ದೇಶವಾಗಿತ್ತು.

ಶ್ರೀ. ಡಿ. ಬಿ. ಚಂದ್ರೇಗೌಡ:- ಅಧಿಕಾರ ಬಂದದು ಶಾಸಕರಿಗೆ ಅಷ್ಟೇ ಅಲ್ಲ. ಸ್ವಾತಂತ್ರ ಬಂದ ಮೇಲೆ ಗಾಂಧೀಜಿಯವರು ಹೇಳಿದ ಹಾಗೆ ಚತುಸ್ತಂಭ ರಾಷ್ಟ್ರ ನಿರ್ಮಾಣವಾಗಬೇಕು. ಅಂದರೆ ಕೆಳಗಡೆ ಮಂಡಲಗಳಿಂದ ಹಿಡಿದು ಡೆಲ್ಲಿಯವರೆಗೆ ವಿಭಿನ್ನ ಹಂತದಲ್ಲಿ ಅಧಿಕಾರ ಇರಬೇಕು.

ಈ ಅಧಿಕಾರವನ್ನು ನಾವು ಶಾಸಕರು ಜೇಬಿನಲ್ಲಿ ಹಾಕಿಕೊಂಡು ಹೋಗಬಾರದು ಎನ್ನುವ ಉದ್ದೇಶ ಇತ್ತು. ನಾವು ಈಗ 24 ಇದ್ದವರು ಇಬ್ಬರಾದರೂ ಕೂಡ ಅದರಲ್ಲಿ ಮಾತ್ರ ಏನೂ ಬದಲಾವಣೆಯನ್ನು ಮಾಡುವುದಿಲ್ಲ. ನಾವು ಜನರೊಂದಿಗೆ ಅಧಿಕಾರವನ್ನು ಹಂಚಿಕೊಳ್ಳುತ್ತೇವೆ. ನಿಮ್ಮ ಹಾಗೆ ಜನರ ಅಧಿಕಾರವನ್ನು ಕಸಿದುಕೊಳ್ಳುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ:- ಈಗ ಯಾವ ಕಾನೂನನ್ನೇ ತರಲಿ, ಏನೇ ಕೆಲಸ **ಮಾಡಲಿ,** ಮಾಡುವುದನ್ನು ಜನರ ಹಿತದೃಷ್ಟಿಯಿಂದ ಮಾಡಬೇಕು. ನಾವು ಎರಡೇ ಜನ ಕುಳಿತುಕೊಳ್ಳಲಿ ಮಾಡುತ್ತೇವೆ ಎಂದು ಹೇಳುತ್ತೀರಿ. ಆದರೆ ನೀವು ಏನು ಮಾಡಿದರೂ ಅದು ಜನಗಳಿಗೆ ಒಪ್ಪಿಗೆ ಆಗಬೇಡವೇ? ಜನರ ಹಿತದೃಷ್ಟಿಯಿಂದ ಮಾಡುವ ಕೆಲಸ ಆಗಬಾರದಾ ಅದು?

ಶ್ರೀ. ಡಿ. ಬಿ. ಚಂದ್ರೇಗೌಡ:- ಹಾಗೆಂದು ಜನರಿಗೆ ಕೊಟ್ಟ ಅಧಿಕಾರವನ್ನು ಕಿತ್ತುಕೊಳ್ಳುತ್ತೀರಾ? ಈ ತೀರ್ಮಾನವನ್ನು ಯಾರು ಮಾಡುವವರು? ಶಾಸಕರೇ?

DR. Y. NAGAPPA:- You have bought it on trial and error method basis. The whole administration is collapsed. The people were unhappy. That is why we have brought this.

ಶ್ರೀ. ಡಿ. ಬಿ. ಚಂದ್ರೇಗೌಡ:- ಇದರಲ್ಲಿ ಜಿಲ್ಲಾಪರಿಷತ್‌ಗಳಿಗೆ ಮತ್ತು ಮಂಡಲ ಪಂಚಾಯತ್‌ಗಳಿಗೆ ಆಡಳಿತಗಾರರನ್ನು ನೇಮಕ ಮಾಡುವುದು ಎಂದು ಇದೆ. ಆದರೆ ನೀವು ಆಗಲೇ ನೇಮಕ ಮಾಡಿದ್ದೀರಿ? ಇಲ್ಲಿ ಮಾಡುವುದು ಎಂದು ಹೇಳಿದ್ದೀರಿ? ನೀವು ಹೀಗೆ ನೇಮಕ ಮಾಡಿ ಆ ಮೇಲೆ ಮಾಡುವುದು ಎಂದು ಹೇಳಿದ್ದೀರಿ. Madam, I will come back to the rules of Procedure and conduct of Business of this House. ಈ ರೂಲ್ಸ್ ಆಫ್ ಪ್ರೋಸೀಜರ್‌ನಲ್ಲಿ 103ರಿಂದ 111ರ ವರೆಗೆ ವಿಧೇಯಕದ ಮೇಲೆ ನಾವು ಯಾವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತಾರೆ. Form of the bill. Than, Rule 110-109. Return of the Amendment to the Originating House. This House has originated the Bill and the Bill has come back from the Upper House to a originated House. I have to explain all these things because many of my friends...

(INTERRUPTIONS)

If at all they have one...

(INTERRUPTIONS)

This bill has been brought back to this House which originated the Bill. If such a Bill is received back from the Council with amendments made in the Council or in the case of money Bills with recommendations made therein. Copies of such Bill with recommendations or Amendments shall be laid on the Table of the House at the meeting of the House. That is what we are trying to make our.

SRI. M. VEERAPPA MOILY:- Here, Rule No. 108 will

apply.

SRI. D. B. CHANDRE GOWDA:- My objection is on Rule no. 110

"As soon as possible after the Bill comes back, Motion for consideration of amendments and recommendations..." "After such a Bill as amended or recommended by the Council has been laid".

It has already been laid.

SRI. M. VEERAPPA MOILY:- No amendments. We are at this stage i.e., Rule 108.

"As soon as possible, after the Bill which is once upon passed by the House is received from the Council".

Now, received by the Council. We are here. With a message that it has not been agreed to by the House. We are at that stage. We pass the Bill again and transmit to, as passed, to the Council. The rule shall not apply to money Bills. Now, we are only at Rule 108. We are not ar Rule 109 or Rule 110, because there is no question of amendment. We have now to pass. Either to agree or not to agree with the Bill. Afterwards, it will go to Council. We are fully within the ambit or Rule 108. We are not at the stage or Rule 109 or Rule 110.

SRI M. V. VENKATAPPA:- According to 2nd para of Rule 110, a person who is incharge of the Bill he can seek a special permission of the Speaker...

(INTERRUPTIONS)

SRI. S. MALLIKARJUNA KHARGE:- I am standing on the same footing.

SRI. M. VEERAPPA MOILY:- You are correct, if the council has amended it.

SRI. D. B. CHANDRE GOWDA:- That is why I said, you have got to read the whole para, you have to read Rule 109 onwards. Return of the Amended Bill to the originating House right from there. Bills originating in the House and not agreed to by the Council. This is the headline. This is the package. Let us try to understand it. This is the whole package.

You cannot devide, one section or read sections compartmentalwise. Therefore, return of the Amended Bill to the Orginating House.

(INTERRUPTIONS)

Once if the Bill is rejected, it is also a sort of an Amendment. It is sent back for re-consideration to the originated House. So, my submission here, 'Bills orginating in the House and not agreed to by the Council'. This is the heading, - from where the beginning. So, this Bill, 'Originating in this House and not agreed to by the Council', has come back to the House which orginated the Bill. Therefore, this entire package is to read. My submission is, what was the hurry? Give a notice of 3 days. I do not know whether you have permitted to place it? The Speaker, under special circumstances, could permit and I would say, the circumstances are otherwise so far as this Bill is considered.

ನಾವು ಮುಂಗಡ ಪತ್ರದ ವಿಚಾರದಲ್ಲಿ ಶಾಸನಸಭೆಯಿಂದ ಹೊರಗಡೆ ಉಳಿದೆವು. ಉಳಿಯುವುದಕ್ಕೆ ಸಾಕಷ್ಟು ಕಾರಣಗಳನ್ನು ಹೇಳಿದ್ದೇವೆ. ಆದ್ದರಿಂದ ಇವರಿಗೆ ಬುದ್ಧಿ ಹೇಳಿ ಏನೂ ಪ್ರಯೋಜನ ಇಲ್ಲ. I am explaining the circumstances. ಆದ್ದರಿಂದ ಬುದ್ಧಿ ಹೇಳುವ ಕೆಲಸವನ್ನು ನಾವು ಬಿಡಬೇಕು. ಈ ಮೊಂಡುತನ ಮಾಡತಕ್ಕಂಥ ಈ ಒಂದು ಸರ್ಕಾರ ಏನು ಇದೆ, ಇದರ ಮೊಂಡುತನಕ್ಕೆ ಉತ್ತರವನ್ನು ಅದೇ ಭಾಷೆಯಲ್ಲೇ ಕೊಡಬೇಕು ಎನ್ನುವಂಥ ದೃಷ್ಟಿಯಿಂದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಯಂಥ ಅತ್ಯಂತ ಕ್ರಾಂತಿಕಾರಕವಾದಂಥ ಮಸೂದೆಯ ಮೇಲಿನ ಚರ್ಚೆ28ನೇ ತಾರೀಖಿಗೆ ಈ ಸಭೆಯಲ್ಲಿ ನಡೆಯುತ್ತದೆ ಎಂದು ಹೇಳು 'ತಮ್ಮ ಕಾರ್ಯಾಲಯದಿಂದ It was stated to be taken up on the floor of the House of 28th. With the total exclusion of the Opposition. ಪುನಃ ಅದನ್ನು ಮರುಪರಿಶೀಲನೆ ಮಾಡಿದ ಹಾಗೆ ಮಾಡಿ 21ನೇ ತಾರೀಖಿಗೆ ತರಬೇಕು ಎನ್ನತಕ್ಕಂಥ ಒತ್ತಡವನ್ನು ತಂದು 21ನೇ ತಾರೀಖಿನಲ್ಲಿ ಈ ಸದನದಲ್ಲಿ ಚರ್ಚೆ ಇಲ್ಲದೇ ಪಾಸ್ ಆಗಿದೆ. ಒಟ್ಟು 184 ಜನರು ಓಟು ನಮ್ಮವು ಇವೆ. ಪುನಃ ಅದಕ್ಕೆ ಎರಡು ಜನರು ಸೇರಿದರೆ 186 ಜನರು ಇದ್ದೇವೆ. ಅದಕ್ಕೆ ಚರ್ಚೆಯ ಅಗತ್ಯ ಇಲ್ಲ ಎಂದು ಹೇಳಿ ಮೂವತ್ತು ನಿಮಿಷದಲ್ಲಿ ಮತಕ್ಕೆ ಹಾಕಿಸಿದ್ದೀರಿ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ಪ್ರಿಫೋನ್ಡ್ ಮಾಡಿಕೊಂಡು ಚರ್ಚೆಯನ್ನು ಮಾಡಿದ್ದಾರೆ. ಆದ್ದರಿಂದ ನನಗೆ ಮಾತನಾಡಲು ಸಮಯ ಬೇಕು. ಮತ್ತೆ ಮರು ಪರಿಶೀಲನೆಗೆ ತೆಗೆದುಕೊಳ್ಳುವುದಕ್ಕೆ ಇದರಲ್ಲಿ ಏನು ಹೇಳಿದ್ದಾರೆ? Please come to our rescue. Let there be a three day notice. ... ನಾನು ತಮ್ಮಲ್ಲಿ ಏನು ಕೇಳುತ್ತೇನೆ, ಕನಿಷ್ಟ ಪಕ್ಷ let there be

semblance of discussion. I know with the total majority, they will have their way. Please permit me to have my say. That is my concern. I do not go beyond that. Even if you want to curtail my saying in the matter....

(INTERRUPTIONS)

SRI. D. B. CHANDRE GOWDA:- With utmost respect to the Chair, this bulldozing...

(INTERRUPTIONS)

on these two questions I need your considered ruling.

(INTERRUPTIONS)

ಶ್ರೀ ಎಂ. ವೀರಪ್ಪಮೊಯಿಲಿ:- ಮಾನ್ಯ ಉಪಾಧ್ಯಕ್ಷಿಣಿಯವರೇ, ವಿರೋಧ ಪಕ್ಷದ ನಾಯಕರೇ ಯೀಲ್ಡ್ ಆಗುವುದಿದ್ದರೆ ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೇ, ವಿರೋಧ ಪಕ್ಷದ ನಾಯಕರು ಇವತ್ತು ಕೆಲವು ವಿಚಾರಗಳು ಹೇಳಿದ್ದಾರೆ. ಈಗ ಬಿಲ್ ಮೇ ಲೆ ಅವರು ವಿಧಿಬಿಂದುವನ್ನು ಎತ್ತಿದ್ದಾರೆ. ವಿಧಿಬಿಂದುವನ್ನು ಎತ್ತಿದಮೇಲೆ ಅದನ್ನು ಸಮರ್ಥನೆ ಮಾಡುವುದಕ್ಕೆ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಎರಡನೇ ಭಾಗ ಇಲ್ಲಿ ಏನು ಬುಲ್‌ಡೋಜ್ ಮಾಡುತ್ತಿದ್ದಾರೆ ಅದಕ್ಕೆ ತಾವು ಅವಕಾಶವನ್ನುಕೊಡುತ್ತಿಲ್ಲ ಎಂದು ಹೇಳಿ ಒಂದು ತರಹದ ಅಭಿಪ್ರಾಯಕ್ಕೆ ಈ ಸದನ ಬರುತ್ತಿದೆ. ತಮಗೆ ಗೊತ್ತಿದೆ, ಅವರು ಸದನವನ್ನು ಬಹಿಷ್ಕಾರ ಮಾಡಿದ್ದರೆ ಇರಬಹುದು. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಶಾಸನ ಈ ಸದನದಲ್ಲಿ ಚರ್ಚೆಯಾಗಬೇಕು, ಮಂಜೂರಾಗಬೇಕು ಎಂದು ಆದರ ಆಹ್ವಾನವನ್ನು ವಿರೋಧಪಕ್ಷ ಎಲ್ಲಾಪಕ್ಷದ ನಾಯಕರಿಗೂ ವಿರೋಧ ಪಕ್ಷದ ನಾಯಕರಾದಂಥ ತಮಗೂ ಕೂಡಾ ಕೊಟ್ಟಿದ್ದಾರೆ. ಆಲ್ಲಿಗೆ ತಾವು ಬರಬಹುದಿತ್ತು. ಸ್ಪೀಕರ್ ಅವರು ಆಹ್ವಾನ ಕೊಟ್ಟಿದ್ದಾರೆ. ಅಲ್ಲಗೂ ಕೂಡಾ ತಾನು ಬರಲಿಲ್ಲ. ಚರ್ಚೆಗೆ ತೆಗದುಕೊಳ್ಳಬೇಕಾದರೆ ಅದಕ್ಕೆ ಯಾವಾಗ ಅವಕಾಶ ಬೇಕು ಎಂದು ಹೇಳುವುದಿದ್ದರೆ. ಅದನ್ನು ನಾವ್ಯಾರು ಒಪ್ಪದಿದ್ದರೆ ತಾವು ಮಾಡತಕ್ಕಂಥ ವಾದಕ್ಕೆ ಸಮರ್ಥನೆಯಾಗುತ್ತಿತ್ತು. ಆದರೆ ತಾವು ಬಿಸಿನೆಸ್ ಅಡ್ವೈಸರಿ ಸಮಿತಿಗೂ ಬರುವುದಿಲ್ಲ ಇಲ್ಲಿಗೂ ಕೂಡ ತಾವು ಬಹಿಷ್ಕಾರವನ್ನು ಮಾಡುತ್ತೀರಿ? ಈಗ ಸದನದ ಅಧಿಕೃತವಾದಂತಹ ಕಾರ್ಯಕಲಾಪಗಳು ನಡೆಯಬೇಕು. ಈ ಮಧ್ಯೆ ತಾವು ಅವಕಾಶ ಸಿಗಲಿಲ್ಲ, ಬುಲ್ಡೋಜ್ ಮಾಡುತ್ತೀರಿ ಅಂದರೆ ತಮ್ಮ ವಾದಕ್ಕೆ ಯಾವರೀತಿಯ ಸಮರ್ಥನೆ ಯಾವ ದೃಷ್ಟಿಯಲ್ಲಿಯೂ ಕೂಡ ಸಿಗಲಿಲ್ಲ. ಆದ್ದರಿಂದ ತಾವು ಬಿಸಿನೆಸ್ ಅಡ್ವೈಸರಿ ಕಮಿಟಿಗಾದರೂ ಬರಬಹುದು. ಸದನಕ್ಕೆ ಬಹಿಷ್ಕಾರ ಮಾಡಿದರೂ ಕೂಡ ಬಿಸಿನೆಸ್ ಅಡ್ವೈಸರಿ ಕಮಿಟಿಗಾದರೂ ಬರಬಹುದಿತ್ತಲ್ಲಾ? ತಮ್ಮ ಕರ್ತವ್ಯವನ್ನು ತಾವು ನಿರ್ವಹಣೆ ಮಾಡದೆ ಉಳಿದವರು ಕರ್ತವ್ಯ ಮಾಡಿದರೆ ಅವರ ಕರ್ತವ್ಯದ ವಿಚಾರದಲ್ಲಿ ತಾವು ಕಾಮೆಂಟ್ ಮಾಡತಕ್ಕಂಥ ನೈತಿಕ ಹಕ್ಕು ತಮಗೆ ಈ ಸಂದರ್ಭದಲ್ಲಿ ಇದೆಯೋ ಇಲ್ಲವೋ ಎಂಬ ವಿಚಾರದ ಬಗ್ಗೆ ತಾವು ಆತ್ಮ ವಿಮರ್ಶೆಮಾಡಿಕೊಳ್ಳಬೇಕು. ಎರಡನೆಯದಾಗಿ ಇಲ್ಲಿ ತಮ್ಮ ವಾದವನ್ನು ಬೆಳಸಲಿಕ್ಕೆ ಹೋಗುವವರು ಏನು ಬೇಕಾದರೂ ಹೇಳಬಹುದು. ಆದರೆ Article 197 of the Constitution says: "After a Bill has been passed by the Legislative Assembly of the State having Legislative Council and transmitted to the

Legislative Council.
ಇದರಲ್ಲಿ ಮೂರು ವಿಧಾನಗಳಿವೆ.

(a) When the Bill is rejected by the Council, ಅದಕ್ಕೆ ಒಂದು ಪ್ರೊಸೀಜರ್ ಅನ್ನು ನಮ್ಮ ನಿಯಮಗಳಲ್ಲಿ ಹೇಳಿದ್ದಾರೆ. ರಿಜೆಕ್ಟ್ ಮಾಡಿದರೆ ಏನು ಮಾಡಬೇಕು ಅಂತ ಹೇಳತಕ್ಕದ್ದು;

(b) More than three months laps on the date on which the bill is laid before the Council without the Bill is being passed.

(c) Bills passed by the Council with amendment to which the legslative assembly does not agree. The Legislative Assembly subject to the rules regulating the procedure which is laid down in Rule Nos. 108, 109 and 110 pass the Bill again in the same or any subsequent Session with or without such amendment if any as have been made, suggested or agreed to by the Legislative Council and then transmit the Bill as to be passed by the Legislative council. ರಿಜೆಕ್ಟ್ ಮಾಡಿದರೆ ಆ ಪ್ರೊಸೀಜರ್ ಏನು ಹೇಳುತ್ತದೆ, ಆ ಪ್ರಕಾರವಮಾಡಿ ಎಂದು ಆರ್ಟಿಕಲ್ 197ರಲ್ಲಿ ಹೇಳುತ್ತದೆ. Rule 108 says, for the bills which are rejected by the Council, in this case, the Bill has been rejected by the Council and which has been transmitted to this House. So, Rule 108 will have to be applied. What Rule 108 says is "As soon as possible, after a bill which is once been passed by the House received from the Council with a message that it has not been agreed to the Bill, the House may pass the Bill again and transmit it as passed by the Council". This will not apply to Money Bills. So, other rules are not applicable, only Rule 108 applicable. ರೂಲ್ 108 ಪ್ರಕಾರ ನಮಗೆ ಏನು ಪ್ರೊಸೀಜರ್ ನಿಗದಿಗೊಳಿಸಿದ್ದಾರೆ ಆ ಪ್ರಕಾರ ನಾವು ನಡೆಯಬೇಕಾಗುತ್ತದೆ. Return of the amended Bill to originating ಆರ್ಟಿಕಲ್ 197(1)(ಸಿ)ನಲ್ಲಿ ಏನು ಇದೆ? ಒಂದು ವೇಳೆ ಕೌನ್ಸಿಲ್‌ನಲ್ಲಿ ಆ ಬಿಲ್‌ಗೆ ಅಮೆಂಡ್‌ಮೆಂಟ್ ಸೂಚಿಸಿದ್ದರೆ, ಆ ಅಮೆಂಡ್‌ಮೆಂಟ್ ಇಲ್ಲಿಗೆ ಬಂದಾಗ Rule 109 ಅನ್ವಯವಾಗಬಹುದು. Rule 110 is not complementary to Rule 108. Rule 108 is exclusive and self-sufficient and it operates on its own parameters. Other rules will not apply to Rule 108. Therefore, we are strictly at Rule 108 and Rules 109 and

110 are not applicable to this case as enunciated under Article 197 of the Constitution of India and also the rules which is prescribed. ಅಂತ ಇರತಕ್ಕದ್ದು ಬಿಲ್‌ಗೆ ಅಪ್ಲೈಯಾಗುವುದಿಲ್ಲ. ಆದ್ದರಿಂದ ಏನು ವಿಧಿಬಿಂದು ಎತ್ತಿದ್ದಾರೆ, ಆ ವಿಧಿಬಿಂದು ಸ್ವಲ್ಪ ವಿಸ್ತರಣೆಯಾಗುತ್ತದೆ. ಆ ವಿಧಿಬಿಂದು ಮೇಲೆ ತಾವು ರೂಲಿಂಗ್ ಕೊಟ್ಟು ಮುಂದೆ ಈ ಬಿಲ್ಲನ್ನು ಪ್ರೊಸಸ್ ಮಾಡಲಿಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI. D. B. CHANDRE GOWDA:- Article 197 of the Constitution of India ಅನ್ನು ಪೂರ್ತಿ ಓದಿ. This is a package. It says "Bills originating in the House and not agreed to by the Council". ಒಂದು Chapter ಅನ್ನೇ ಮಾಡಿದ್ದಾರೆ. Under Chapter 2, Rule 108 is not independent of Rule 109 or Rule 110. Subject to this package ಅನ್ನತಕ್ಕದ್ದು. ಈ ಅಭಿಪ್ರಾಯವನ್ನೇ ರಾಜ್ಯಾಂಗದ ಆರ್ಟಿಕಲ್ 197ರಲ್ಲಿ ಹೇಳಿದ್ದಾರೆ. "A Bill which is rejected by the Council, (a), (b), (c)..." ಆದಾದ ನಂತರ "The Legislative Assembly, may subject to the rules regulating the procedure, pass the Bill again in the same or in the subsequent session. It is not incumbent to take it up immediately". ಏನೋ ಸಾಮ್ರಾಜ್ಯ ತಲೆ ಮೇಲೆ ಬಿದ್ದಿದೆ ಎನ್ನುವ ಹಾಗೆ ಅಲ್ಲಿ ರಾತ್ರಿ 11.00 ಗಂಟೆಗೆ ಬೀಳಿಸಿಕೊಂಡು ಇಲ್ಲಿ ಬೆಳಿಗ್ಗೆ 9.00 ಗಂಟೆಗೆ ತಂದು ಇಂಟ್ರಡ್ಯೂಸ್ ಮಾಡುವುದು. Where is the hurry? This is exactly what Article 197 says. Article 197 clearly and categorically says, give them sometime, that is, in the same session or in the subsequent session also. I am not asking for a subsequent session. I am asking for just three days notice so that I can go through the Bill in detail and try to enlighten and get myself enlightened. Another submission I would like to make is, ಸಂಸದೀಯ ವ್ಯವಹಾರ ಮಂತ್ರಿಗಳು ಬಹಳ ಬುದ್ಧಿವಂತಿಕೆಯಿಂದ ಒಂದು ಮಾತನ್ನು ಹೇಳಿದರು. ಏನೆಂದರೆ ನೀವು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬಂದು ಈ ಒಂದು ಸದನದ ವ್ಯವಹಾರದಲ್ಲಿ ಯಾವ ರೀತಿ ನಡೆದುಕೊಳ್ಳಬೇಕಾಗಿತ್ತು ಎಂಬ ಬಗ್ಗೆ; ನಾನು ಬರದೇ ಇರುವುದಕ್ಕೆ ಕಾರಣವನ್ನು ಈಗ ಹೇಳಲೇಬೇಕಾದ ಪ್ರಸಂಗ ಬಂದಿರುವುದರಿಂದ ನಾನು ಹೇಳುತ್ತೇನೆ. ತಾವು ಕೇಳಿದ್ದರಿಂದ ನಾನು ಹೇಳುತ್ತಿದ್ದೇನೆ. Because it has gone to the record. ನಾವು ಪದೇ ಪದೇ ಹೇಳಿದ್ದೇವೆ. ಈಗ ಮತ್ತೊಂದು ಸಾರಿ ಹೇಳುತ್ತೇನೆ. ನಮಗೆ ಸ್ವಾತಂತ್ರ್ಯ ಬಂದ ನಂತರ ಜಗತ್ತಿನ ಪ್ರಜಾತಂತ್ರದ ಇತಿಹಾಸದಲ್ಲಿ ಎಲ್ಲಿಯೂ ಕೇಳರಿಯದ, ಕಂಡಿಲ್ಲದೆ ಇರತಕ್ಕಂಥ ಒಂದು ಪ್ರಸಂಗ ಈ ರಾಜ್ಯದಲ್ಲಿ ನಡೆಯಿತು. ಸರ್ಕಾರ ಒಂದು ಕಡೆ, ಜನತಂತ್ರ ವ್ಯವಸ್ಥೆ ಒಂದು ಕಡೆ, ವ್ಯಕ್ತಿ ಮತ್ತೊಂದು ಕಡೆ. ಜನ ತಂತ್ರದ ವ್ಯವಸ್ಥೆಯನ್ನು ಭದ್ರ ಮಾಡಬೇಕೆನ್ನುವಂಥ ಇಚ್ಛೆ ನಿಮಗೂ ಇದ್ದರೆ, ನಾನು ಇಲ್ಲದೇ ಇರುವುದರ ಬಗ್ಗೆ ನನ್ನದೇ ರೀತಿಯಲ್ಲಿ ಸಾರ್ವಜನಿಕರಿಗೆ ಹೇಳುತ್ತೇನೆ. ನನ್ನ ರೀತಿ ಏನೆಂದರೆ ಇಲ್ಲಿ ಅಪರಾಧವಾಗಿದೆ. ನಾನು

ಇಲ್ಲಿ ಪಾಲ್ಗೊಳ್ಳುವುದರಿಂದ ಈ ಜನ ತಂತ್ರ ಶಿಥಿಲವಾಗುತ್ತದೆ. ಆದುದರಿಂದ, ನಾನು ಅಲ್ಲಿ ಬರುವುದಿಲ್ಲ, ನಾನು ಈ ಒಂದು ಅಪರಾದದಲ್ಲಿ ಪಾಲುದಾರನಾಗುವುದಿಲ್ಲ ಅಷ್ಟೇ; ಸಾರ್ವಜನಿಕರಿಗೆ ಅಪರಾಧವಾಗಿದೆಯೇ ಎಂದು ನಾನು ಕೇಳುವುದಿಲ್ಲ. ನಾನು ಕೇಳುದಾದರೂ ಏನು? ಅವೊತ್ತು ನಾನು ಕೇಳಿದ್ದಾದರೂ ಏನೆಂದರೆ ತಮ್ಮಿಂದ ಬಂದಂಥ ಆದೇಶ ಏನಿದೆ, ನಮ್ಮ ಪ್ರೊಸಿಜರ್ ಪ್ರಕಾರ ಬಜೆಟ್ ಲೀಕೇಜ್ ಆಗಿದೆ ಎನ್ನತಕ್ಕಂಥಾದ್ದರ ಬಗ್ಗೆ ತಾವು ಅಪ್ಪಣೆ ಕೊಡಿಸಿದ್ದೀರಿ. The speaker of the Legislative Assembly has ruled that the leakage of the Budget is complete. Therefore ಅಧ್ಯಕ್ಷರು ನಮಗೆ ಮತ್ತೊಮ್ಮೆ ಅಪ್ಪಣೆ ಕೊಡಿಸಿ, ಇದನ್ನು ನಾನು ಎನ್‌ಕ್ವೈರಿ ಮಾಡಿಸುತ್ತೇನೆ ಎಂದರು. ನಾನು ಈ ಮಾತನ್ನು ಬಹಳ ಜವಾಬ್ದಾರಿಂದ ಹೇಳುತ್ತಿದ್ದೇನೆ. If you so want, I am prepared to quote the what Speaker has said. He has said, "I am going to get the matter enquired into about the circumstances which led to the leakage of the Budget".

(INTERRUPTIONS)

MADAM DEPUTY SPEAKER:- What is the point that you are making?

(INTERRUPTIONS)

MADAM DEPUTY SPEAKER:- Come to the point of order.

SRI. D. B. CHANDRE GOWDA:- I was precise in the point of order. But the Hon'ble Minister for Parliamentary Affairs stated that I did not want to participate in the Business Advisery Committee meeting. My non-participation in the Business Advisory Committee is for the best reason known to the Chair itself because the Chair has rules that it is going to enquire into the circumstances leading to the leakage of the Budget..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಲೀಕೇಜ್ ಆಗಿದೆ ಎಂದು ಅವರು ಹೇಳಲಿಲ್ಲ.

(ಗೊಂದಲ)

SRI. D. B. CHANDRE GOWDA:- I have gone on record and the Speaker himslef has said that the Budget has leaked. You have no business to say that.

SRI. M. VEERAPPA MOILY:- It is quite revealing. ನನಗೆ ಈಗ ವಿರೋಧ ಪಕ್ಷದ ನಾಯಕರ ಉದ್ದೇಶವೇನೆಂದು ಸ್ಪಷ್ಟವಾಯಿತು. ನಾವೇ ಒಂದು ಗೊಂದಲದಲ್ಲಿ ಬಿದ್ದಿದ್ದೆ, ನನಗೆ ಇಲ್ಲಿಯವರೆಗೆ ಏನು ಅರ್ಥವಾಗಿತ್ತು ಎಂದರೆ to be frank, I must have been wrong in my understanding. ತಾವೇ ವಿಚಾರಣೆಗೆ

ವಿರೋಧವಾಗಿದ್ದೀರೆಂದು ಅಭಿಪ್ರಾಯವಿತ್ತು, ಆದರೆ ಬಜೆಟ್ಟಿನ ಲೀಕೇಜ್ ಬಗ್ಗೆ, ವಿಚಾರಣೆಗೆ ತಾವೇ ವಿರೋಧವಾಗಿದ್ದೀರೆಂದು ಅಭಿಪ್ರಾಯವಾಯಿತು. ಏಕೆಂದರೆ ತಾವು ಇಲ್ಲಿ ಈ ವಿಚಾರವನ್ನು ಚರ್ಚೆ ಮಾಡುತ್ತಿರುಹಾಗ ಒಂದು ನಿರ್ಣಯವನ್ನು ತಂದಿರಿ, ಬಜೆಟ್ಟಿನ ಲೀಕೇಜ್ ಬಗ್ಗೆ ಒಂದು ಸೂಚನೆಯನ್ನು ತಂದಿರಿ. ಆಗ ಸನ್ಮಾನ್ಯ ಮುಖ್ಯಮಂತ್ರಿಗಳು ನಾನು ಬೇಕಾದರೆ ಇದರ ಬಗ್ಗೆ ವಿಚಾರಣೆ ಮಾಡುತ್ತೇವೆ, ತಾವು ಈ ಸೂಚನೆಯನ್ನೇ ಮುಂದುವರಿಸಿಕೊಂಡು ಹೋಗಬೇಡಿ ಎನ್ನತಕ್ಕ ಮಾತನ್ನು ಈ ಸದನದಲ್ಲಿಯೇ ಹೇಳಿದರು, ಅದಕ್ಕೆ ತಾವು ಒಪ್ಪಲಿಲ್ಲ. ಆದರೆ ತಮ್ಮ ಸೂಚನೆಯನ್ನೇ ಮುಂದುವರೆಸಿಕೊಂಡು ಹೋದಿರಿ.

SRI D. B. CHANDRE GOWDA:- Please put the records straight. ಒಪ್ಪಲಿಲ್ಲವೆಂದು ಹೇಳಬೇಡಿ.

SRI. M. VEERAPPA MOILY:- The offer was given to you; ಅವರು ಕೊಟ್ಟಂತಹ ಆಹ್ವಾನವನ್ನು you have rejected.

(INTERRUPTIONS)

SRI. D. B. CHANDRE GOWDA:- No. It is you and your Government which has deceived.

SRI. M. VEERAPPA MOILY:- You have rejected the offer.

ಶ್ರೀ ಬಿ. ಹೆಚ್. ಬನ್ನಿಕೋಡ್:- ಮುಖ್ಯಮಂತ್ರಿಗಳು ಆ ರೀತಿ ಒಪ್ಪಿಕೊಂಡಿಲ್ಲ. ಅವರು ಆ ರೀತಿ ಆದೇಶವನ್ನು ಕೊಟ್ಟಿಲ್ಲ. ಅವರು ಆ ರೀತಿ ಆಶ್ವಾಸನೆಯನ್ನು ಕೊಟ್ಟಿಲ್ಲ. ಅವರು ಅದರ ಬಗ್ಗೆ ವಿಚಾರಣೆಗೆ ಒಪ್ಪಿಕೊಳ್ಳಲಿಲ್ಲ.

(ಗೊಂದಲ)

ಶ್ರೀ. ಎಂ. ವೀರಪ್ಪ ಮೊಯಿಲಿ:- ಶ್ರೀಮಾನ್ ಬನ್ನಿಕೋಡ್‌ರವರಿಗೆ ಈ ಸದನದ ಯಾವ ನಿಯಮಗಳು ಅನ್ವಯವಾಗುವುದಿಲ್ಲ, ಈ ಪ್ರಜಾಪ್ರಭುತ್ವದ ಯಾವ ಸಂಪ್ರದಾಯವೂ ಕೂಡ ಅವರಿಗೆ ಅನ್ವಯವಾಗುವುದಿಲ್ಲ. ಅವರ ನಾಯಕರು ಎದ್ದು ನಿಂತಾಗ, ನಾನು ಎದ್ದು ನಿಂತಾಗ ಅವರೂ ಎದ್ದು ನಿಂತು ಮಾತನಾಡುತ್ತಾರೆ. ಈಗ ವಿರೋಧ ಪಕ್ಷದ ನಾಯಕರು ಸನ್ಮಾನ್ಯ ಅಧ್ಯಕ್ಷರು ವಿಚಾರಣೆಗೆ ಒಪ್ಪಿಕೊಂಡಿದ್ದಾರೆಂದು ಹೇಳುತ್ತಿದ್ದಾರೆ. ಅದು ಏನಿದ್ದರೂ ಸಭಾಧ್ಯಕ್ಷರಿಗೂ ವಿರೋಧ ಪಕ್ಷದ ನಾಯಕರಿಗೂ ಬಿಟ್ಟಿರತಕ್ಕ ವಿಚಾರ. ಅದರ ಮೇಲೆ ಏನು ಕಮಿಟ್ ಆಗಿದ್ದಾರೆ, ಅದು ಅವರಿಗೇ ಬಿಟ್ಟಿದ್ದು.

ಶ್ರೀ ಡಿ. ಬಿ. ಚಂದ್ರೇಗೌಡ:- ಅಧ್ಯಕ್ಷರ ತೀರ್ಮಾನ ನಮಗೆ ನಿಮಗೆ ಮಾತ್ರವಲ್ಲ, ಅದು ಇಡೀ ಸದನಕ್ಕೆ ಅನ್ವಯವಾಗಿರುತ್ತದೆ.

MADAM DEPUTY SPEAKER:- I request you to come to the point of order.

ಶ್ರೀ ಡಿ. ಬಿ. ಚಂದ್ರೇಗೌಡ:- ಸನ್ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಏನು ಹೇಳಿದ್ದಾರೆಂದರೆ ಎನ್‌ಕ್ವೈರಿ ಮಾಡಿಸುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಅವರು ಪಾಯಿಂಟ್ ಆಫ್ ಆರ್ಡರ್ ಮೇಲೆ ಹೇಳಲಿ, ಬೇರೆ ಯಾವುದೂ ಈಗ ಬೇಡ.

(ಗೊಂದಲ)

ಉಪಾಧ್ಯಕ್ಷಿಣಿಯವರು:- ಆ ವಿಷಯ ಮುಗಿದುಹೋಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷಿಣಿಯವರೇ, ಅವರು ಪಾಯಿಂಟ್ ಆಫ್ ಆರ್ಡರ್ ಮೇಲೆ ಮಾತನಾಡಲಿ.

ಶ್ರೀ ಡಿ. ಬಿ. ಚಂದ್ರೇಗೌಡ:- ಸನ್ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳಿಗೆ ಹೇಳಬೇಕೆಂದರೆ, ಸ್ಪೀಕರ್ ಕೊಟ್ಟಂತಹ ತೀರ್ಪು ಏನಿದೆ, it is on record.

(ಗೊಂದಲ)

ಉಪಾಧ್ಯಕ್ಷಿಣಿಯವರು:- ದಯವಿಟ್ಟು ಕುಳಿತುಕೊಳ್ಳಿ. ಈಗ ನಾವು ನಮ್ಮ ಸಭೆಯ ಮುಂದೆ ಇರತಕ್ಕಂಥ...

SRI M. VEERAPPA MOILY:- I would like to clarify; ಈ ಸದನದಲ್ಲಿ ಅಧ್ಯಕ್ಷರು ಏನು ಆದೇಶ ಕೊಟ್ಟಿದ್ದಾರೆ, ಏನು ತೀರ್ಪು ಕೊಟ್ಟಿದ್ದಾರೆ, ಅದಕ್ಕೆ ನಾವೆಲ್ಲಾ ಬದ್ಧರಿದ್ದೇವೆ. There is no reflection on the Chair. The question is very simple. We are bound by it. Usually we will have some discussion in the Chamber. If the Speaker has promised that the enquiry will be done, we are all bound by it. We are not about disputing it. There is no point, because I said in the intention. I said, if there is a discussion on that, it is between you to clarify but we are bound by it. If the Speaker has given any ruling,, we are always bound by it. I think that need not be mis-interpreated in another way.

ಉಪಾಧ್ಯಕ್ಷಿಣಿಯವರು:- ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಎತ್ತಿದತಕ್ಕಂಥ ಪಾಯಿಂಟ್ ಆಫ್ ಆರ್ಡರ್ ಬಗ್ಗೆ ಮಾನ್ಯ ಕಂದಾಯ ಸಚಿವರು ಮತ್ತು ನಮ್ಮ ಪಾರ್ಲಿಮೆಂಟರಿ ಮಿನಿಸ್ಟರ್ ಆ ಕಡೆಯಿಂದ ಈ ಕಡೆಯಿಂದ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಇದರಲ್ಲಿ ಯಾವ ಪಾಯಿಂಟ್ ಆಫ್ ಆರ್ಡರ್ ಇಲ್ಲದೇ ಇರುವುದರಿಂದ ನಾನು ಮಾನ್ಯ ಮಂತ್ರಿಗಳಿಗೆ ವಿಧೇಯಕವನ್ನು ಸಭೆ ಪುನಃ ಪರಿಶೀಲಿಸಲು ಸೂಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ 1992.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೇ, 1992ರ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತೆಗಳು ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ (ವಿಧಾನ ಪರಿಷತ್‌ನಿಂದ ತಿರಸ್ಕೃತವಾಗಿರುವ)ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ(ಕಂದಾಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್

ರಾಜ್ ಸಚಿವರು):- ಮಾನ್ಯ ಉಪಾಧ್ಯಕ್ಷಿಣಿಯವರೇ, ಈಗಾಗಲೇ ಶ್ರೀಮಾನ್ ಚಂದ್ರೇಗೌಡರು ಸಾಕಷ್ಟು ಇದರ ಬಗ್ಗೆ ಮಾತನಾಡಿದ್ದಾರೆ ಮತ್ತು ನಮ್ಮ ಸದನದಲ್ಲೂ ಕೂಡ ಈ ಅಮೆಂಡ್‌ಮೆಂಟ್ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಇದರಲ್ಲಿ ಹೊಸ ವಿಷಯಗಳು ಯಾವುದೂ ಕೂಡ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ನಾನು, ತರುವುದು ಏನೆಂದರೆ, ಕರ್ನಾಟಕ ಜಿಲ್ಲಾ ಪರಿಷತ್‌ಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಅಕ್ಟ್, 1986 ಏನಿದೆ, ಇದು ತಮ್ಮ ಕಾಲದಲ್ಲಿ ತಮ್ಮ ಸರ್ಕಾರ ಇದ್ದಾಗ ರಚಿತವಾಗಿದ್ದು, ನಾವು ಕೂಡ ಇದರಲ್ಲಿ ಭಾಗಿಗಳಾಗಿ ಒಮ್ಮತದಿಂದ ಇದನ್ನು ಪಾಸ್ ಮಾಡುವುದಕ್ಕೆ ಕೆಲವು ಸಲ ನಾವು ಪ್ರಯತ್ನ ಮಾಡಿದ್ದೇವೆ. ಅದರಲ್ಲೂ ಕೂಡ ಯಾವಾಗ ಪೀರಿಯಡ್ ಎಕ್ಸ್‌ಪೈರ್ ಆದರೆ ಅಥವಾ ಚುನಾವಣೆಗಳು ಮುಂದೆ ಹೋದರೆ ಅಥವಾ ಚುನಾವಣೆಗಳು ಕಾರಣಾಂತರದಿಂದ ನಡೆಯದೇ ಹೋದಾಗ ಯಾವ ಪದ್ಧತಿಗಳನ್ನು ಅನುಸರಿಸಬೇಕೆನ್ನುವುದನ್ನು ಸೆಕ್ಷನ್ 8ರಲ್ಲಿ ಮಂಡಲ ಪಂಚಾಯತ್‌ಗಳ ಬಗ್ಗೆ ಅವರು ಹೇಳಿದ್ದಾರೆ."Appointment of an administrative committee or administrator on failure to elect members of mandal panchayats...".

This is one aspect."If the Deputy Commissioner is satisfied that a mandal panchayat of a mandal immediately after the establishment of such mandal panchayats cannot be constituted by reason of any difficulty in holding election of the members of the mandal panchayat or failure to elect such members at two successive elections under sub-section (7) any other sufficient reasons whatsoever or if at any general election to a mandal panchayat, no member is elected or less than one half of the total members are elected or if the term of outgoing members of the mandal panchayars has expired and it has not been possible to complete the general election to the mandal panchayat before the expiry of the term, the Deputy Commissioner shall by notification either appoint an administrative committee consisting of persons qualified to be elected, the number of such persons being equal to the number of members determined under sub-section (1) of Section (5) or appoint an Administrator". ಅಂದರೆ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು ಅನ್ನತಕ್ಕಂಥ ತತ್ತ್ವ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತ್ ಆಕ್ಟ್‌ನಲ್ಲಿದೆ. ಮಂಡಲ ಪಂಚಾಯಿತಿಗಳಿಗೆ ಅಡ್ಮಿನಿಸ್ಟ್ರೇಟರ್ ಅವರನ್ನು ನೇಮಕ ಮಾಡಬಹುದು ಅಂಥ ತತ್ತ್ವ ಇದ್ದರೆ ಜಿಲ್ಲಾ ಪರಿಷತ್‌ಗಳಿಗೆ ಅದು ಇರಲಿಲ್ಲ. ಅದಕ್ಕೆ ನಾವು ತಿದ್ದುಪಡಿ ತಂದರೆ ನಾವು ಅಂಟಿ ಡೆಮೋಕ್ರಾಟಿಕ್ ಎಂದು ಹೇಳುತ್ತದೆ. ಇವತ್ತು ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಮತ್ತು ಕಾರ್ಪೊರೇಷನ್ ಆಕ್ಟ್‌ನಲ್ಲಿ ಅಡ್ಮಿನಿಸ್ಟ್ರೇಟರ್ ಅವರನ್ನು ಅಪಾಯಿಂಟ್‌ಮೆಂಟ್ ಮಾಡತಕ್ಕಂಥ ಪ್ರಾವಿಷನ್ ಇದೆ. ಈಗ

ಮಂಡಲ ಪಂಚಾಯಿತಿಯಲ್ಲಿ ಪ್ರಾವಿಷನ್ ಇದ್ದರೆ ಜಿಲ್ಲಾ ಪರಿಷತ್‌ನಲ್ಲಿ ಈ ಪ್ರಾವಿಷನ್ ಇಲ್ಲದಿರುವುದರಿಂದ ಆ ಪ್ರಾವಿಷನ್ ನಾವು ಮಾಡಿಕೊಂಡರೆ ಇವತ್ತು ನಾವು ಆಂಟಿ ಡೆಮೊಕ್ರಾಟಿಕ್, ಮರ್ಡರ್ ಆಫ್ ಡೆಮಾಕ್ರಸಿ, ಡಿಸೆಂಟ್ರಲೈಜೇಷನ್‌ನಲ್ಲಿ ಇವರಿಗೆ ವಿಶ್ವಾಸವಿಲ್ಲ, ಪಂಚಾಯತ್‌ರಾಜ್‌ನಲ್ಲೂ ವಿಶ್ವಾಸವಿಲ್ಲ. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ತೆಗದುಹಾಕಬೇಕೆಂದು ಮಾತನಾಡುತ್ತಿದ್ದಾರೆ., ಹಾಗೂ ಅನೇಕ ರೀತಿಯ ಆಪಾದನೆಗಳನ್ನು ಮಾಡುತ್ತಿದ್ದಾರೆ. ಅಂದರೆ, ಈ ವ್ಯವಸ್ಥೆಯನ್ನು ನೀವು ಏಕೆ ಅಳವಸಿಕೊಂಡಿರಿ? ಈ ವ್ಯವಸ್ಥೆಯನ್ನು ಯಾವ ಕಾರಣಕ್ಕಾಗಿ ಅಳವಡಿಸಿಕೊಂಡಿರಿ? ಈವತ್ತು ಎಲ್ಲಿ ಜಿಲ್ಲಾ ಪರಿಷತ್ತಿಗೆ ಸಮಯ ಮುಗಿದಿದೆ, ಅಲ್ಲಿಗೂ ಕೂಡ ಈ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಹೇಳಿ ನಾವು ಮಾಡುವಾಗ, ಇವತ್ತಿನ ದಿವಸ ಇದಕ್ಕೆ ನೀವು ವಿರೋಧ ವ್ಯಕ್ತಪಡಿಸುತ್ತಿದ್ದೀರಿ. ಮೊದಲು ನಮ್ಮ ಸ್ಟೇಟ್‌ಮೆಂಟ್ ಆಫ್ ಅಬ್ಜಕ್ಟ್ ಅಂಡ್ ರೀಸನ್‌ಗೆ ಅಬ್ಜಕ್ಷನ್ ಮಾಡಿದರು. ಆಮೇಲೆ ನಾವು ತಂದಂಥ ಅಮೆಂಡ್‌ಮೆಂಟ್ ಸರಿಯಾಗಿಲ್ಲ, ಇದು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧ, ಇದು ಪಂಚಾಯಿತ ಸಿಸ್ಟಮ್‌ಗೆ ವಿರುದ್ಧ ಅನ್ನತಕ್ಕಂಥ ಆಪಾದನೆ ಕೂಡ ಮಾಡಿದರು. ಈಗ ಅನೇಕ ಕಾನೂನುಗಳಲ್ಲಿ ಇದೂ ಸಹ ಒಂದಾಗಿದೆ. ಈ ಜಿಲ್ಲಾ ಪರಿಷತ್ ಆಕ್ಟ್‌ನಲ್ಲಿ ಮಾತ್ರ ಅಂತಹ ಸೆಕ್ಷನ್ ಇಲ್ಲ ಅಂಥ ಹೇಳಿ, ಆ ಒಂದು ಸೆಕ್ಷನ್ ಅನ್ನು ಮಾತ್ರ ನಾವು ತಿದ್ದುಪಡಿಗಾಗಿ ತಂದಿದ್ದೇವೆ ಹೊರತಾಗಿ ಅದರಿಂದ ಯಾವ ತೊಂದರೆ, ತಾಪತ್ರಯ ಅಥವಾ ಈಗಿನ ವ್ಯವಸ್ಥೆಯನ್ನು ಬದಲಾಯಿಸತಕ್ಕಂಥದ್ದು ಏನೂ ಇಲ್ಲ. ಮತ್ತೆ ನಾವು ಈ ಮನೆಯಲ್ಲಿ ಆಶ್ವಾಸನೆಯನ್ನು ಕೂಡ ಕೊಟ್ಟಿದ್ದೇವೆ. 1991ರ ಸೆನ್ಸಸ್ ಪ್ರಕಾರ ನಾವು ಚುನಾವಣೆ ನಡೆಸುತ್ತೇವೆ. ಕಾನ್‌ಸ್ಟಿಟ್ಯೂಯನ್ಸಿ ಡೀಲಿಮಿಟೇಶನ್ ಮಾಡಿ ಚುನಾವಣೆ ನಡೆಸುತ್ತೇವೆ. ಈಗ ಅನೇಕ ಕಾನ್‌ಸ್ಟಿಟ್ಯೂಯನ್ಸಿಗಳು ದೊಡ್ಡದಾಗಿವೆ. ಅದನ್ನೂ ಕೂಡ ನಾವು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕೆಲವು ಜಾತಿಗಳನ್ನು ಸೇರಿಸುವ ಬಗ್ಗೆ ಹೊಸದಾಗಿ ಲಿಸ್ಟ್ ಮಾಡಿ ಗೌರ್ನಮೆಂಟ್ ಆಫ್ ಇಂಡಿಯಾಕ್ಕೆ ಕಳುಹಿಸಿದ್ದೇವೆ. ಅದರ ಆಧಾರದ ಮೇಲೆ ನಾವು ಚುನಾವಣೆ ನಡೆಸುತ್ತೇವೆ ಅಂಥ ಹೇಳಿ ಒಂದಲ್ಲ ಅನೇಕ ಕಾರಣಗಳನ್ನು ಕೊಟ್ಟರೂ ಕೂಡ ಇದು ಸರಿಯಲ್ಲ, ನಾವು ಒಪ್ಪವುದಿಲ್ಲ, ನೀವು ಬೇಕೆಂದೇ ಮುಂದಕ್ಕೆ ಹಾಕುತ್ತಿದ್ದೀರಿ, ಇದು ಕುಂಟು ನೆಪ ಅನ್ನತಕ್ಕಂಥ ಅನೇಕ ಆಪಾದನೆಗಳನ್ನು ಮಾಡಿದ್ದಾರೆ ಮತ್ತು ನಾವು ಒಂದು ವರ್ಷಕ್ಕಾಗಿ ಎಂದು ಹೇಳಿ ನೋಟಿಫಿಕೇಷನ್ ಮಾಡಿದ್ದೇವೆ. ಇದಕ್ಕಿಂತ ಕ್ಲಿಯರ್ ಆಗಿ ಸ್ಪಷ್ಟವಾಗಿ ಯಾವ ಕಾರಣಗಳನ್ನು ಕೊಡಬೇಕೆಂದು ನಮಗೆ ಅರ್ಥವಾಗುವುದಿಲ್ಲ. ಇವತ್ತು ನಿಮ್ಮ ಸೆಕ್ಷನ್8ರಲ್ಲಿ ಪ್ರಾವಿಷನ್ ಮಾಡಿಕೊಂಡಿರಿ. ಅದನ್ನೇ ನಾವು ಜಿಲ್ಲಾ ಪರಿಷತ್‌ಗಳಿಗೆ ಎಕ್ಸ್‌ಟೆಂಡ್ ಮಾಡುತ್ತೇವೆ ಅಂದರೆ ನೀವು ಒಂದು ಆರು ತಿಂಗಳು ಎಕ್ಸ್‌ಟೆಂಡ್ ಮಾಡಿದ್ದರೆ ನಿಮ್ಮದು ಏನು ಗಂಟು ಹೋಗುತ್ತಿತ್ತು, ಆ ರೀತಿ ಏತಕ್ಕೆ ಮಾಡಲಿಲ್ಲ ಅಂಥ ಹೇಳುತ್ತೀರಿ. Alright, for any reasons, six monthsನಲ್ಲಿ ಚುನಾವಣೆ ಆಗದಿದ್ದರೆ ಅದಕ್ಕೆ ಅನೇಕ ಕಾರಣಗಳು ಇರುತ್ತವೆ. ಆಗ ಏನು ಮಾಡಬೇಕು? ಯಾಕೆಂದರೆ, ನಿಮ್ಮ ಸರ್ಕಾರ ಬಂದ ಮೇಲೂ ಕೂಡ ಇಮಿಡಿಯೇಟ್‌ಆಗಿ ಮುನಿಸಿಪಾಲಿಟಿಗಳಿಗೆ ಎಲೆಕ್ಷನ್ ಆಗಲಿಲ್ಲ. ಹೀಗೆ ಅನೇಕ ಸಲ ನಾವು ಟೈಮ್ ತೆಗೆದುಕೊಳ್ಳುತ್ತೇವೆ. ಅನೇಕ ಕೋ-ಆಪರೇಟಿವ್ ಸೊಸೈಟಿಗಳನ್ನು ಸೂಪರ್‌ಸೀಡ್ ಮಾಡಿ ಅಲ್ಲಿಗೆ ಅಡ್ಮಿನಿಸ್ಟ್ರೇಟರ್ ಅನ್ನು ಹಾಕಿದ ತಕ್ಷಣ ಎಲೆಕ್ಷನ್ ಮಾಡುವುದಿಲ್ಲ. ಕಾರಣಾಂತರದಿಂದ ಇನ್ನೂ ಒಂದೆರಡು ತಿಂಗಳು ಮುಂದೆ ಹೋಯಿತು ಅಂಥ ತಿಳಿದುಕೊಳ್ಳಿ. ಆಗ ಏನಾದರೂ ಒಂದು ಪ್ರಾವಿಷನ್ ಬೇಕಲ್ಲಾ ಇಲ್ಲಿ. ಯಾವ ರೀತಿಯಾಗಿ ಒಂದು ಮಂಡಲದಲ್ಲಿ, ಒಂದು ಪಂಚಾಯಿತಿಯಲ್ಲಿ, ಕೋ-ಆಪರೇಟಿವ್

ಆಕ್ಟ್‌ನಲ್ಲಿ, ಮುನಿಸಿಪಾಲಿಟಿಯಲ್ಲಿ, ಕಾರ್ಪೊರೇಷನ್ ಆಕ್ಟ್‌ನಲ್ಲಿ ಮಾಡಿಕೊಂಡಿದ್ದೀರಿ, ಆ ರೀತಿಯಾಗಿ ಇಲ್ಲಿ ಸಹ ಬೇಕೇ ಬೇಕು. ಆದ್ದರಿಂದ ನಾವು ಒಂದು ಸಣ್ಣ ತಿದ್ದುಪಡಿಯನ್ನು ತಂದಾಗ ಅದರ ಮೇಲೆ ಈ ಮನೆಯಲ್ಲಿ ಮತ್ತು ಆ ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಕೂಡ ತಯಾರಾಗಲಿಲ್ಲ. ಈ ಬಿಲ್ಲು ಚರ್ಚೆಯಾಗಲಿಲ್ಲ, ಹಾಗೇ ಹೋಗುತ್ತದೆಂದರೆ ಹೇಗೆ? ಸಮಗ್ರವಾದ ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ. 72ನೇ ತಿದ್ದುಪಡಿ ಇವತ್ತು ಪಾರ್ಲಿಮೆಂಟಿನ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದಿದೆ. ಅದರ ಆಧಾರದ ಮೇಲೂ ನಾವು ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಒಂದು ಸಮಗ್ರವಾದ ತಿದ್ದುಪಡಿಯನ್ನು ತರುತ್ತೇವೆ. ಆದುದರಿಂದ ತಾವು ಕೂಡ ಸಲಹೆಗಳನ್ನು ಕೊಡಬೇಕು. ತಮ್ಮ ಒಳ್ಳೆಯ ಸಲಹೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸರ್ಕಾರ ಒಂದು ಕಾನೂನನ್ನು ಜಾರಿಗೆ ತರುತ್ತದೆ. ಇದೇ ಮನೆಯಲ್ಲಿ ಪಾಸ್ ಆಗಿ ಹೋದಂಥ ಈ ಬಿಲ್‌ಗೆ ಆ ಮನೆಯಲ್ಲಿ ಮೆಜಾರಿಟಿ ಇದೆ ಎಂದು ತಿರಸ್ಕಾರ ಮಾಡಿತು. ಅದನ್ನು ಪುನಃ ನಾನು ಈ ಸದನಕ್ಕೆ ತಂದಿದ್ದೇನೆ. ಈ ಮನೆಯಲ್ಲಿ ಇದಕ್ಕೆ ಮನ್ನಣೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಎಲ್ಲಾ ಮಾನ್ಯ ಸದಸ್ಯರಲ್ಲಿಯೂ ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ:- ನಮಗೆ ಸ್ವಲ್ಪ ಅವಕಾಶ ಸಿಕ್ಕಿದ್ದರೆ ಅಥವಾ ನೀವು ಅವಕಾಶ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ನೀವು ಕೊಡುವುದಕ್ಕೆ ಮನಸ್ಸು ಮಾಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ಬಿಲ್ಲನ್ನು 2 ದಿವಸದ ಹಿಂದೆಯೇ ಇಂಟ್ರಡ್ಯೂಸ್ ಮಾಡಿದೆ. ತಾವು ನಿನ್ನೆ ಸದನಕ್ಕೆ ಬರಬಹುದಿತ್ತು.

ಶ್ರೀ ಡಿ. ಬಿ. ಚಂದ್ರೇಗೌಡ:- ನಾನು ಮಾನ್ಯ ಅಧ್ಯಕ್ಷರನ್ನು ಕೇಳುತ್ತಿದ್ದೇನೆ. ಕಳೆದ ಸುಮಾರು 20 ದಿವಸಗಳಿಂದ ಈ ಸದನ ನಿರ್ಬಾಧಿತವಾಗಿ ನಡೆಯುವುದಕ್ಕೆ ನಾವು ಬಿಟ್ಟಿದ್ದೇವೆ. ನನಗೆ ಇದರಿಂದ ದುಃಖವೂ ಇಲ್ಲ, ಸಂತೋಷವಂತೂ ಖಂಡಿತಾ ಆಗಿಲ್ಲ. ಕನಿಷ್ಟ ಇಂಥ ಒಂದು ಮಸೂದೆಯ ಮೇಲಾದರೂ ಸುದೀರ್ಘವಾದ ಚರ್ಚೆಗೆ ಅವಕಾಶ ಸಿಕ್ಕದೇ ಇರತಕ್ಕದ್ದು ಒಂದು ದೌರ್ಭಾಗ್ಯ ಎಂದು ಹೇಳಬೇಕಾಗಿದೆ. ಇದಕ್ಕಿಂತ ಹೆಚ್ಚಿನದು ನಾನು ಏನನ್ನೂ ಹೇಳುವುದಿಲ್ಲ. ಅವರು ಒಂದು ಮಾತನ್ನು ಹೇಳಿದರು, ಏನೆಂದರೆ ಮೇಲ್ಮನೆಯಲ್ಲಿ ಮೆಜಾರಿಟಿ ಇದೆ ಎಂದು ಈ ಬಿಲ್ಲು ಪಾಸ್ ಆಗದೆ ವಾಪಸ್ ಬಂತು ಎಂದು. ಆದರೆ ನಾನು ಅವರಿಗೆ ಕೇಳುತ್ತೇನೆ, ಕೆಳಮನೆಯಲ್ಲಿ ಆಡಳಿತ ಪಕ್ಷಕ್ಕೆ ಮೆಜಾರಿಟಿ ಇದೆ ಎಂದು ಪಾಸ್ ಆಗಿದೆ. ಇದರಲ್ಲಿ ವಿಶೇಷತೆ ಏನೂ ಇಲ್ಲ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ತತ್ವ ಏನೆಂದರೆ, ಮೆಜಾರಿಟಿ ಇರತಕ್ಕದ್ದೇ ತತ್ವ.

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ತತ್ವ ಬೇರೆ, ಮೂಲ ತತ್ವ ಬೇರೆ. ಈ ದೇಶದ ಆಡಳಿತವನ್ನು ಹೇಗೆ ಮಾಡಬೇಕು, ಯಾವ ಯಾವ ಹಂತದಲ್ಲಿ ಯಾರ್‍ಯಾರು ಅಧಿಕಾರ ಮಾಡಬೇಕು ಮತ್ತು ಹೇಗೆ ಮಾಡಬೇಕೆಂಬುದಕ್ಕೆ ಒಂದು ಶಾಸನ ಇದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಪರಿಷತ್ತಿಗೆ ಚುನಾವಣೆ ಆಗುವುದಿಲ್ಲ, ಮಂಡಲ ಪಂಚಾಯಿತಿಗೆ ಚುನಾವಣೆ ಆಗುವುದಿಲ್ಲ, ಎ. ಪಿ. ಎಂ. ಸಿ.ಗಳಿಗೆ ಚುನಾವಣೆ ಖಂಡಿತ ಆಗುವುದಿಲ್ಲ. ಅಷ್ಟೇ ಅಲ್ಲ, ನೀವು ಇರುವವರೆಗೂ ಚುನಾವಣೆ ಆಗುವುದಿಲ್ಲ.

ಶ್ರೀ ಎಸ್. ರಮೇಶ್:- ನೀವು ಬಂದಕೂಡಲೇ ಸೂಪರ್‌ಸೀಡ್ ಮಾಡಿದಿರಿ, ನಾವು ಅದನ್ನು ಮಾಡಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ:- ಸಹಕಾರ ಸಂಘಗಳಿಗೆ ಚುನಾವಣೆ ಆಗುವುದಿಲ್ಲ. ಒಂದು ವೇಳೆ ಆದರೆ...

(ಗೊಂದಲ)

ಶ್ರೀ ಎನ್. ಚಿಕ್ಕೇಗೌಡ:- ತಮ್ಮ ಸರ್ಕಾರ ಇದ್ದಾಗ ತಾಲ್ಲೂಕು ಬೋರ್ಡ್ ಪಂಚಾಯಿತಿಗಳು ಇದ್ದಾಗ ಅವುಗಳ ವಾಯಿದೆ ಆಗಿಹೋದಾಗ ಅವುಗಳಿಗೆ ಅಡ್ಮಿನಿಸ್ಟ್ರೇಟರೇನ್ನು ಹಾಕಲಿಲ್ಲವೇ? ಅದೇ ರೀತಿ ನಾವೂ ಇವತ್ತು ಚುನಾವಣೆಯನ್ನು ಒಂದು ವರ್ಷಗೊಳಗೆ ಚುನಾವಣೆ ಮಾಡುತ್ತೇವೆಂದು ಹೇಳಿದ್ದೇವೆ. ಇದಕ್ಕೆ ನಮ್ಮ ಆರ್. ಡಿ. ಪಿ. ಆರ್. ಮಂತ್ರಿಗಳು ಸಕಾರಣ ಕೊಟ್ಟಿದ್ದಾರೆ. ವಾಯಿದೆ ಮುಗಿದು ಹೋಗಿರುವುದರ ಬಗ್ಗೆ ಮಾತನಾಡುವುದಕ್ಕೆ, ವಾದ ಮಾಡುವುದಕ್ಕೆ ಬಂದಿದ್ದೀರಿ. ಇದು ಯಾವ ನ್ಯಾಯ? ಇದು ಪ್ರಜಾಪ್ರಭುತ್ವವೇ?

ಶ್ರೀ ಡಿ. ಬಿ. ಚಂದ್ರೇಗೌಡ:- ನನಗೂ, ನಿಮಗೂ ವ್ಯತ್ಯಾಸ ಏನೆಂದರೆ ನಾವು ಎಕ್ಸೆಪ್ಷನ್, ನೀವು ರೂಲ್.

ಶ್ರೀ ಎಂ. ಮಹದೇವ್:- ಎಕ್ಸೆಪ್ಷನ್ ಎಂದರೇನು...

(ಗೊಂದಲ)

ಶ್ರೀ ಡಿ. ಬಿ. ಚಂದ್ರೇಗೌಡ:- ಎ. ಪಿ. ಎಂ. ಸಿ. ಗೆ ಇಷ್ಟೊದು ಎತ್ತರದ ಮನುಷ್ಯನನ್ನು ಹಾಕಿದ್ದೀರಿ. ಚುನಾವಣೆ ಆಗಲಿಲ್ಲ. ಸಹಕಾರ ಸಂಘಗಳಿಗೆ ಚುನಾವಣೆ ಆಗುವುದಿಲ್ಲ. ಜಿಲ್ಲಾ ಪರಿಷತ್ತುಗಳಿಗೆ ಚುನಾವಣೆ ಆಗುವುದಿಲ್ಲ.

ಶ್ರೀ ಎಂ. ಮಹದೇವ್:- ಸಹಕಾರ ಸಂಘಗಳಿಗೆ ಚುನಾವಣೆ ಆಯಿತು.

ಶ್ರೀ ಡಿ. ಬಿ. ಚಂದ್ರೇಗೌಡ:- ಕೊನೆಗೆ ಎಲ್ಲಿ ಚುನಾವಣೆಯಾಗುತ್ತದೆ, ಆ ಚುನಾವಣೆ ಆದ ಕಡೆ ಕಾಂಗ್ರೆಸ್ಸೀಕರಣ ಮಾಡತಕ್ಕದ್ದು. ಯಾವ ಕಾಲದಲ್ಲೇ ಆಗಲಿ ಸಹಕಾರ ಸಂಘಗಳಿಗೆ, ಹಾಲಿನ ಸೊಸೈಟಿಗಳಿಗೆ ನಾಮಿನೇಷನ್ ಆಗಿತ್ತೇ?ಯಾವ ಕಾಲದಲ್ಲಿಯೂ ಸಹಕಾರಿ ಸಂಸ್ಥೆಗಲಿಗೆ ಈ ರೀತಿ ನಾಮಿನೇಷನ್ ಮಾಡಿರಲಿಲ್ಲ. ಇದು ನಾಮಿನೇಷನ್ ಸರ್ಕಾರ. ಈ ಮಸೂದೆಯನ್ನು ತಂದರೂ ಕೂಡ ನಾಮಿನೇಷನ್ ಸರ್ಕಾರವೆಂದು ಹೇಳಿಸಿಕೊಳ್ಳಬೇಕಾಗುತ್ತದೆ.

ಶ್ರೀ ಬಸವರಾಜ್:- ಮಾನ್ಯ ವಿರೋಧಪಕ್ಷದ ನಾಯಕರೇ, ಮಂಡಲಿಗಳಿಗೆ ನಾಮಿನೇಷನ್ ತಾವೇ ಮಾಡಿದ್ದೀರಲ್ಲ, ಇಬ್ಬಿಬ್ಬರನ್ನು ಮಾಡಿ ಜನರಿಗೆ ಏನು ತೀರ್ಪು ಕೊಟ್ಟಿದ್ದೀರಿ?

ಶ್ರೀ ಡಿ. ಬಿ. ಚಂದ್ರೇಗೌಡ:- ಅದನ್ನು ನಾವು ಮಾಡುವಾಗ ಶಾಸನಬದ್ಧವಾಗಿ ಮಾಡಿದ್ದೇವೆ.

(ಗೊಂದಲ)

ಶ್ರೀ ಎಂ. ಮಹದೇವ್ :- ನಾವೂ ಶಾಸನಬದ್ಧವಾಗಿ ಮಾಡಿದ್ದೇವಲ್ಲಾ.

ಶ್ರೀ ಡಿ. ಬಿ. ಚಂದ್ರೇಗೌಡ:- ಈ ಕಾಂಗ್ರೇಸ್ ಸರ್ಕಾರಕ್ಕೂ ಈ ಶಾಸನಕ್ಕೂ ಯಾವ ಸಂಬಂಧವೂ ಇಲ್ಲ. ಈ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ಕಾಯಿದೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ವ್ಯತ್ಯಾಸವಾಗಿದೆ. ಲೋಕಲ್ ಸೆಲ್ಫ್ ಗೌವರ್ನಮೆಂಟ್ ಎಂದರೆ ಏನು? ರಾಜ್ಯಾಂಗದ 40ನೇ ವಿಧಿಯಲ್ಲಿ ಏನು ಹೇಳಿದ್ದಾರೆ. ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಹೇಳಿದ್ದೀರಿ ಎಂಬುದರ ಬಗ್ಗೆ 4-5 ಉದಾಹರಣೆಗಳನ್ನು ನಾನು ಕೊಡಬೇಕಾಗುತ್ತದೆ.
I may be permitted to speak for the whole day on this Bill.
I think I can go up to 6'0 clock.

MADAM DEPUTY SPEAKER:- **You can confine to the** amendment that they have brought.

ಶ್ರೀ ಡಿ. ಬಿ. ಚಂದ್ರೇಗೌಡ -: ಇವರು ಈ ಅಮೆಂಡ್‌ಮೆಂಟ್‌ನಲ್ಲಿ ಮೂಲ ತತ್ವದಲ್ಲಿದ್ದ ವ್ಯವಸ್ಥೆಯನ್ನೇ ಕಿತ್ತುಹಾಗಿದ್ದಾರೆ. ಇಲ್ಲಿ ಮೂಗುಬಿಟ್ಟು ಕಿತ್ತುಹಾಕಿದ್ದರೆ ನನಗೆ ಬೇಜಾರಾಗುತ್ತಿರಲಿಲ್ಲ. ಆದರೆ ಮೂಗನ್ನೇ ಕೊಯ್ದಿದ್ದೀರಿ. ಈಗ ಅದನ್ನು ಸರಿಪಡಿಸಬೇಕಾಲ್ಲಾ. Therfore, I said I need about 3-4 hours.

ಡಾ. ವೈ. ನಾಗಪ್ಪ :- ನೀವು ಮಾಡಿರುವುದಕ್ಕೆ ಪ್ಲಾಸ್ಟಿಕ್ ಸರ್ಜರಿ ಮಾಡಿದ್ದೇವೆ. ನಮ್ಮ ಮುಖ್ಯಮಂತ್ರಿಗಳು ಪ್ಲಾಸ್ಟಿಕ್ ಸರ್ಜರಿ ಮಾಡಿ ಸರಿ ಮಾಡಿದ್ದಾರೆ.

ಶ್ರೀ ಡಿ. ಬಿ. ಚಂದ್ರೇಗೌಡ:- ಬೇರೆಯವರು ಮಾತನಾಡಿದರೆ ನನಗೆ ಸಮಯ ಕಡಿಮೆಯಾಗುತ್ತದೆ. Article 40 of the Constitution, ------

Directive Principles of the state Policy; The Directive Principles of the state policy this is the difficulty. Had it been a national policy, we would have been discussing something other than thing other than the one we are discussing today. The difficulty is, it is a state policy. Organisation of the Panchayats. "The state shall take steps to organise village panchayats and endow with such powers and authority as may be necessary to enable them to function as a units of self-Government". This is the direction under the directive principles of the constitution. This constitution was given to the people of India on January 26, 1950. What an unfortunate situation? After 42 years of Indian Independence and 43rd year of the Indian Constitution.

SHRI N. CHIKKE GOWDA:- Analysing the constitution.

SHRI D. B. CHANDRE GOWDA:- Yes, That is the basic concept. ಇಲ್ಲದ್ದಿದ್ದರೆ ಅವರು ಸುಲಭವಾಗಿ ಉತ್ತರ ಹೇಳಿ ಜಾರಿಕೊಂಡು ಬಿಡುತ್ತಿದ್ದರು.

ಶ್ರೀ ಬಿ. ಶಿವಣ್ಣ:- ಈಗ ಅಮೆಂಡ್‌ಮೆಂಟ್‌ಗೆ ಏನು ರೆಫರೆನ್ಸ್?

ಶ್ರೀ ಡಿ. ಬಿ. ಚಂದ್ರೇಗೌಡ:- ಏನು ರೆಫರೆನ್ಸ್ ಎಂದರೆ, ನೀವು ಶಾಸನ ಮಾಡಿ, ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತಿಗಳ ವ್ಯವಸ್ಥೆಯನ್ನು ಜಾರಿಗೆ ತನ್ನಿ ಎಂದು ಹೇಳಿ. ಜನವರಿ 26, 1950ನೇ ಇಸವಿಯಲ್ಲಿ ಹೇಳಿದ್ದನ್ನು 1992ನೇ ಇಸವಿಯಲ್ಲಿ ಅದನ್ನು ಕಿತ್ತು ಹಾಕಿದ್ದೀರಲ್ಲಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಅದನ್ನು ಕಿತ್ತುಹಾಕದಿದ್ದರೆ ತಪ್ಪಾಗುತ್ತದೆ. ಟರ್ಮ್ ಮುಗಿದು ಹೋದರೆ, 5 ವರ್ಷಗಳು ಆದಮೇಲೆ ನಾವು ಸೂಪರ್‌ಸೀಡ್‌ಮಾಡಿ ಅಡ್ಮಿನಿಸ್ಟ್ರೇಟರನ್ನು ಹಾಕುತ್ತೇವೆಂದು ಹೇಳಬೇಕಾಗುತ್ತದೆ. ಇಲ್ಲಿ ಟರ್ಮ್ ಮುಗಿದ ಮೇಲೆ

ಯಾವುದಾದರೂ ಒಂದು ವ್ಯವಸ್ಥೆ ಬೇಕಲ್ಲಾ. ತಾವೇ ಮಂಡಳಗಳಿಗೆ ಕೊಟ್ಟಂಥ ಈ ವ್ಯವಸ್ಥೆಯನ್ನು ನಾವು ಜಿಲ್ಲಾಪರಿಷತ್ತಿಗೆ ಅಳವಡಿಕೊಂಡಿದ್ದೇವೆ. ತಾವು ಏನು ಈ ಮಸೂದೆಯ ಸೆಕ್ಷನ್ 8(ಇ)ನಲ್ಲಿ ಅಡ್ಮಿನಿಸ್ಟ್ರೇಟೀವ್ ಡಿಪಾರ್ಟ್‌ಮೆಂಟ್ ಅಥವಾ ಅಡ್ಮಿನಿಸ್ಟ್ರೇಟರ್ ಎಂದು ಏನು ಮಾಡಿದ್ದೀರಿ, ಕಾರ್ಪೊರೇಷನ್ ಆಕ್ಟ್‌ನಲ್ಲಿ ಏನು ಮಾಡಿದ್ದೀರಿ, ಕೋ-ಅಪರೇಟೀವ್ ಆಕ್ಟ್‌ನಲ್ಲಿ ಏನು ಮಾಡಿದ್ದೀರಿ ಅದನ್ನು ನಾವು ಈ ಸೆಕ್ಷನ್‌ನಲ್ಲಿ ಅಳವಡಿಸಿಕೊಂಡ್ದೇವೆ. ನಾವು ಹೊಸ ತತ್ತ್ವವನ್ನು ಹುಟ್ಟು ಹಾಕಿ ತಂದಿದ್ದರೆ, ಹೊಸ ತತ್ತ್ವವನ್ನು ಒಪ್ಪಿಕೊಂಡು ಪಂಚಾಯತಿ ಆಕ್ಟ್‌ಅನ್ನು ತೆಗೆದುಹಾಕಬೇಕೆಂದು ಮಾಡಿದ್ದರೆ, ಆ ಸಿಸ್ಟಂ ಅನ್ನೇ ತೆಗೆದುಹಾಕಿ ಅದನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದೇವೆ ಸಂವಿಧಾನಕ್ಕೆ ವಿರುದ್ಧವಾಗಿ ನಡೆದಿದ್ದೇವೆಂದು ಒಪ್ಪಿಕೊಳ್ಳುತ್ತಿದ್ದೆ. Act if continued. The Act is not repealed.The Act is in existence. ಅದರೂ ದೊಡ್ಡ ಅಪಾದನೆ ಮಾಡುತ್ತಿದ್ದೀರಲ್ಲಾ, ಇದು ಸರಿಯಲ್ಲ.

ಶ್ರೀ ಎಂ. ವಿ. ವೆಂಕಟಪ್ಪ:- 5 ವರ್ಷ ಇದ್ದದನ್ನು 4 ವರ್ಷ ಎಂದು ತಿದ್ದುಪಡಿ ತಂದಾಗ ಕೌನಿಲ್‌ನಲ್ಲಿ ನೀವೇ ಡಿಫೀಟ್ ಮಾಡಿದ್ದೀರಲ್ಲಾ.

ಶ್ರೀ ಡಿ. ಬಿ. ಚಂದ್ರೇಗೌಡ:- ಯಾವುದನ್ನು ಮುಂದೆ ಹೇಳಬೇಕೆಂದಿದ್ದೆ ಅದನ್ನು ಮೊದಲು ಹೇಳಬೇಕಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಆಕ್ಟ್‌ನಲ್ಲಿಆಡಳಿತಾಧಿಕಾರಿಯನ್ನು ಹಾಕುವುದಕ್ಕೆ ಅವಕಾಶ ಇದೆಯೆಂದು ಹೇಳಿದ್ದೇವೆ ಮತ್ತು ಯಾರನ್ನು ಹಾಕಬೇಕೆಂದು ಹೇಳಿದ್ದೇವೆ. ಜೊತೆಗೆ ಅಧಿಕಾರ ಅವಧಿ ಮುಗಿದರೆ 160ನೇ ವಿಧಿಯೊಳಗೆ ಏನು ಹೇಳುತ್ತದೆಂದರೆ, "Term of the office of the Members:" "Except as is otherwise provided in this Act, Members of Zilla Parishad, elected in a general election, shall hold office for a term of 5 years"

"Provided Government may by notification for reasons to be stated theris, extend the term of the office of all the Members by such a period or periods so "that the total period so extended shall not exceed six months".ಈ ರೂಲನ್ನು ಏತಕ್ಕೆ ಅಪ್ಲೈ ಮಾಡಲಿಲ್ಲ? ನಿಮಗೆ ಅಪ್ಲೈ ಮಾಡುವುದಕ್ಕೆ ಅವಕಾಶ ಇದೆ ನಿಜವಾಗಿ ಜನತಂತ್ರ ವ್ಯವಸ್ಥೆಯಲ್ಲಿ, ಚುನಾಯಿತ ಪದ್ಧತಿಯಲ್ಲಿ ನಂಬಿಕೆ ವಿಶ್ವಾಸ ಇದ್ದರೆ ನಿಮಗೆ ಡಿಕ್ಟೇಟೋರಿಯಲ್ ಆಟಿಟ್ಯೂಡ್ ಇಲ್ಲದಿದ್ದರೆ ಈ 6 ತಿಂಗಳ ಅವಧಿಯನ್ನು ಏತಕ್ಕೆ ಎಕ್ಸ್‌ಟೆಂಡ್ ಮಾಡಲಿಲ್ಲ? ಮುಂದೆ ನೀವು ಏನು ಮಾಡುತ್ತೀರೆಂದು ಯಾರಿಗೆ ಗೊತ್ತು? ಒಬ್ಬ ಮಾನ್ಯ ಸದಸ್ಯರು 1983ರಲ್ಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷರನ್ನು ಕಿತ್ತು ಹಾಕಿದಿರಲ್ಲಾ ಅಗ ಎಲ್ಲಿ ಹೋಗಿತ್ತು ನಿಮ್ಮ ಈ ಬುದ್ಧಿ?

ಶ್ರೀ ಬಿ. ಹೆಚ್. ಬನ್ನಿಕೋಡು:-ಇಲ್ಲಿರತಕ್ಕ ಇವರ ಸರ್ಕಾರದವರು ಮಾತ್ರ ಪ್ರಾಮಾಣಿಕರು, ಬಾಕಿಯವರು ಪ್ರಾಮಾಣಿಕರಲ್ಲ?

ಶ್ರೀ ಡಿ. ಬಿ. ಚಂದ್ರೇಗೌಡ:- ಕನ್ನಡದಲ್ಲಿ ಒಂದು ಗಾದೆ ಹೇಳುತ್ತಾರೆ, "ಗಂಡ ಸತ್ತ ಮೇಲೆ ಏನೋ ನೆನಸಿಕೊಂಡರು" ಎಂದು. ನಾನು ಅಂಥ ಸ್ಥಿತಿಯಲ್ಲಿರುವ ಮನುಷ್ಯ. ನೀವು ಏನು ಮಾಡಿದಿರಿ ಎಂದರೆ? ಈಗ ಅದು ನಮ್ಮ ಕೈಯಲ್ಲಿ ಇಲ್ಲ. ಈಗ ನಿಮ್ಮ ಕೈಯಲ್ಲಿ ಇದೆಯಲ್ಲಾ, ಅದಕ್ಕೆ ಕೇಳುತ್ತೇನೆ. ನೀವು ಏನು ಮಾಡಿದಿರಿ ಎಂದು. ನಮ್ಮ ಅಪ್ಪ ಅಮ್ಮ ಏನು ಮಾಡಿದರು ಅಂದರೆ ಅದಕ್ಕೂ ಹೇಳಬೇಕೆಂದರೆ ಹೇಳುತ್ತೇನೆ. ನಾನು ಏನು ಹೇಳುತ್ತೇನೆಂದರೆ, ಈ ಶಾಸನದೊಳಗೆ

ಅಡ್ಮಿನಿಸ್ಟ್ರೇಟರ್ ಹಾಕುವುದಕ್ಕೆ ಅವಕಾಶ ಇದೆ ಎಂದು ಹೇಳಿದ ಹಾಗೆ, ನಾವು ಚುನಾಯಿತ ಪ್ರತಿನಿಧಿಗಳನ್ನು ಮುಂದುವರಿಸುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದೇವೆ. ನೀವು ಅದನ್ನು ಏತಕ್ಕೆ ಬಳಕೆ ಮಾಡಿ ಕೊಳ್ಳಲಿಲ್ಲ? ಜನತಂತ್ರದ ಬಗ್ಗೆ ಇಷ್ಟು ಕಳಕಳಿ ಇರತಕ್ಕವರು ನೀವು ಏತಕ್ಕೆ ಇದನ್ನು ಬಳಕೆ ಮಾಡಲಿಲ್ಲ? 6 ತಿಂಗಳು ಅವರನ್ನು ಮುಂದುವರಿಸಿದ್ದರೆ ಮತ್ತೆ ಚುನಾವಣೆ ಮಾಡುವುದಕ್ಕೆ ಅವಕಾಶ ಇತ್ತು. ಆದ್ದರಿಂದ ನೀವು ಕಳೆದುಕೊಳ್ಳುತ್ತಿದ್ದುದು ಏನು? ಏತಕ್ಕೆ ಈ ಮಾತನ್ನು ಮನನೊಂದು ಹೇಳುತ್ತೇನೆಂದರೆ, ಮೊನ್ನೆ ನಾಗರಹೊಳೆಗೆ ಹೋಗಿದ್ದೆ, ಅಲ್ಲಿ ಶಾಸಕರು ಮಂತ್ರಿಗಳು ಯಾರೂ ಕೈಗೆ ಸಿಗುವುದಿಲ್ಲ, ಏಕೆಂಜರೆ ಇಲ್ಲಿ ಶಾಸನ ಸಭೆ ನಡೆಯುತ್ತಿದೆ, ಎಲ್ಲರೂ ಇಲ್ಲಿಗೆ ಬಂದಿದ್ದಾರೆ. ಅಲ್ಲಿ ನಾಯಕರು ಯಾರೂ ಇಲ್ಲ. ಕನಿಷ್ಟ ಮಂಡಲ ಪಂಚಾಯಿತಿ ಪ್ರತಿನಿಧಿಗಳು ಇದ್ದರೆ ಅಲ್ಲಿ ನಡೆದಂತಹ ದುರಂತ ನಡೆಯುತ್ತಿರಲಿಲ್ಲ. ಅಲ್ಲಿ ಎಂಥ ಒಂದು ದುರಂತ ನಡೆದಿದೆ ಎಂದರೆ, ಹೇಳುವುದಕ್ಕೆ ಬಹಳ ದುಃಖವಾಗುತ್ತದೆ. ಈ ದಿಸೆಯಲ್ಲಿ ಸ್ಥಳೀಯ ಮುಖಂಡರನ್ನು ಕೊಲೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಏತಕ್ಕೆ ಮಾಡಿದ್ದೀರಿ? ನಿಮಗೆ ಅಧಿಕಾರ ಬೇಕು, ಶಾಸನ ಸಭೆಯ ಸದಸ್ಯತ್ವ ಬೇಕು, ಮಂಡಲ ಪಂಚಾಯಿತಿಯ ಜವಾಬ್ದಾರಿ ಅಧಿಕಾರ ಬೇಕು, ಜಿಲ್ಲಾ ಪರಿಷತ್ತಿನ ಅಧಿಕಾರ ನಿಮಗೆ ಬೇಕು, ಸಹಕಾರ ಸಂಸ್ಥೆಗಳಲ್ಲಿ ಇರತಕ್ಕ ವ್ಯವಸ್ಥೆಯಲ್ಲಿ ಅಧಿಕಾರ ಬೇಕು, ಎ. ಪಿ. ಎಂ. ಸಿ. ಮೇಲಿನ ಅಧಿಕಾರ ಬೇಕು. ಕರ್ನಾಟಕ ರಾಜ್ಯದಲ್ಲಿ ಚುನಾಯಿತ ಪ್ರತನಿಧಿಗಳೆಂದರೆ ಸಂಸತ್ ಸದಸ್ಯರನ್ನು ಬಿಟ್ಟರೆ ಶಾಸನಸಭಾ ಸದಸ್ಯರು. ಎಲ್ಲಾ ಜವಾಬ್ದಾರಿ ಬೇಕು, ನಾವು ಸರ್ವಜ್ಞರು, ಎಲ್ಲಾ ವ್ಯವಹಾರ ಮಾಡತಕ್ಕ ಅತ್ಯಂತ ದೊಡ್ಡ ಮೇಧಾವಿಗಲು ನಾವು! ಜನತಂತ್ರವನ್ನು ಕೊಲೆ ಮಾಡಿದರಲ್ಲ ಅದಕ್ಕಾಗಿ 40ನೇ ವಿಧಿಯಲ್ಲಿ ಯಾವ ಮಾತನ್ನು ಹೇಲಿದ್ದಾರೋ ಆ ಮಾತನ್ನು ಜಾರಿಗೆ ಕೊಡುವುಕ್ಕೆ ಅಗದೇ 42 ವರ್ಷದ ತರುವಾಯ ಈ ವ್ಯವಸ್ಥೆ ಹೀಗಿರಬೇಕು, ಆಡಳಿತಾಧಿಕಾರಿಗಳನ್ನು ಹಾಕುವುದಕ್ಕೆ ಅವಕಾಶ ಇದೆ ಎಂದು ಚರ್ಚೆ ಮಾಡುತ್ತಿದ್ದೇವಲ್ಲಾ ನಿಜವಾಗಿ ನಮ್ಮ ಮನಸ್ಸಿನಲ್ಲಿ ಕೆಳಗಡೆ ಇರತಕ್ಕ ನಾಯಕತ್ವವನ್ನು ಗುರುತಿಸತಕ್ಕ ನಾಯತ್ವವನ್ನು ರಾಜ್ಯದ ಹಿತಕ್ಕಾಗಿ ರಾಷ್ಟ್ರದ ಹಿತಕ್ಕಾಗಿ ಬಳಕೆ ಮಾಡಿಕೊಳ್ಳತಕ್ಕ ಆಲೋಚನೆಯನ್ನು ನಾವೇನಾದರೂ ಮಾಡಿದ್ದೇವಾ? ಹಾಗೆ ಮಾಡಿದ್ದರೆ ಈ ಸರ್ಕಾರ ಬಂದು ಎರಡು ವರ್ಷದ ಮೇಲಾಯಿತು, ಏನು ಬಾಧಕ ಇತ್ತು ತಿದ್ದುಪಡಿ ಮಾಡುವುದಕ್ಕೆ? ಮಾಡಬಹುದಾಗಿತ್ತು. ನಾನು ಮೊದಲೇ ಹೇಳಿದೆ, At least I should have my say. ಅದಕ್ಕೂ ಅವಕಾಶ ಇಲ್ಲದ ಹಾಗೆ ಆತುರಾತುರವಾಗಿ ಮಸೂದೆಯನ್ನು ತೀರ್ಮಾನ ಮಾಡಬೇಕು ಎಂದು ಹೇಳುತ್ತೀರಲ್ಲಾ ಇದು ಸರಿಯೇ? ನಿಮ್ಮ ಸಮಗ್ರವಾದ ಮಸೂದೆ ಮೇಲೆ ಇವತ್ತು ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಅಮೆಂಡ್‌ಮೆಂಟ್ ಮೇಲೆ ನೋಡುವುದಕ್ಕೆ ಏನೂ ಇಲ್ಲ ಒಳಗೆ ಗುಳಿಗೆ ಇದೆ. ಅ ಗುಳಿಗೆ ಏನು? ಒಳಗಡೆ ಇರತಕ್ಕ ಗುಳಿಗೆ ಈಗಿನ ವ್ಯವಸ್ಥೆಯನ್ನು ಕೊಲ್ಲತಕ್ಕ ವಿಷದ ಗುಳಿಗೆ. ವ್ಯವಸ್ಥೆಯನ್ನು ಕೊಲ್ಲತಕ್ಕ ಅತ್ಯಂತ ದಾರುಣವಾದ ಕಾರ್ಕೋಟಕ ವಿಷದ ಗುಳಿಗೆಯನ್ನು ಈ ಶಾಸನಸಭೆಗೆ ಕೊಟ್ಟು ಇಡೀ ಪಂಚಾಯಿತಿ ವ್ಯವಸ್ಥೆತೆಯನ್ನು ಕೊಲೆ ಮಾಡತಕ್ಕ ಪ್ರಯತ್ನ ನಡೆದಿದೆಯಲ್ಲಾ ಅದರ ಬಗ್ಗೆ ನಾವು ದೀರ್ಘವಾಗಿ ಚರ್ಚೆ ಮಾಡಬೇಕಾಗಿದೆ. ಮಾನ್ಯ ಮಂತ್ರಿಗಳು ಈಗ ಎಷ್ಟನೇಯವರೋ ನೀವೇ ಲೆಕ್ಕ ಹಾಕಿ ಹೇಳಬೇಕು. ನನಗೆ ಗೊತ್ತಾಗುವುದಿಲ್ಲ. ಒಂದೊಂದು ಸೆಷನ್‌ಗೆ ಒಬ್ಬೊಬ್ಬ ಪಂಚಾಯತ್ ರಾಜ್ಯ ಮಂತ್ರಿ. ಆಳುವವರ ತೀರ್ಪು ಕೇಳುವವರ ಹಕ್ಕು ನಿಮ್ಮ ತೀರ್ಮಾನ. ಹಿಂದೆ ಇದ್ದ ಪಂಚಾಯತ್‌ರಾಜ್ ಮಂತ್ರಿಗಳಿಗೆ ಆದ ಸ್ಥಿತಿ ನಿಮಗೆ ಬರದೇ ಇರಲಿ. ಅದಕ್ಕಾಗಿಯೇ ನಾನು ಸ್ವಲ್ಪ ವಿವರವಾಗಿ ಚರ್ಚೆ ಮಾಡಬೇಕು ಎಂದು ಹೇಳಿದೆ. ಪಂಚಾಯತ್‌ರಾಜ್ ಮಂತ್ರಿಗಳು ಕೆಲವರು ಮನೆಗೆ ಹೋದರು.

ಇನ್ನು ಕೆಲವರು ಜಗತ್ತನ್ನೇ ಬಿಟ್ಟರು, ಇಂಥದ್ದು ಇವರಿಗೆ ಆಗಬಾರದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ವಿರೋಧಪಕ್ಷದ ನಾಯಕರಿಗೆ ಹೇಳುತ್ತೇನೆ, ಅವರಿಗೆ ಏನೂ ಆಗುವುದಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ:- ಬೇರೆಯವರ ಪರವಾಗಿ ಮಾತನಾಡುವ ಅಧಿಕಾರ ನಿಮಗೆಲ್ಲಿದೆ? ಇವರದ್ದೇ ನೋಡಿಕೊಂಡರೆ ಸಾಕಾಗಿದೆ. ಅವರ ಜವಾಬ್ದಾರಿಯನ್ನು ತೆಗೆದುಕೊಂಡರೆ ಕಷ್ಟ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ನಾನು ನಿನ್ನೆ ಹೇಳಿದ್ದೇನೆ. ವಿರೋಧಪಕ್ಷದ ಸ್ಥಾನದಲ್ಲಿರತಕ್ಕ ವಿರೋಧಪಕ್ಷದ ನಾಯಕರು ನಮ್ಮ ಡಿಮ್ಯಾಂಡ್ಸ್ ಮೇಲೆ ಏನಾದರೂ ಬೆಳಕು ಚೆಲ್ಲುತ್ತಾರೇನೋ ಎಂದು ನಮಗೆ ಅನ್ನಿಸುತ್ತಿತ್ತು. ಆದರೆ ಪಾಪ ಇವತ್ತು ಬಂದಿದ್ದಾರೆ, ಏನು ಮಾಡುವುದು? ಬಹಳ ಕನಿಕರ ಅನ್ನಿಸುತ್ತದೆ ನನಗೆ.

ಶ್ರೀ ಡಿ. ಬಿ ಚಂದ್ರೇಗೌಡ:- ನಿಮ್ಮನ್ನು ನೋಡಿ ನನಗೆ ಕನಿಕರ ಅನ್ನಿಸುತ್ತದೆ. ಏನು ಮಾಡುವುದು? ಕಂದಾಯ ಮಂತ್ರಿಗಳಾಗಿರುವ ಇವರ ಕೈಗೆ ಬದಲಾವಣೆಯ ದಾಖಲೆ ಇರತಕ್ಕ ಜಿಲ್ಲಾಪರಿಷತ್ ಏತಕ್ಕೆ ಬಂತೋ ಗೊತ್ತಿಲ್ಲ. ಬಂದುಬಿಟ್ಟಿದೆ. ಆದ್ದರಿಂದ ಅವರಿಗೆ ಆದ ಗತಿ ಇವರಿಗೆ ಆಗದೇ ಇರಲಿ ಎಂದು ಪ್ರಾರ್ಥನೆ ಮಾಡಿ ಹಾಗಾಗದೇ ಇರುವುದಕ್ಕೆ ಏನು ಮಾಡಬೇಕು? ಹಾಗೆ ಆಗದೇ ಇರುವುದಕ್ಕೆ ಇಂಥ ತಿದ್ದುಪಡಿಗಳನ್ನು ತಂದು ಜನಾಭಿಪ್ರಾಯ ವಿರುದ್ಧವಾಗುವ ಹಾಗೆ ನೀವು ಏತಕ್ಕೆ ನಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ? ಮಾನ್ಯ ಅಧ್ಯಕ್ಷರೇ, ಆ ಕಾರಣ ಮೇಲ್ನೋಟಕ್ಕೆ ಈ ತಿದ್ದುಪಡಿ ಅಂದರೆ ಅದನ್ನು ತೆಗೆದು ಇದನ್ನು ಹಾಕಬೇಕೆಂಬುದು ಇದರಲ್ಲಿದೆ. ಆದರೆ ಇದು ನಾನು ಹೇಳಿದಹಾಗೆ ಕಾರ್ಕೋಟಕ ವಿಷ. ಈ ವಿಷವನ್ನು ತಿದ್ದುಪಡಿ ಎನ್ನತಕ್ಕ ಮಸೂದೆಯ ಸಿಹಿ ಗುಳಿಗೆಯಲ್ಲಿ ಹಾಕಿ ಮೆಜಾರಿಟಿ ಎಂಬ ದೊಡ್ಡ ಶಕ್ತಿಯನ್ನು ಬಳಸಿ ನುಂಗಿಸುತ್ತಿದ್ದೀರಿ. ಹಾಗೆ ನುಂಗಿಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ. ಇಲ್ಲಿ ಏನು ಹೇಳುತ್ತಾರೆ ಇವರು? ಜಿಲ್ಲಾಪರಿಷತ್ತಿಗೆ ಅಡ್ಮಿನಿಸ್ಟ್ರೇಟರ್ ಹಾಕುವುದಕ್ಕೆ ಅವಕಾಶ ಇದೆ ಎಂದು. ಅದೇ ತತ್ವ ಶಾಶ್ವತವಾದ ವ್ಯವಸ್ಥೆಯಲ್ಲಿರಬೇಕು. ಹಾಗಿದ್ದರೆ ಪರ್ಮನೆಂಟಾಗಿ ರಾಜ್ಯಪಾಲರ ಆಡಳಿತ ಇಟ್ಟುಕೊಳ್ಳಬೇಕು ಇಲ್ಲಿ. ನಮಗೆ ಒಂದು ಸರ್ಕಾರ ಏತಕ್ಕೆ ಬೇಕು? ಚುನಾಯಿತ ಪ್ರತಿನಿಧಿಗಳು ಏತಕ್ಕೆಬೇಕು? "Governor is also an Administrator in the absence of a Government elected by the people". ಅದನ್ನೇ ನೀವು ಮಾಡಬಹುದು. ಸ್ಸಂಸತ್‌ನವರು ಇದನ್ನೇ ಆಲೋಚನೆ ಮಾಡಿದರೆ ಈಗ ಅದು ಅಪರಾಧ ಆಗುವುದಿಲ್ಲ. ಈ ಕಾರಣ ಇಲ್ಲಿ ಹೇಳಿದ್ದಾರೆ. ಒಂದು ಕಡೆ power to appoint, ಅದನ್ನು ಹೇಳುವುದಕ್ಕಿಂತ ಮುಂಚೆ ನೀವು ಅಧಿಕಾರವನ್ನು ಕೈಗೆ ತೆಗೆದುಕೊಳ್ಳುತ್ತಿದ್ದೀರಿ; ಯಾರ ಕೈಗೆ ಕೊಡುತ್ತಿದ್ದೀರಿ? ಯಾರಿಗೆ ಇರಬೇಕೆಂದು ನಿಗದಿ ಮಾಡುತ್ತೀರಿ?

Sec. 272: Power to appoint administrator in certain cases:

"Whenever any general election to the Mandal Panchayat, Zilla Parishad under this Act or any proceedings consequent thereupon have been stayed by an order of competent court or authority...".

This is not the circumstance. ಯಾವ ಕೋರ್ಟೂ ಮತ್ತು ಶಾಸನವೂ ಚುನಾವಣೆ ಮಾಡಬೇಡಿ ಎಂದು ಹೇಳಿಲ್ಲ. ಚುನಾವಣೆ ಮಾಡುವುದಕ್ಕೆ ಸ್ಟೇ ಕೊಟ್ಟಿಲ್ಲ. ಇನ್ನು ಯಾವುದಾದರೂ ಕಾರಣ ಇದಯೋ ಎಂದರೆ ಹಿಂದೆ ಒಂದು ಸಾರಿ ಹೇಳಿದಿರಿ, 1972ನೇ ಸೆನ್ಸಸ್‌ನಲ್ಲಿ ಮಾಡಿದ್ದು ಇದು, ಆದ್ದರಿಂದ ಕಾನ್‌ಸ್ಟಿಟ್ಯೂಯೆನ್ಸಿಗಳ ಮರು ಪರಿಶೀಲನೆ ಆಗಬೇಕು ಮತ್ತು basing on that population ratio ಹೆಚ್ಚು ಪಂಚಾಯುತುಗಳನ್ನು ಮಾಡಬೇಕು ಎಂಬ ಮಾತನ್ನು ಹೇಳಿದಿರಿ. ತಲಾವಾರು ಅನುದಾನ ಕೊಡುವಾಗ 1981ನೇ ಸೆನ್ಸಸ್ ಮೇಲೆ ತಲಾನುಧಾನ ಕೊಟ್ಟರಿ. 1991ನೇ ಸೆನ್ಸಸ್ ಆಗಲೇ ಮುಗಿದಿದೆ. ಮುಗಿದಿದ್ದು ಮಾತ್ರ ಅಲ್ಲ ಈಗ ಮುಗಿದಿರತಕ್ಕ ಸೆನ್ಸಸ್ ಮೇಲೆ ರಾಷ್ಟ್ರಪತಿಗಳ ಚುನಾವಣೆ ಆಗುತ್ತದೆ. ಜುಲೈ ತಿಂಗಳಲ್ಲಿ ರಾಷ್ಟ್ರಪತಿಗಳ ಚುನಾವಣೆಗೆ ಆಧಾರ ಏನು? ಈಗ ನಡೆದಿರತಕ್ಕ 91ನೇ ಇಸವಿಯ ಸೆನ್ಸಸ್ ಆಧಾರದ ಮೇಲೆ ಒಂದು ರಾಜ್ಯದ ಒಟ್ಟು ಜನಸಂಖ್ಯೆಯನ್ನು ಆಧರಿಸಿ ಶಾಸನಸಭೆ ಸದಸ್ಯರ ಮತ ಎಷ್ಟು ಎಂದು ಗೊತ್ತು ಮಾಡುತ್ತಾರೆ. ರಾಷ್ಟ್ರಪತಿಗಳ ಚುನಾವಣೆ ಮಾಡುವುದಕ್ಕೆ ಬೇಕಾಗಿರತಕ್ಕ ಸೆನ್ಸಸ್‌ನ ಲೆಕ್ಕ ನಿಮ್ಮ ಹತ್ರ ಇದ್ದರೆ ಮಂಡಲ ಪ್ರಧಾನರಿಗೆ ಏಕೆ ಇಲ್ಲ? ಸದಸ್ಯರನ್ನು ಮಾಡುವುದಕ್ಕೆ ಏಕಿಲ್ಲ? ಏನು ಕೋರ್ಟ್ ಸ್ಟೇ ಇದೆಯೇ? ಏನಿಲ್ಲವಲ್ಲಾ? ಎರಡನೇ ಕಾರಣ ಇಲ್ಲಿ ಏನು ಹೇಳುತ್ತಾರೆ?

ಶ್ರೀ. ಎಂ. ವಿ. ವೆಂಕಟಪ್ಪ:- ಮಂಡಲಕ್ಕೆ ಚುನಾವಣೆ ಮಾಡುವುದಕ್ಕೆ ಇನ್ನೂ ತಯಾರು ಆಗಿಲ್ಲ.

ಶ್ರೀ ಡಿ. ಬಿ ಚಂದ್ರೇಗೌಡ:- ನಾನು ಅದನ್ನೇ ಹೇಳಿದೆ. ಮುಂದೆ 5 ವರ್ಷಕ್ಕೊಮ್ಮೆ ಶಾಸನಸಭೆ ಚುನಾವಣೆ ಆಗಬೇಕು. 5 ವರ್ಷಕ್ಕೆ ಲೋಕಸಭೆ ಚುನಾವಣೆ ಆಗಬೇಕು.

SRI M. MALLIKARJUNA KHARGE:- This is an adhoc arrangement.

ಶ್ರೀ ಡಿ. ಬಿ ಚಂದ್ರೇಗೌಡ:- ಏಕೆ ಮಾಡಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವು ಮಾಡಿದ ಹಾಗೆ ನಾವು ಮಾಡಿದ್ದೇವೆ. ನೀವು ಮಾಡಿದ್ದರಿಂದ ನಾವು ಮಾಡಿದ್ದೇವೆ.

ಶ್ರೀ ಡಿ. ಬಿ ಚಂದ್ರೇಗೌಡ:- ಇವತ್ತು ಅಲ್ಲಿ ಅಡ್ಮಿನಿಸ್ಟ್ರೇಟರ್ಸ್ ಬೇಕೇ? ಸುಗ್ರೀವಾಜ್ಞೆ ಬೇರೆ ಕಾರಣ ಏಕೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಏಕೆಂದರೆ ಚುನಾವಣೆ ಆಗಿಲ್ಲ. ಈಗ ಪ್ರೋಸೆಸ್‌ನಲ್ಲಿದೆ. ವ್ಯಾಕ್ಯೂಮ್‌ನಲ್ಲಿ ಇದ್ದಾಗ ಅಡ್ಮಿನಿಸ್ಟ್ರೇಟರ್ ಬೇಕೋ ಬೇಡವೋ?

(ಗೊಂದಲ)

ಶ್ರೀ ಬಿ. ಹೆಚ್. ಬನ್ನೀಕೋಡ್:- ನಿಮ್ಮವರ ಬಗ್ಗೆಯೇ ನಿಮಗೆ ವಿಶ್ವಾಸ ಇಲ್ಲ.

ಶ್ರೀ. ಎಂ. ವಿ. ವೆಂಕಟಪ್ಪ:- ನಿಮ್ಮ 8ಸಿ ಪ್ರಕಾರ ಅಡ್ಮಿನಿಸ್ಟ್ರೇಟರ್ ಅಥವಾ ಅಡ್ಮಿನಿಸ್ಟ್ರೇಟಿವ್ ಕಮಿಟಿ ಎಂದು ತಾವು ಮಾಡಿದ್ದೀರಿ. ರಾಮಕೃಷ್ಣ ಹೆಗ್ಡೆಯವರು ಮತ್ತು ನಜೀರ್‌ಸಾಬ್ ಅವರು ಹೇಳಿದ್ದಾರೆ. ಹೋಗಲಿ ಕಮಿಟಿಯನ್ನು ಮಾಡೋಣವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಂಡಲಪಂಚಾಯಿತಿಯಲ್ಲಿ ಆ ಪ್ರಾವಿಷನ್ ಇಟ್ಟುಕೊಂಡು ಜಿಲ್ಲಾಪರಿಷತ್ತಿಗೆ ಎಕ್ಸ್‌ಟೆಂಡ್ ಮಾಡುತ್ತೇವೆಂದರೆ, ಆಂಟಿ ಡೆಮಾಕ್ರಸಿ...

(interruptions)

ಎಲ್ಲಾ ನಮ್ಮ ವಿರುದ್ಧ ಮಾಡಿದರೆ ಹೇಗೆ? ಎಲ್ಲಾ ನೀವು ಮಾಡಿ ನಮ್ಮ ವಿರುದ್ಧ ಹೇಳಿದರೆ ಹೇಗೆ? ನೀವು ಸ್ವಲ್ಪ ತೆಗೆದುಕೊಳ್ಳಿ.

ಶ್ರೀ ಬಿ. ಹೆಚ್. ಬನ್ನಿಕೋಡ್:- ಮಂಡಲ ಪಂಚಾಯಿತಿಯಲ್ಲಿ ಇರತಕ್ಕದ್ದು ರಾಜ್ಯದ ಎಲ್ಲಾ ಮಂಡಲಗಳಲ್ಲಿ ಎಂದು ಅಲ್ಲ. ವಿಶೇಷ ಸಂದರ್ಭಗಳಲ್ಲಿ, ಅಲ್ಲಿ ಅವ್ಯವಹಾರ ಆಗಿದ್ದರೆ, ಆಡಳಿತ ಸರಿಯಾಗಿ ಇಲ್ಲದೇ ಇದ್ದರೆ ಮಾಡಬೇಕೇ ವಿನಃ ರಾಜ್ಯದ ಎಲ್ಲಾ ಮಂಡಳಿಗಳಿಗೂ ಆಡಳಿತಾಧಿಕಾರಿಗಳನ್ನು ನೇಮಿಸಬೇಕೆಂದು ಅಲ್ಲ. ತಾವು ತಪ್ಪು ಅರ್ಥ ಮಾಡುತ್ತಿದ್ದೀರಿ.

(ಶ್ರೀ ಡಿ. ಎ. ಚಿನ್ನಪ್ಪನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ. ಬಿ ಚಂದ್ರೇಗೌಡ:- ನಾನು ಯಾವರೀತಿ ಇವರಿಗೆ ಹೇಳಬೇಕೋ ಗೊತ್ತಿಲ್ಲ. ಮಾನ್ಯ ರಾಮಕೃಷ್ಣ ಹೆಗ್ಡೆಯವರು ಮತ್ತು ನಜೀರ್‌ಸಾಬ್‌ರವರು ಈ ಶಾಸನ ಮಾಡಿದವರು ಎಂದು ಮಾನ್ಯ ವೆಂಕಟಪ್ಪನವರು ಹೇಳಿದರು. ಆಗ ಈ ಶಾಸನಸಭೆಯಲ್ಲಿ ಸದಸ್ಯರು ಯಾರೂ ಇರಲಿಲ್ಲವೇ? Nazir Sab piloted the Bill, I do understand, but the entire House unanimously agreed to of which House, I presided as the Speaker of this Assembly. I had a rare distinction to preside as a Speaker of the Assembly when this Bill was Translated into an Act. After the Bill was referred to the Joint Select Committee and the Joint Select Committee toured almost four to five states and brought out so many amendments and so many changes, ultimately the House unanimously adopted the Bill.

AN HON'BLE MEMBER:- A stay was there.

ಛೇರ್ಮನ್:- ಈಗ ಮಾನ್ಯ ವಿರೋದಪಕ್ಷದ ನಾಯಕರು ಮಾತನಾಡಲಿ. ಬೇರೆಯವರು ಮಾತನಾಡಿದ್ದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಡಿ. ಬಿ ಚಂದ್ರೇಗೌಡ:- ಕರಡು ಮಸೂದೆಯನ್ನು ಈ ಶಾಸನಸಭೆಯಲ್ಲಿ ಮಂಡನೆ ಮಾಡಿದಾಗ ಮಾನ್ಯ ಮೊಯಿಲಿಯವರು ಈ ಕಡೆ ಕುಳಿತುಕೊಂಡಿದ್ದರು. ಮಾನ್ಯ ಖರ್ಗೆಯವರು ಸಹ ಈ ಕಡೆ ಕುಳಿತುಕೊಂಡಿದ್ದರು. ಮಾನ್ಯ ಧರ್ಮಸಿಂಗ್‌ರವರು ಈ ಕಡೆ ಕುಳಿತುಕೊಂಡಿದ್ದರು. ನಾನು ವಿಧಾನಸಭೆಯ ಅಧ್ಯಕ್ಷನಾಗಿ ಮೈ ಮುರಿಸಿಕೊಂಡೆ, ಅದನ್ನು ತಲೆಯ ಮೇಲೆ ಹಾಕಿದರು. ನನಗೆ ಆಗ ಅವರು ಒಂದು ಮಾತನ್ನು ಹೇಳಿದರು. ಇದು ಒಂದು ಕ್ರಾತಿಕಾರವಾದಂತಹ ಮಸೂದೆ. ಈ ಮಸೂದೆ ಶಾಸನವಾಗಿ ಜಾರಿಗೆ ಬರಬೇಕಾದರೆ ಸಮಗ್ರವಾಗಿ even without asking the Government-though the Government finally agreed to it, I referred it to Joint Select Committee. That is why I said. Even the Government was not prepared to accept it. Please bear it in mind. ಆ ಕಾಲಕ್ಕೆ ಸರ್ಕಾರವನ್ನು ಒಪ್ಪಿಸಿ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಈ ಸದನ ಒಕ್ಕೊರಲಿನಿಂದ ಈ ಮಸೂದೆಯನ್ನು ಪಾಸು ಮಾಡಿದ್ದೇವೆ. ಈಗ ನಿಮಗೆ ಏತಕ್ಕೆ ಕಹಿಯಾಯಿತು? ಒಂದು ಮಾತಿನಲ್ಲಿ ಹೇಳಬೇಕಾದರೆ ವಿಕೇಂದ್ರಿಕರಣ ವ್ಯವಸ್ಥೆಯ ಬಗ್ಗೆ ಆಳತಕ್ಕ ಪಕ್ಷಕ್ಕೆ ಮತ್ತು ಮಂತ್ರಿಗಳಿಗೆ ಹಾಗೂ ಈ ಸರ್ಕಾರಕ್ಕೆ ವಿಶ್ವಾಸವಿಲ್ಲವೆನ್ನುವ ತೀರ್ಮಾನಕ್ಕೆ ಅನಿವಾರ್ಯವಾಗಿ ನಾನು ಬರಬೇಕಾಗಿದೆ. ವಿಶ್ವಾಸವಿದ್ದರೆ ಕನಿಷ್ಠ ಆರು ತಿಂಗಳ ಅವಧಿಯವರೆಗೆ ವಿಸ್ತರಿಸುವುದಕ್ಕೆ ಆಲೋಚನೆ

ಮಾಡಬಹುದಾಗಿತ್ತು. ಮತ್ತೆ ಅಡ್ಮಿನಿಸ್ಟ್ರೇಟರ್ ಅಪಾಯಿಂಟ್‌ಮೆಂಟ್ ಮಾಡುವುದು ಅಂದರೆ ಯಾರನ್ನು ಮಾಡಬೇಕೆಂದು ಹೇಳಿದ್ದಾರೆ ? ಅದನ್ನಾದರೂ ಒಪ್ಪಿಕೊಳ್ಳುತ್ತೀರಾ ? ಅಸಿಸ್ಟೆಂಟ್ ಕಮೀಷನರ್ ಅವರನ್ನು ಅಪಾಯಿಂಟ್ ಮಾಡಬೇಕು. ನೀವು ಯಾರನ್ನು ಮಾಡಿದ್ದೀರಿ? ಇದು ಎಲ್ಲಿಗೆ ಹೋಗಿದೆ ಅಂದರೆ . . .

ಶ್ರೀ ಎಸ್.ಹೆಚ್.ಕೌಜಲಗಿ:- ದನದ ದವಾಖಾನೆಯ ಡಾಕ್ಟರನ್ನು ಅಡ್ಮಿನಿಸ್ಟ್ರೇಟರ್ ಆಗಿ ನೇಮಕ ಮಾಡಿದ್ದಾರೆ.

ಶ್ರೀ ಬಿ.ಹೆಚ್.ಬನ್ನಿಕೊಡ್ :- ಪಶುವೈದ್ಯರನ್ನು ಮನುಷ್ಯರನ್ನು ಸರಿ ಮಾಡಲಿಕ್ಕೆ ಹಾಗೂ ಅವರು ಆಡಳಿತ ಮಾಡಲಿಕ್ಕೆ ಸರ್ಕಾರ ಯೋಚನೆ ಮಾಡಿದೆ.

ಶ್ರೀ ಡಿ. ಬಿ ಚಂದ್ರೇಗೌಡ:- ಯಾರೋ ಒಬ್ಬರು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಅವರ ಮೇಲೆ ಇವರಿಗೆ ವಿಶ್ವಾಸವಿದೆ. ಆದರೆ ನಮ್ಮವನೇ ಆದ ಒಬ್ಬ ಮಂಡಲ ಪ್ರಧಾನರ ಮೇಲೆ ನಿಮಗೆ ವಿಶ್ವಾಸವಿಲ್ಲ. ಈದ ಅಸಿಸ್ಟೆಂಟ್, ಎಕ್ಸಿಕ್ಯುಟಿವ್ ಇಂಜಿನಿಯರ್ ಒಬ್ಬ ಅಡ್ಮಿನಿಸ್ಟ್ರೇಟರ್. ಅಸಿಸ್ಟೆಂಟ್ ಎಜುಕೇಷನ್ ಆಫೀಸರ್ ಒಬ್ಬ ಅಡ್ಮಿನಿಸ್ಟ್ರೇಟರ್.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಯಾವ ಆಫೀಸರ್ ಮೇಲೂ ವಿಶ್ವಾಸವಿಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್:- ಇವರಿಗೆ ಜನರ ಪ್ರತಿನಿಧಿಗಳ ಮೇಲೆ ವಿಶ್ವಾಸವಿಲ್ಲ. ಇವರಿಗೆ ನೌಕರಶಾಹಿಯ ಮೇಲೆ ವಿಶ್ವಾಸವಿದೆ. ನೌಕರರು ಇವರ ಸ್ನೇಹಿತರು ಇದ್ದಾರೆ. ಅದಕ್ಕಾಗಿ ಅವರ ಮೇಲೆ ಇವರಿಗೆ ವಿಶ್ವಾಸ. ಅವರು ನಿಮ್ಮ ಸೂತ್ರದಾರರು ಅದಕ್ಕಾಗಿ ಅವರ ಮೇಲೆ ನಿಮಗೆ ವಿಶ್ವಾಸ. ಜನರಿಂದ ಆಯ್ಕೆಯಾದ ಜನರ ಪ್ರತಿನಿಧಿಗಳ ಮೇಲೆ ನಿಮಗೆ ವಿಶ್ವಾಸವಿಲ್ಲ.

ಶ್ರೀ ಎಂ.ವಿ.ವೆಂಕಟಪ್ಪ:- ಮಾನ್ಯ ಅಧ್ಯಕ್ಷರೇ, ಒಂದು ಪಾಯಿಂಟ್ ಅನ್ನು ಕ್ಲಾರಿಫೈ ಮಾಡಬೇಕು. ಈ ಬಿಲ್ಲನ್ನು ಜಾರಿಗೆ ಕೊಡುವಾಗ 2535ಜನ ಅಸಿಸ್ಟೆಂಟ್ ಕಮೀಷನರ್‌ಗಳು ಎಲ್ಲಿಸಿಗುತ್ತಾರೆ ? ಇದು ತಮಗೆ ಗೊತ್ತಿದೆ ಸ್ವಾಮಿ? ತಾವು ದಯವಿಟ್ಟು ಹೇಳಬೇಕು ನಮ್ಮ ರಾಜ್ಯದಲ್ಲಿ ಇಂತಹ ಸಂದರ್ಭದಲ್ಲಿ ಏನು ಮಾಡಬೇಕು ಸರ್ಕಾರ ?

ಶ್ರೀ ಡಿ.ಬಿ.ಚಂದ್ರೇಗೌಡ:-ಅನಿವಾರ್ಯವಾದಾಗ ಏನು ಎಂದು ಕೇಳುತ್ತಾರೆ. 2535 ಅಸಿಸ್ಟೆಂಟ್ ಕಮೀಷನರ್‌ಗಳು ಸಿಗುತ್ತಾರೋ ಇಲ್ಲವೋ ಎಂಬುದು ಆಮೇಲೆ ಬರುತ್ತದೆ. ಅನಿವಾರ್ಯವಾದಾಗ ನಾನು ಕೇಳುತ್ತೇನೆ, ಮಂಡಲ ಪಂಚಾಯತಿಗಳಿಗೆ ಈಗ ಇದ್ದಂತಹ ವ್ಯವಸ್ಥೆಗೆ ಚುನಾವಣೆ ಮಾಡದೆ ಇರುವುದಕ್ಕೆ ಕಾರಣವೇನು? ಅಡ್ಮಿನಿಸ್ಟ್ರೇಟರ್ ಹಾಕಬೇಕಾದ ಅನಿವಾರ್ಯವಾದ ಪರಿಸ್ಥಿತಿ ಏನು ? ಇಂತಹ ಪರಿಸ್ಥಿತಿಯ ನಿರ್ಮಾಣ ನೀವು ಏಕೆಮಾಡಿಕೊಂಡಿರಿ ? ಅವರನ್ನೇ ಆರು ತಿಂಗಳವರೆಗೆ ಮುಂದುವರೆಸಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲವಲ್ಲಾ ? ಈ ದನದ ಡಾಕ್ಟರ್, ಕೋಳಿ, ಹಂದಿ ಡಾಕ್ಟರ್‌ಗಳನ್ನು ನೇಮಕಮಾಡಿದ್ದೀರಿ. ಅವರ ಮೇಲೆ ವಿಶ್ವಾಸ ಇಟ್ಟು ಮಾಡಿದ್ದು, ಅವರು ಏನು ಮಾಡುತ್ತಾರೋ ಗೊತ್ತಿಲ್ಲ.

(ಗೊಂದಲ)

ಚೇರ್ಮನ್:- ಇನ್ನು ಎಷ್ಟು ಹೊತ್ತು ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ.ಬಿ.ಚಂದ್ರೇಗೌಡ :- ಆಯಿತು. ನಾನು ಒಂದು ಉದಾಹರಣೆ ಹೇಳುತ್ತೇನೆ. ನಾನು ಒಬ್ಬ ಶಾಸನಸಭಾ ಸದಸ್ಯ. ನನ್ನ ಕ್ಷೇತ್ರದಲ್ಲಿ ಸರ್ಕಾರದವರು ಆಶ್ರಯ ಕಾರ್ಯಕ್ರಮದ ಅಡಿಯಲ್ಲಿ ಸುಮಾರು 3046 ಕ್ಕಿಂತ ಸ್ವಲ್ಪ ಹೆಚ್ಚಿಗೆ ಸೈಟುಗಳನ್ನು ಕೊಡುವುದಕ್ಕೆ ಪ್ರಯತ್ನ

ಮಾಡಿದ್ದರು. ಮೊದಲು ಮಂಡಲಪಂಚಾಯತ್‌ಗಳು ಅಸ್ತಿತ್ವದಲ್ಲಿದ್ದಾಗ 2016 ಸೈಟುಗಳನ್ನು ನಾನೇ ಖುದ್ದಾಗಿ ಹಂಚಿದ್ದೆ. ಇವತ್ತು ಸಾವಿರಗಟ್ಟಲೆ ಸೈಟು ಹಂಚಬೇಕು ಎಂದರೆ ಹೇಗೆ ಆಯ್ಕೆ ಮಾಡುವುದು ? ಅದಕ್ಕಾಗಿ ಒಂದು ಸಮಿತಿ. ಅದಕ್ಕೆ ಮತ್ತೊಂದು ಸಮಿತಿ. ಪ್ರತಿಯೊಂದು ಮಂಡಲದಲ್ಲಿ 16 ರಿಂದ 18 ಜನ ಚುನಾಯಿತರಾದಂಥ. . . ..

ಶ್ರೀ ಎಸ್.ರಮೇಶ್:- ಆಶ್ರಯ ಕಮಿಟಿಗೆ ತಾವೇ ಅಧ್ಯಕ್ಷರು.

ಶ್ರೀ ಡಿ.ಬಿ.ಚಂದ್ರೇಗೌಡ:- ನಾನು ಅಧ್ಯಕ್ಷನಾಗಿ, ಒಂದು ಲಕ್ಷದ 15 ಸಾವಿರ ಜನರ ಪ್ರತಿನಿಧಿಯಾಗಿ, ಸುಮಾರು 2 ಲಕ್ಷ ಪಾಪ್ಯುಲೇಷನ್ ಇದ್ದು, 600 ರಿಂದ 800 ಗ್ರಾಮ ಪಂಚಾಯಿತಿಗಳ ಬಗ್ಗೆ ವಿಷಯ ತಿಳಿದು ಕೊಂಡಿದ್ದೇನೆ. ನಿಮಗೆ ಅರ್ಥವಾಗುವುದಿಲ್ಲ ರಮೇಶ್. ನಾವು ಹಳ್ಳಿಯವರು, ನೀವು ಪೇಟೆ ಜನ. ಹಳ್ಳಿಗಳಿಗೆ ಹೋಗಿ ಫಲಾನುಭವಿಗಳನ್ನು ಗುರುತಿಸಬೇಕಾದರೆ, ಆಯಾಯ ಗ್ರಾಮಗಳ ಮುಖಂಡರು ಬೇಕಾಗುತ್ತಾರೆ. ಈ ಮುಖಂಡತ್ವವನ್ನು ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್ ವ್ಯವಸ್ಥೆ ಕೊಟ್ಟಿತ್ತು. ನಿಜವಾಗಿಯೂ ನಿಮಗೆ ಈ ಕಾರ್ಯಕ್ರಮದಲ್ಲಿ ವಿಶ್ವಾಸ ಇದ್ದರೆ ಇಂತಹ ವ್ಯವಸ್ಥೆಯನ್ನು ಏಕೆ ಕಿತ್ತು ಹಾಕಿದಿರಿ ? ನೇಗಿಲ ಭಾಗ್ಯ ಮುಂತಾದ ಏನೇನೋ ಭಾಗ್ಯಗಳನ್ನು ನೀವು ಕೊಟ್ಟಿದ್ದೀರಿ. ಆ ಭಾಗ್ಯಗಳನ್ನು ಕೊಡುವಾಗ ಫಲಾನುಭವಿಗಳನ್ನು ಗುರುತಿಸತಕ್ಕ ಕೆಲಸವನ್ನು, ನನಗೆ ತಿಳಿದಹಾಗೆ ಯಾವ ಶಾಸಕನೂ ಪರಿಪೂರ್ಣವಾಗಿ ಆ ಗ್ರಾಮದ ಪರಿಚಯ ಇಟ್ಟುಕೊಂಡು ಮಾಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಸ್ಥಳೀಯ ಪ್ರತಿನಿಧಿಗಳು ಬೇಕು. ನಾವು ನಮ್ಮ ಕೆಲಸದ ಮಧ್ಯೆ ಅಲ್ಲಿರತಕ್ಕ ಗ್ರಾಮದ ಮುಖಂಡರಂತೆ ಹೋಗಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದಕಾರಣ ಅಲ್ಲಿರತಕ್ಕಂಥ ಚುನಾಯಿತ ಪ್ರತಿನಿಧಿಗಳು ಏನಿದ್ದರು, ಆ ವ್ಯವಸ್ಥೆಯೇ ಇದ್ದಿದ್ದರೆ ಸರ್ಕಾರ ಹಮ್ಮಿಕೊಂಡಿರತಕ್ಕಂಥ ಕಾರ್ಯಕ್ರಮಗಳನ್ನು ಸುಲಭವಾಗಿ ಜಾರಿಗೆ ತರುವುದಕ್ಕೆ ಸಾಧ್ಯವಾಗುತ್ತಿತ್ತು. ಈಗ ಈ ಮಾರ್ಗವನ್ನು ಕಿತ್ತುಹಾಕಿದಿರಿ. ಇದರ ಉದ್ದೇಶ ಏನು? ಸಹಕಾರ ಸಂಘಗಳಿಗೆ ನಾಮಿನೇಷನ್ ಮಾಡಿದ ಹಾಗೆ,ಇಲ್ಲಿಯೂ ಹುಚ್ಚಾಪಟ್ಟೆ ನಾಮಿನೇಷನ್‌ಗಳು. ಅದಕ್ಕೆ ಒಂದು ಗೌರವ ಬೇಡವೆ ? ಅನೇಕ ಸೊಸೈಟಿಗಳಲ್ಲಿ ನಾಮಿನೇಷನ್, ಜಿಲ್ಲಾಪರಿಷತ್‌ಗಳಲ್ಲಿ ನಾಮಿನೇಷನ್, ಮಂಡಲ್ ಪಂಚಾಯತ್‌ಗಳಲ್ಲಿ ನಾಮಿನೇಷನ್ ಮಾಡಬೇಕೆಂದು ಸರ್ಕಾರದ ಆಲೋಚನೆ ಏನಿದೆಯೋ ಅದನ್ನು ಮಾನ್ಯ ಹಿರಿಯ ಸದಸ್ಯರಾದ ಶ್ರೀ ವೆಂಕಟಪ್ಪನವರು ತಮ್ಮ ಮಾತುಗಳಲ್ಲಿ ಹೊರ ಹೊಮ್ಮಿಸಿದ್ದಾರೆ.

ಶ್ರೀ ಎಂ.ವಿ.ವೆಂಕಟಪ್ಪ:- ಅದು ಅಲ್ಲೇ ಇದೆ. ನೀವು ಮಾಡಿದ್ದು ಸ್ವಾಮಿ. . .

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ :- ನಾವು ಮಾಡಿರುವುದಕ್ಕೂ, ನೀವು ಮಾಡಿರುವುದಕ್ಕೂ ದಯವಿಟ್ಟು ಸ್ವಲ್ಪ ವ್ಯತ್ಯಾಸ ತಿಳಿದುಕೊಳ್ಳಿ.

(ಆಡಳಿತ ಪಕ್ಷದ ಕೆಲವು ಸದಸ್ಯರು "ಓಹೋ" ಎಂದು ಕೂಗಿದರು)

ಶ್ರೀ ಡಿ.ಬಿ.ಚಂದ್ರೇಗೌಡ:- ನಿಮಗೆ ತಿಳಿದುಕೊಳ್ಳುವುದಕ್ಕೆ ಆಗದಿದ್ದರೆ ಏನು ಮಾಡಬೇಕು?

(ಗೊಂದಲ)

ಶ್ರೀ ಮಲ್ಲಾರಿಗೌಡ.ಎಸ್.ಪಾಟಿಲ್:- ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ,ಅವರ ಕಡೆಯವರೇ, ಮಧ್ಯೆ ಮಧ್ಯೆ ಎದ್ದುನಿಂತು ಮಾತನಾಡುತ್ತಿದ್ದಾರೆ.

(ಗೊಂದಲ)

ಶ್ರೀ ಎಲ್.ಆರ್.ಶಿವರಾಮೇಗೌಡ:- ಮಾನ್ಯ ಬನ್ನಿಕೋಡ್‌ರವರು ಬಹಳ ಕೂಗುತ್ತಿದ್ದಾರೆ,

ಇದರಿಂದ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆಂಬುದು ನಮಗೆ ಕೇಳುತ್ತಾ ಇಲ್ಲ.

ಡಾ.ವೈ.ನಾಗಪ್ಪ: ಪಾಯಿಂಟ್ ಆಫ್ ಆರ್ಡರ್. ವಿರೋಧಪಕ್ಷದ ನಾಯಕರು ಮಾತನಾಡುತ್ತಾ, ಪ್ರಾವಿಷನ್ ಇಲ್ಲದೇ ಇದ್ದರೂ ಸಿಕ್ಕಾಪಟ್ಟೆ ನಾಮಿನೇಷನ್ ಮಾಡಿದಿರಿ ಎಂದು ಹೇಳಿದರು. ಇವರ ಸರ್ಕಾರ ಇದ್ದಾಗ, ತುಮಕೂರು ಜಿಲ್ಲೆಯಲ್ಲಿ ಪಿ.ಎಲ್.ಡಿ.ಬ್ಯಾಂಕಿಗೆ 7 ಜನರನ್ನು ನಾಮಿನೇಷನ್ ಮಾಡಿದ್ದಾರೆ. ಪ್ರಾವಿಷನ್ ಇಲ್ಲದೇ ಇದ್ದರೂ, ಇವರ ಅಧಿಕಾರ ಇದ್ದಾಗ ಈ ರೀತಿ ಮಾಡಿದ್ದಾರೆ. ಇದಕ್ಕೆ ಅವರ ಉತ್ತರ ಕೊಡಲಿ.

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ:- ಅವರ ಪಾಯಿಂಟ್ ಆಫ್ ಆರ್ಡರ್‌ಗೆ ತಾವು ಏನಾದರೂ ಹೇಳಬೇಕಲ್ಲಾ.

(ಗೊಂದಲ)

ಚೇರ್ಮನ್:- ಈ ರೀತಿ ಚರ್ಚೆ ಮಾಡಿದರೆ, ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಶ್ರೀ ಎನ್.ಆರ್.ನಾಯಕ್:- ಅವರ ಅವಧಿಯಲ್ಲಿ 7 ಜನರನ್ನು ನಾಮಿನೇಷನ್ ಮಾಡಿದ್ದಾರೆಂದು ತಿಳಿದ ``ಂತು. ಇದು ಸರಿಯೋ ತಪ್ಪೋ ಎನ್ನುವುದಕ್ಕೆ ಒಂದು ತೀರ್ಮಾನ ಕೊಡಿ, ತಮ್ಮ ಆದೇಶ ಬರಲಿ. ಒಂದುವೇಳೆ ಅದು ಸರಿ ಎಂದು ಹೇಳಿದರೆ, ಹಿಂದೆ ಮಾಡಿದಂತೆ,ಮುಂದೆ ಭವಿಷ್ಯದಲ್ಲೂ ಮಾಡಬಹುದು. . . . .

ಚೇರ್ಮನ್:- ಮಾನ್ಯ ವಿರೋಧ ಪಕ್ಷದ ನಾಯಕತರೇ,ನಿಮಗೆ ಇನ್ನೂ ಎಷ್ಟು ಗಂಟೆಗಳ ಕಾಲಾವಕಾಶ ಬೇಕು. . ..

ಶ್ರೀ ಡಿ.ಬಿ.ಚಂದ್ರೇಗೌಡ:- ನನಗೆ ಇನ್ನೂ 5 ಗಂಟೆಗಳ ಕಾಲ ಬೇಕು.

ಚೇರ್ಮನ್: ಹಾಗೆ ಕೊಡುವುದಕ್ಕಾಗುವುದಿಲ್ಲ, ಬೇಗ ಮಾತನಾಡಿ ಮುಗಿಸಿ.

SRI D.B.CHANDREGOWDA:- The chair cannot direct me to curtail my speech.

ಶ್ರೀ ಎಸ್.ರಮೇಶ್:- ಮಾನ್ಯ ಬನ್ನಿಕೋಡ್‌ರವರು ಮಾತನಾಡುವಾಗ, ತಾವೇನೂ ಮಾತನಾಡಿಲ್ಲ. ನಮ್ಮನ್ನೂ ಜನರು ಆರಿಸಿ ಕಳುಹಿಸಿದ್ದಾರೆ, ನಾವು ಮಾತನಾಡುವುದು ತಪ್ಪೇ. ಆದೂ ನೀವು ಆ ಕಡೆಯಲ್ಲಿ ಕುಳಿತಿದ್ದೀರಿ.

ಶ್ರೀ ಡಿ.ಬಿ.ಚಂದ್ರೇಗೌಡ:- ಜನ ಅವರನ್ನು ಕಳುಹಿಸಿದ್ದಾರೆ, ಆ ಕಾರಣಕ್ಕಾಗಿ ಅವರೂ ಎರಡು ಗಂಟೆ ಮಾತನಾಡುತ್ತಾರೆ. ಆದರೆ ನಿಮಗೆ ಅದನ್ನು ಕೇಳುವುದಕ್ಕೂ ಆಗುತ್ತಾ ಇಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್ :- ನಿಮ್ಮ ಲೋಪದೋಷಗಳು ಅದರಲ್ಲೂ ಮುಖ್ಯವಾಗಿ ನಿಮ್ಮ ಸರ್ವಾಧಿಕಾರಿ ಮನೋಭಾವವನ್ನು ಜನರಿಗೆ ಹೇಳುತ್ತಿದ್ದೇವೆ, ಇದರಿಂದ ನಿಮ್ಮ ಮನಸ್ಸಿಗೆ ನೋವಾಗುತ್ತಿದೆಯೇ . . . . .

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಇದೊಂದು ಸಣ್ಣ ತಿದ್ದುಪಡಿ.

ಶ್ರೀ ಆರ್.ಎನ್.ನಾಯಕ್:- ನಿಮ್ಮ ಹಕ್ಕು, ನೀವು ಮಾತನಾಡುತ್ತಿದ್ದೀರಿ. ಆದರೆ ಯಾವ ಕಾನೂನು ಕೆಳಗೆ ಹೆಚ್ಚುಸಮಯ ಕೇಳುತ್ತಿದ್ದೀರಿ. ನೀವು ಇಲ್ಲಿ 25 ತಾಸು ಮಾತನಾಡುವುದಕ್ಕೆ ಆಗುತ್ತದೆಯೇ, ತಾವು ಸೀನಿಯರ್ ಇದ್ದೀರಿ, ನೀವು ಹೇಳಿ. ಅದರಂತೆ ನಾವೂ ಕೂಡ

ತಿಳಿದುಕೊಳ್ಳೋಣ.

ಶ್ರೀ ಡಿ.ಬಿ.ಚಂದ್ರೇಗೌಡ :- ನಾವು ನಮ್ಮ ಹಕ್ಕನ್ನು ಚಲಾಯಿಸುತ್ತಿದ್ದೇವೆ. ಅವರು ಎರಡು ವಿಚಾರ ಪ್ರಸ್ತಾಪ ಮಾಡಿದ್ದಾರೆ. ಒಂದು, ನಾಮಿನೇಷನ್ ಮಾಡುವುದಕ್ಕೆ 8ನೇ(ಸಿ) ನಲ್ಲಿ ಅವಕಾಶ ಕೊಟ್ಟಿದ್ದಾರೆ. ನಾಮಿನೇಷನ್ ಮಾಡುವುದು ಯಾವ ಸಂದರ್ಭದಲ್ಲಿ ಅಂದರೆ ಇಂತಹ ವಿಶೇಷ ಸಂದರ್ಭಗಳು ಬಂದಾಗ, ಮೂರನೇ ಎರಡು ಸದಸ್ಯರು ರಾಜಿನಾಮೆ ಕೊಟ್ಟರೆ, ಅಥವಾ ಕೋರ್ಟಿನಲ್ಲಿ ಸ್ಟೇ ಕೊಟ್ಟರೆ ಇಂತಹ ಪ್ರಸಂಗಗಳು ಬಂದಾಗ ನಾಮಿನೇಷನ್ ಮಾಡುತ್ತಾರೆ. ಆದರೆ, ಇದು ಅಂತಾದ್ದು ಅಲ್ಲ. ಅಸಿಸ್ಟೆಂಟ್ ಕಮೀಷ್‌ನರ್ ಹುದ್ದೆಯನ್ನು ಏಕೆ ಮಾಡಿದರು ಎಂಬುದನ್ನು ಹೇಳುತ್ತೇನೆ. ಯಾವಾಗ ಆಡಳಿತಾಧಿಕಾರಿಗಳ ಪ್ರಶ್ನೆ ಬರುತ್ತದೆ ? ಆಡಳಿತಾಧಿಕಾರಿಗಳ ಪ್ರಶ್ನೆ ಬರತಕ್ಕಂತಾದ್ದು,ರಾಜ್ಯದ ನಾಲ್ಕೋ, ಹತ್ತೋ,ಇಪ್ಪತ್ತೋ ಮಂಡಲಗಳಲ್ಲಿ ಏನಾದರೂ ಅಪರಾಧಗಳಾಗಿದ್ದರೆ, ಮಾಡಬಹುದು ಅದು ಬಿಟ್ಟು ಸಾರಾಸಗಟಾಗಿ ಕಿತ್ತುಹಾಕತಕ್ಕ ಸರ್ಕಾರ ಬರುತ್ತದೆಂದು ನಾವು ಊಹೆಯನ್ನು ಮಾಡಲಿಲ್ಲ. ಸರಾಸಗಟು ಕಿತ್ತು ಹಾಕುವ ಸರಕಾರ ಬರುತ್ತದೆಂದು ನಮಗೆ ಗೊತ್ತಾಗಿದ್ದರೆ ನಾವೂ ಅಸಿಸ್ಟೆಂಟ್ ಕಮೀಷನರ್ ಅಲ್ಲ, ದನದ ಡಾಕ್ಟರು, ಅವರು, ಇವರು ಎಲ್ಲವನ್ನೂ ಸೇರಿಸಿ ನೇಮಕ ಮಾಡುತ್ತಿದ್ದೆವು. ಇದು ಒಂದು ಭಾಗ. ಜಿಲ್ಲಾ ಪರಿಷತ್‌ಗೆ ಅಡ್ಮಿನಿಸ್ಟ್ರೇಟರ್‌ನ್ನು ಬೈ ನೇಮ್ ಬೈ ಡಿಸಿಗ್ನೇಷನ್ ನಿಮ್ಮ ಗೆಜೆಟ್ ನೋಟಿಫಿಕೇಷನ್‌ನಲ್ಲಿ ಯಾರನ್ನು ಮಾಡಬೇಕೆಂದು ಹೇಳಿದ್ದೀರಿ, ಡಿವಿಜನಲ್ ಕಮೀಷನರ್ ಅಲ್ಲವೇ ಸ್ವಾಮಿ? ಮಾನ್ಯಮಂತ್ರಿಗಳೇ, ಜಿಲ್ಲಾ ಪರಿಷತ್‌ಗೆ ಅಡ್ಮಿನಿಸ್ಟ್ರೇಟರ್ ಡಿವಿಜನಲ್ ಕಮೀಷನರ್ ಅಲ್ಲವೇ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನೀವು ಕೊಶ್ಚನ್ ಹಾಕುವುದು ನಾನು ಉತ್ತರ ಕೊಡುವುದು ಅಲ್ಲ. ತಾವು ಹೇಳಿಬಿಡಿ. ನಾನು ಕೊನೆಯಲ್ಲಿ ಉತ್ತರ ಕೊಡುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: ಡಿವಿಜನಲ್ ಕಮೀಷನರ್ ಹೌದು ಎಂದು ಆದರೆ ಈಗ ಆ ಹುದ್ದೆಯನ್ನು ಕಿತ್ತು ಹಾಕಬೇಕೆಂದು ತೀರ್ಮಾನ ಮಾಡಿದ್ದೀರಿ. ಜಿಲ್ಲಾ ಪರಿಷತ್‌ಗಳ ಒಂದೊಂದು ಡಿವಿಜನ್‌ನ ಜವಾಬ್ದಾರಿಯನ್ನು ಒಬ್ಬೊಬ್ಬ ಡಿವಿಜಿನಲ್ ಕಮೀಷನ್‌ರವರಿಗೆ ಕೊಟ್ಟಿದ್ದೇವೆಂದು ಹೇಳಿ, ಗೆಜೆಟ್ ನೋಟಿಫಿಕೇಷನ್ ಮುಖಾಂತರ ಈಗ ಒಪ್ಪಿಕೊಂಡಿದ್ದೀರಲ್ಲಾ,ಅದನ್ನು ನಾನು ಓದುತ್ತೇನೆ.

" The Rural Department and Panchayat Raj Secretariat Notification No.RDP 6 ZPS 92 Bangalore 13th January,1992. Whereas the term of the out-going Members of the Bangalore Rural Zilla Parishad expired on 13-9-1992 and it has not been possible to complete the General Elections to the Bangalore Rural Zilla Parishad beforethe expiry of the term of office of the out-going Members.

Now, in exercise of the power conforred under sub-section(1) of Section 272(b) of the Karnataka Zilla Parishad andTaluk Samithis and Mandal Panchayat andNyaya Panchayat Act, 1983, the Government of Karnataka hereby appoint Sri Shanti Counsel, Divisional Commission, Bangalore Division as

Adminostrater of the Bangalore RuralZilla Parishad in addition to his own duties for a period of one year with effectfrom 14th January, 1992.

BY ORDER AND IN THE NAME OF THE GOVERNOR OF KARNATAKA.

This is the Gazettee Notification. Now this Government want to abolish the Divisional Commissioners existing in the State, Office of the Divisional Commissioner........

ಶ್ರೀ ಟಿ.ಎಂ. ಮಂಜುನಾಥ್(ಸಣ್ಣ ಉಳಿತಾಯ ರಾಜ್ಯ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾ, ಈ ಜಿಲ್ಲಾಪರಿಷತ್‌ನ ಅಡ್ಮಿನಿಸ್ಟ್ರೇಟರನ್ನಾಗಿ ಡಿವಿಜಿನಲ್ ಕಮೀಷನರವರನ್ನು ಹಾಕಿದ್ದೀರಿ. ನೋಟಿಫಿಕೇಷನ್ ಮಾಡಿದ್ದೀರಿ. ಎಂದು ಹೇಳಿ ಅದನ್ನು ಓದಿದರು. ನಮ್ಮ ಸರ್ಕಾರ ಡಿವಿಜಿನಲ್ ಕಮೀಷ್‌ನರ್ ಮತ್ತು ಅಸಿಸ್ಟೆಂಟ್ ಕಮೀಷನರ್ ಹುದ್ದೆಗಳನ್ನು ತೆಗೆದು ಹಾಕಬೇಕೆಂಬ ತೀರ್ಮಾನಕ್ಕೆಬಂದಿದೆ. ಆದರೆ ದಕ್ಕೆ ಆಜ್ಞೆ ಮಾಡಿಲ್ಲ. ಆದರ ಅರಿವು ಅವರಿಗೂ ಇದೆ. ಅದನ್ನುಮಾಡುವುದಕ್ಕಿಂತ ಮುಂಚೆ ಏನು ಮಾಡಬೇಕೆಂದು ನಮಗೆ ಗೊತ್ತಿದೆ. ಇದು ಒಂದು ಅವರ ಗಮನಕ್ಕೆ ತರುವುದು. ಎರಡನೆಯದು ಈ ಅಮೆಂಡ್‌ಮೆಂಟ್‌ಗೆ ಸಂಬಂಧಪಟ್ಟಂತೆ ಅವರು ವ್ಯಾಖ್ಯಾನ ಮಾಡಿದರೆ ಪರವಾಗಿಲ್ಲ. ನಾವು ಏನು ಜಿಲ್ಲಾ ಪರಿಷತ್ ಬಗ್ಗೆ ಒಂದು ಅಮೆಂಡ್‌ಮೆಂಟ್ ತಂದಿದ್ದೇವೆ ಅದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿದರೆ ಪರವಾಗಿಲ್ಲ. ಅವರು ತಮಗೆ ಇನ್ನೂ 5 ಘಂಟೆ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ತಾವು ಕಾಲ ನಿಗದಿ ಮಾಡಿದರೆ ಮುಂದಿನ ಕಾರ್ಯಕ್ರಮಗಳಿಗೆ ಹೋಗತಕ್ಕಂಥ ಸನ್ನಿವೇಶ ಇದೆ. ಆದುದರಿಂದ ತಾವು ದಯವಿಟ್ಟು ಅವರಿಗೆ ಒಂದು ಕಾಲ ನಿಗದಿ ಮಾಡಿರಿ. ಇಷ್ಟು ಘಂಟೆ, ಅಷ್ಟು ನಿಮಿಷ ಎಂದು ತಾವು ತೀರ್ಮಾನ ಮಾಡಿದರೆ ಅದು ಸರಿ, ಇಲ್ಲದೇ ಹೋಗದೆ ಈ ವಿಷಯ ಇದೇ ರೀತಿ ಹೋದರೆ ಮುಂದಿನ ಕಾರ್ಯಕ್ರಮಗಳಿಗೆ ತೊಂದರೆಯಾಗುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ :- ಇದೇನು ಸಣ್ಣ ಉಳಿತಾಯ ಎಂದು ತಿಳಿದುಕೊಂಡಿದ್ದೀರೋ ಹೇಗೆ? ಇದೇನು ಸಣ್ಣ ಉಳಿತಾಯವೇ?

ಶ್ರೀ ಟಿ.ಎಂ.ಮಂಜುನಾಥ್:- ತಾವು ಏನು ಮಾತನಾಡಿದರೂ ನಾವು ಕೇಳುತ್ತೇನೆ. ನಾನು ಏನು ಹೇಳಿದೆ ಎಂದರೆ ಸಮಯ ಇಷ್ಟು ಎಂದು ಹೇಳಿ ಬಿಡಿ, ನಮಗೆ ಮುಂದಿನ ಕಾರ್ಯಕ್ರಮಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಮಾನ್ಯ ಹಿರಿಯ ಸದಸ್ಯರಿಗೆ ಏನಾಗಿದೆ ಎಂದರೆ ನಿಮ್ಮನ್ನು ಸಣ್ಣ ಉಳಿತಾಯ ಮಂತ್ರಿಗಳನ್ನಾಗಿ ಮಾಡಿ ಪ್ರತಿಯೊಂದರಲ್ಲೂ ಉಳಿತಾಯ ತೆಗೆದುಕೊಂಡು ಬರುತ್ತೇನೆಂದು ಹೇಲುತ್ತಿದ್ದೀರಿ. ಕಾಲವನ್ನೂ ಉಳಿತಾಯ ಮಾಡಿರಿ ಎಂದು ಹೇಳುತ್ತಿದ್ದೀರಿ. ಇದು ಏನು ಸ್ವಾಮಿ? ಬರೀ ಸಣ್ಣ ಉಳಿತಾಯಕ್ಕೆ ಮಾತ್ರ ತಾವು ಸೀಮಿತವಾಗಿರಿ.

ಚೇರ್ಮನ್:- ನಿಮಗೆ 10 ನಿಮಿಷ ಮಾತ್ರ ಟೈಂ ಕೊಡುತ್ತೇನೆ. You have taken one hour and odd.

SRI D.B.CHANDRE GOWDA:- I would appeal to the

chair that this is not a precedent or prestige. You cannot restrict the time of the Leader of the opposition. There should se some understanding or some convertion to be followed. I am not trying to cast some aspersions on the chair. It is and important issue. ನನಗೆ ಇಲ್ಲಿ ಮಾತವಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳಿದರೆ, ನಮ್ಮ ತೀರ್ಮಾನಕ್ಕೆ ವಾಪಸ್ ಹೋಗಬೇಕಾಗುತ್ತದೆ. ನಾನು ಹೇಳುವಂಥಾದ್ದು, ಚರ್ಚೆ 5 ಗಂಟೆ ಆಗಬಹುದು, ದಿನವೂ ಆಗಬಹುದು ಅಥವಾ ಮೂರನೇ ದಿನವೂ ಆಗಬಹುದು.

ಶ್ರೀಮತಿ ಮೋಟಮ್ಮ :-ತಾವೂ ಕೂಡ ಬಿ.ಎ.ಸಿ.ನಲ್ಲಿರುತ್ತೀರಿ. ಕಾಲದ ಪರಿಮಿತಿಯನ್ನು ನೀವೇ ಹಾಕಿಕೊಂಡಿರುತ್ತೀರಿ.

ಶ್ರೀ ಎಸ್.ಹೆಚ್.ಕೌಜಲಗಿ :-ರಾತ್ರಿ ಒಂಭತ್ತೂವರೆ ಗಂಟೆಯವರೆಗೂ ಸಭೆ ನಡೆಸಿ, ಕೋರಂ ಇಲ್ಲದಿದ್ದಾಗ, ತಮ್ಮ ಬೇಡಿಕೆಗಳನ್ನು ಪಾಸ್ ಮಾಡಿಕೊಳ್ಳುತ್ತೀರಿ.....

ಶ್ರೀ ಡಿ.ಬಿ.ಚಂದ್ರೇಗೌಡ :- ಇಂತಹ ಕ್ರಾಂತಿಕಾರಕವಾದ ಮಸೂದೆಯನ್ನು 30 ನಿಮಿಷದಲ್ಲಿ ಪಾಸ್ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ. .

ಶ್ರೀ ಎ.ಕೆ.ಅನಂತಕೃಷ್ಣ:- ಮಾನ್ಯ ವಿರೋದಪಕ್ಷದ ನಾಯಕರು ನನಗೆ ಸ್ವಲ್ಪ ಬೆಳಕುಚೆಲ್ಲಬೇಕು. ತಾವು merits and demerits ಬಗ್ಗೆ ಮಾತನಾಡುತ್ತಿದ್ದೀರಾ ಅಥವಾ ಬಿಲ್ಲಿನ ಮೆರಿಟ್ಸ್ ವಿಚಾರ ಮಾತನಾಡುತ್ತಿದ್ದೀರಾ ಅಥವಾ ಡಿ- ಮೆರಿಟ್ಸ್ ವಿಚಾರ ಮಾತನಾಡುತ್ತೀರಾ? ನೀವು ಯಾವ ಡೀಟೈಲ್ಸ್‌ಗೆ ಹೋಗುತ್ತಿದ್ದೀರಿ. ಈ ಬಿಲ್ ಇಂಟ್ರಡಕ್ಷನ್ ವಿಷಯದಲ್ಲಿ ತಮ್ಮ ಅಬ್ಜಕ್ಷನ್ ರೈಸ್ ಮಾಡಿದಿರಿ, ಅದು ಎಲ್ಲಿಗೆ ನಿಲ್ಲಿತು, ಇದರ ಬಗ್ಗೆ ಒಂದು ತೀರ್ಮಾನ ಆಗಬೇಕು. ತಾವು ಮೆರಿಟ್ಸ್ ಮೇಲೆಮಾತನಾಡುವುದಾದರೆ, ಆ ವಿಷಯಗಲ್ಲಿ ನಮಗೆ ಸ್ವಲ್ಪ ತಿಳುವಳಿಕೆ ಕೊಟ್ಟರೆ ಒಳ್ಳೆಯದು.

SRI D.B.CHANDRE GOWDA:- Preliminary objections have been over ruled.ನೀವು ತಡವಾಗಿ ಬಂದರೆನಾನೇನು ಮಾಡಲಿ. ನೀವುಗಳು ಬಂದಬಂದಹಾಗೆಲ್ಲಾ ಮೊದಲಿನಿಂದ ನಾನು ಶುರು ಮಾಡಬೇಕಾಗುತ್ತದೆ. Considered ruling came from the Chair that the objection was over-ruled. Then, I was discussing about Article 40 of the Constitution which pointedly refers to decentralisation of Panchayat Raj. At that stage hon.Member questioned as to the urgency in appointing the Administrators. ಆಗ ಅಸಿಸ್ಟೆಂಟ್ ಕಮೀಷನರ್ ಅವರನ್ನು ಎಲ್ಲಿ ತರುವುದು.2,500 ಮಂಡಲ್ ಪಂಚಾಯ್ತಿಗಳಿಗೆ ಎಂದು ಹೇಳಿದರು. ನಾವು ಈ 2,500 ಪಂಚಾಯ್ತಿಗಳಿಗೆ ತರುವುದಕ್ಕೆ ಮಾಡಿರಲಿಲ್ಲ. ನೀವು ವಿಭಾಗಾಧಿಕಾರಿಗಳ ಹುದ್ದೆಗಳನ್ನು ರದ್ದುಮಾಡುತ್ತೇವೆಂದು ಹೇಳಿದ್ದೀರಿ. ಈ ರೀತಿ ಈ ಹುದ್ದೆಗಳನ್ನು ರದ್ದುಮಾಡುತ್ತೇವೆಂದು ಹೇಳಿ, ಜಿಲ್ಲಾಪರಿಷತ್ತಿನ ಜವಾಬ್ದಾರಿಯನ್ನು ಅವರ ಕೈಗೇ ಕೊಟ್ಟದ್ದೀರಲ್ಲಾ, ನಿಮ್ಮ ಗೆಜೆಟ್ ನೋಟಿಫಿಕೇಷನ್‌ನಲ್ಲಿ, ಜಿಲ್ಲಾಪರಿಷತ್ತಿನ ಆಡಳಿತಾಧಿಕಾರಿಯಾಗಿ ವಿಭಾಗಾಧಿಕಾರಿಗಳನ್ನು ನೇಮಕ ಮಾಡುತ್ತೇವೆಂದು ಈ ಮಸೂದೆಯಲ್ಲಿ ತಿದ್ದುಪಡಿ ತಂದಿದ್ದೀರಿ ಮತ್ತೆಶಾಸನ ಸಭೆಯಲ್ಲಿ ಜಿಲ್ಲಾಧಿಕಾರಿಗಳ ಹುದ್ದೆಯನ್ನು ವಜಾ ಮಾಡುತ್ತೇವೆಂದು ಹೇಳಿದ್ದೀರಿ,ಇದು ಯಾವ ರೀತಿ

ಸರಿಹೋಗುತ್ತದೆ. ನಿಮಗೆ ಒಂದು ಜವಾಬ್ದಾರಿ ಬೇಡವೇ, ಯಾವುದಾದರೊಂದು ನಿರ್ಣಯಕ್ಕೆ ನಿಲ್ಲೋಣ, ಇದು ನನ್ನ ಆಕ್ಷೇಪಣೆ. ಮೂಲತ: ಈ ಒಂದು ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ, In the Indian System that we have accepted, the planning process is our way of Parliamentary Life. ಈ ಯೋಜನೆಯನ್ನು ನೀವೇನು ಆಯ್ಕೆ ಮಾಡಿಕೊಂಡಿದ್ದೀರಿ, ಇದರ ಜಯಾಪಜಯಗಳು, Considerably depends upon the involvement of the local people, i.e. at the District level, people at the Panchayat level. ಮಾನ್ಯ ಅಧ್ಯಕ್ಷರೇ, ಮೊದಲನೇ ಪಂಚವಾರ್ಷಿಕ ಯೋಜನೆ ವೆಚ್ಚ ಸುಮಾರು 2,018 ಕೋಟಿ ರೂಪಾಯಿ ಅದರೆ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯದ ಭಾಗವೇ 11 ಸಾವಿರ ಕೋಟಿ ರೂಪಾಯಿಗಳು. ಅದೇ ರಾಷ್ಟ್ರದ್ದು ತೆಗೆದುಕೊಂಡರೆ ಸುಮಾರು 8 ಸಹಸ್ರ ಕೋಟಿ ಅಥವಾ ಅದಕ್ಕಿಂಥ ಹೆಚ್ಚು ಆಗಬಹುದು. 10 ಸಹಸ್ರ ಕೋಟಿ ರೂಪಾಯಿಗೆ ಮೀರಬಹುದು. ಎನ್ನತಕ್ಕಂಥ ಒಂದು ಅಂದಾಜು ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ನಮ್ಮ ರಾಜ್ಯದ್ದೇ 8ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟಕ್ಕೆ ಬರಬಹುದು ? 11 ಸಾವಿರ ಕೋಟಿ ರೂಪಾಯಿಗೆ ಬರುತ್ತದೆ. ವಾರ್ಷಿಕ ಪ್ಲಾನ್ 2158 ಕೋಟಿ ರೂಪಾಯಿಗಳು.

ಶ್ರೀ ಎಸ್.ಬಂಗಾರಪ್ಪ :- ತಾವು ಬಜೆಟ್ ಮೇಲೆ ಭಾಷಣ ಮಾಡುತ್ತಿರಬಹುದೆಂದು ನಾನು ಬಹಳ ಸಂತೋಷವಾಗಿದ್ದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ಬಜೆಟ್‌ಅಲ್ಲ. The success of the Planning Process depends considerably on the involvement of the people at the district level and the Panchayat level. ನೀವು 2158 ಕೋಟಿ ರೂಪಾಯಿಗಳ ಏನು ವಾರ್ಷಿಕ ಪ್ಲಾನ್ ಹಾಕಿದ್ದೀರಿ, 11 ಸಾವಿರ ಕೋಟಿ ರೂಪಾಯಿನ ಪಂಚವಾರ್ಷಿಕ ಯೋಜನೆಯನ್ನು ಹಾಕಿದ್ದೀರಿ, ಇಷ್ಟು ದೊಡ್ಡ ಪ್ರಮಾಣದ ಮೊತ್ತವನ್ನು ಜನರಿಗೆ ತಲುಪಿಸತಕ್ಕಂಥ ಕಾರ್ಯದಲ್ಲಿ ನೀವು ಜನರನ್ನು ಇನ್‌ವಾಲ್ವ ಮಾಡದೇ ಇದ್ದರೆ ಖಂಡಿತವಾಗಿ ನಾವು ಈ ಉದ್ದೇಶದ ಗುರಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣ ಈ ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಬಹುಮುಖ್ಯವಾಗಿ ಈ ರಾಷ್ಟ್ರದ ಯೋಜನೆಗಳ ಅನುಸ್ಠಾನಕ್ಕೆ ದೊಡ್ಡ ಸಾಧನ. ಈ ಸಾಧನದ ಕತ್ತು ಹಿಸುಕಬೇಡಿ. ಇದನ್ನು ಅರ್ಧಯೋಜನೆಯಲ್ಲೇ ಕಿತ್ತುಹಾಕುವ ಪ್ರಯತ್ನ ಮಾಡಬೇಡಿ. ಅಂಥಾ ಒಂದು ಪ್ರಯತ್ನ ಈ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಅಧಿಕಾರ ಅವಧಿ ಮುಗಿದಕೂಡಲೇ 6 ತಿಂಗಳ ಅವಕಾಶವನ್ನು ಮುಂದುವರಿಸುವುದಕ್ಕೆ ಸರ್ಕಾರಕ್ಕಿದ್ದ ಅಧಿಕಾರವನ್ನು ಬಳಕೆಮಾಡದೆ ಅವರನ್ನು ಕೊಂದು ಹಾಕಿ, ಈಗ ಎಲ್ಲಿತರುವುದು ಅಸಿಸ್ಟೆಂಟ್ ಕಮಿಷನರುಗಳನ್ನು ಅಂಥ ಅಂದರೆ, ನೀವು ಕೊಂದು ಹಾಕಿದವರು ಹುಡುಕಬೇಕಪ್ಪ. ನನಗೆ ಏನು ಗೊತ್ತು ಎಲ್ಲಿ ತರಬೇಕಂಥಾ ? ನೀವು ತಲೆ ಹೊಡೆಯುವುದಕ್ಕೆ ಮುಂಚೆ ಏನು ಮಾಡಬೇಕು ಅಂಥ ಪ್ಲಾನಿಂಗ್ ಇಲ್ಲದಿದ್ದರೆ ನಾವೇನು ಮಾಡಬೇಕು ? ಅದನ್ನೇ ಸಂಸದೀಯ ಮಂತ್ರಿಗಳು ಹೇಳಿದರು, ಏನೆಂದರೆ ಆಲೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕು ಅಂಥ. ಈ ವಿಚಾರದಲ್ಲಿ ನೀವು ಏಕೆ ಆಲೋಚನೆ ಮಾಡಲಿಲ್ಲ ? ತೀರ್ಮಾನ ತೆಗೆದುಕೊಂಡು ಈಗ ಆಲೇಚನೆ ಮಾಡುತ್ತಿದ್ದೀರಲ್ಲಾ ಏಕೆ? ಆ ಕಾರಣ ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ. ....

ಶ್ರೀ ಎಂ.ಮಹದೇವ್:- ನಮಗೆ ಆಲೋಚನೆ ಇದೆ. ನಿಮಗೆ ವಿವೇಚನೆ ಇಲ್ಲ ಎಂದು

ನಮಗೆ ವ್ಯಸನವಾಗುತ್ತಿದೆ.

ಶ್ರೀ ಡಿ.ಬಿ.ಚಂದ್ರೇಗೌಡ:- ನನ್ನ ವಿವೇಚನೆಯನ್ನು ನೀವು ಯಾರು ಪ್ರಶ್ನೆ ಮಾಡುವುದಕ್ಕೆ? ವಿವೇಚನೆ ಪ್ರಶ್ನೆಗೆ ಹೋಗಬೇಡಿ. ಅದು ಬಹಳ ದೊಡ್ಡ ಮಾತಾಗುತ್ತದೆ.

ಶ್ರೀ ಎಂ.ಮಹದೇವ್:- ನೀವು ಜಿಲ್ಲಾ ಪರಿಷತ್ ವ್ಯವಸ್ಥೆಯನ್ನು ಜಾರಿಗೆ ತಂದು ಆಗಬಾರದ ಅನಾಹುತ ಎಲ್ಲಾ ಆಗಿದೆ. ಆಗಿರುವ ಅನಾಹುತವನ್ನು ನಾವು ಸರಿ ಮಾಡುವುದಕ್ಕೆ ಹೊರಟರೆ ನೀವು ಟೀಕೆ ಮಾಡುವುದಕ್ಕೆ ಹೊರಟಿದ್ದೀರಲ್ಲಾ?

SRI D.B.CHANDRE GOWDA:- Irresponsible Statements, if it comes from the Respected Members - I don't tolerate. . . . . .

SRI M.MAHADEV:- How is it irresponsible ? Is it an irresponsible statement? It is my view. It is my opinion. You cannot prevent it.

(INTERRUPTION)

ಉಪಾಧ್ಯಕ್ಷಿಣಿಯವರು:-ಅವರು ಯೀಲ್ಡ್ ಆಗಿಲ್ಲ, ತಾವು ಕುಳಿತುಕೊಳ್ಳಿ.

(ಗೊಂದಲ)

ಉಪಾಧ್ಯಕ್ಷಿಣಿಯವರು:-ಅವರು ಯೀಲ್ಡ್ ಅದರೆ ತಾವು ಮಾತನಾಡಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ :- ತಮ್ಮ ಹೆಸರು ಮಹದೇವೆಂದು ಹೇಳಿ, ಮಹದೇವನ ತರಹವೇ ಮಾತನಾಡುವುದಕ್ಕಾಗುವುದಿಲ್ಲ. ಬರೀ ಹೆಸರಷ್ಟೇ ಮಹದೇವ. ನಮಗೆಲ್ಲಾ ಬೇರೆ ಮಹದೇವ ಇದ್ದಾನೆ.

ಶ್ರೀ ಎಂ.ಮಹದೇವ್:- ನಾನು ಮನುಷ್ಯ ಮಹದೇವನಾಗಿ ಮಾತನಾಡಿದನೇ ಹೊರತು ದೇವರು ಮಹದೇವನಾಗಿ ಮಾತನಾಡಲಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ :- ಆದ್ದರಿಂದ ನಾನು ಏನು ಯೋಚನೆ ಮಾಡುತ್ತೇನೆ. This is the proper time to evolve ಈ process & evaluation ಏನಾಗಿದೆ ಎಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ದೋಷಗಳನ್ನು ಯಾವ ರೀತಿ ಸರಿಪಡಿಸಬಹುದು? ಒಂದು ಪ್ರೋಸೆಸ್‌ನ್ನು ಪ್ರಾರಂಭ ಮಾಡಬಹುದು. ಒಂದು ಕಮಿಟಿ ರಚನೆ ಮಾಡಿದರು. ಆ ಕಮಿಟಿ ಒಂದು evaluation report ಕೊಟ್ಟಿತು. ಅದು corrective measures ಬಗ್ಗೆ ಆಲೋಚನೆ ಮಾಡಲೇ ಇಲ್ಲ. ಒಟ್ಟಾರೆ ನಾನು ಹೇಳತಕ್ಕಂಥಾದ್ದು ಅದು ಕೃಷ್ಣಸ್ವಾಮಿ ಕಮಿಟಿ ಇರಬಹುದು, ಅಥವಾ ಹೊನ್ನಾವರ ಕಮಿಟಿ ಇರಬಹುದು, ಈ ಕಮಿಟಿಗಳು ಒಂದು Quick assessment financial assessment and administrative assessment ಬಗ್ಗೆ ಏನು ವರದಿ ಕೊಟ್ಟಿದ್ದರು ? ಇದರ ಬಗ್ಗೆ ಆಲೋಚನೆ ನಡೆಯಬಹುದಿತ್ತು. ಇವೆಲ್ಲವನ್ನೂ ಬಿಟ್ಟು ಈ ಜಿಲ್ಲಾ ಪರಿಷತ್ತು ಮತ್ತು ಮಂಡಲ ಮಂಚಾಯಿತಿಗಳನ್ನು ಕೊಲೆ ಮಾಡತಕ್ಕಂಥ ಒಂದು ಪ್ರಯತ್ನ ನಡೆಯಿತು? ಇದನ್ನು ನಾನು ಬಹಳ ಬಲವಾಗಿ ಪ್ರತಿಭಟನೆ ಮಾಡುತ್ತಿದ್ದೇನೆ. ಆದ್ದರಿಂದ ಮಾನ್ಯ ಅಧ್ಯಕ್ಷಿಣಿಯವರೇ, ಈ ತಿದ್ದುಪಡಿ ಮಸೂದೆ ಏನು ಇದೆ, ಇದು ಮೂಲ ಶಾಸನದ ಉದ್ದೇಶಕ್ಕೆ ಬಾಹಿರವಾಗಿರತಕ್ಕಂಥ, ಜನತಂತ್ರ ವ್ಯವಸ್ಥೆಗೆ ಮೂಲ ಕೊಡಲಿಪೆಟ್ಟನ್ನು ಹಾಕತಕ್ಕಂಥ ಅಧಿಕಾರದ ಪೂರ್ಣ ಅಂದರೆ ಎಲ್ಲಾ ಅಧಿಕಾರವೂ ನಮ್ಮ ಕೈಯಲ್ಲಿಯೇ ಇರಬೇಕೆಂಬ

ಸ್ವಾರ್ಥತೆಯಿಂದ ಶಾಸಕರು ಅಂದರೆ ಸರ್ವಜ್ಞರು ಎಂಬ ಭಾವನೆಯಿಂದ ಮಾಡಿದ್ದೀರೇ ಹೊರತು ಬೇರೆ ಯಾವುದೇ ಉದ್ದೇಶದಿಂದ ಅಲ್ಲ. ಆಯಾ ಮಂಡಳಗಳಲ್ಲಿ ಕೆಳಗಡೆ ಇರತಕ್ಕಂಥ ಜನರು ಯಾರು 5 ರಿಂದ 15ಸಾವಿರದವರೆಗೆ ಇದ್ದಾರೆ. ಅದರಲ್ಲಿ ಸ್ವಲ್ಪ ದೋಷ ಇದ್ದಿರಬಹುದು. ಇಲ್ಲ ಎಂದು ನಾನು ಹೇಳುವುದಿಲ್ಲ, ಇಂಪ್ಲಿಮೆಂಟೇಷನ್ ಪ್ರೊಸೆಸ್‌ನಲ್ಲಿ ಸ್ವಲ್ಪ ದೋಷ ತಪ್ಪು ಇರಬಹುದು,-ಅಥವಾ ಸ್ವಲ್ಪ ಮಟ್ಟಿಗೆ ಅಪವ್ಯಯವೂ ಆಗಿರಬಹುದು. ಅದನ್ನು ಫೂಲ್‌ಪ್ರೂಫ್ ಮಾಡುವುದಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡದೇ ಜನರ ಮೇಲೆ ವಿಶ್ವಾಸ ಇಡದೇ ಗ್ರಾಮಾಂತರ ಪ್ರದೇಶದ ಜನರ ಮುಖಂಡತ್ವದಲ್ಲಿ ನಂಬಿಕೆ ಇಡದೇ, ಇರತಕ್ಕದ್ದು ಸರಿಯಲ್ಲ. ಈ ದೇಶವು ಅಧಿಕಾರಿಗಳು ಮತ್ತು ಶಾಸಕರಿಗೆ ಸೇರಿದ ದೇಶವಲ್ಲ. ಈ ರಾಜ್ಯವು ಅಧಿಕಾರಿಗಳು ಮತ್ತು ಶಾಸಕರುಗಳಿಗೆ ಹೊರತಾಗಿ, ಈ ರಾಜ್ಯದ ಮಾಲೀಕರು ಯಾರಿದ್ದಾರೆ,ಅವರು ಗ್ರಾಮೀಣ 'ದೇಶದಲ್ಲಿದ್ದಾರೆ. ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿ ಬರತಕ್ಕಂಥವರಿದ್ದಾರೆ, ಹಾಗೆ ಆ ಮಾಲೀಕರುಗಳಿಗೆ ಮಾಡಿದಂಥ ಮೋಸ ಇದು. ನಮಗೆ ಅವರು ಆಳ್ವಿಕೆ ಮಾಡಿ ಎಂದು ಅಧಿಕಾರ ಕೊಟ್ಟಿದ್ದರೆ, ನೀವು ಅವರ ಹಕ್ಕನ್ನೇ ಕಿತ್ತುಕೊಂಡಿದ್ದೀರಿ. ಅವರು ನಿಮಗೆ ಅಧಿಕಾರ ಮಾಡಿ ಸರಕಾರ ನಡೆಸಿ ಎಂದು 184 ಜನರನ್ನು ಕಳುಹಿಸಿಕೊಟ್ಟರೆ, ನೀವು ಅವರಿಗೆ ಇದ್ದ ಅಧಿಕಾರವನ್ನು ಕಿತ್ತುಕೊಂಡು ಮೋಸ ಮಾಡಿದ್ದೀರಿ. ಈ ಕೆಲಸವನ್ನು ನೀವು ಮಾಡಬಾರದಿತ್ತು. ಆದ್ದರಿಂದ ನಾನು ಮತ್ತು ನನ್ನ ಪಕ್ಷ ಈ ತಿದ್ದುಪಡಿಗೆ ಸಂಪೂರ್ಣವಾಗಿ ವಿರೋಧವನ್ನು ವ್ಯಕ್ತಮಾಡುತ್ತೇವೆ, ಈಗಲೂ ಕೂಡ ನೀವು ಆರು ತಿಂಗಳ ಅವಧಿಯಲ್ಲಿ ಅಲ್ಲಿ ಇರತಕ್ಕಂಥ ಅಧಿಕಾರಿಗಳನ್ನು ವಾಪಸ್ಸುಕರೆಸಿ ಜನರ ಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡಿ. ಇಲ್ಲವಾದರೆ ಕೋರ್ಟ್‌ನವರು ಕೊಡುತ್ತಾರೆ, ಅದರಂತೆ ನೀವು ನಡೆಯಬೇಕಾಗುತ್ತದೆ. ಆದ್ದರಿಂದ ನಾನು ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ.

ಶ್ರೀ ಬಿ.ಹೆಚ್.ಬನ್ನಿಕೋಡ್(ಹೀರೆಕೆರೂರ್):- ಮಾನ್ಯ ಅಧ್ಯಕ್ಷಿಣಿಯವರೇ, ಈಗ ಇರತಕ್ಕಂಥ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಕಾನೂನಿನಲ್ಲಿ ಅಧಿಕಾರಾವಧಿ ಮುಗಿದ ನಂತರ ಅಲ್ಲಿ ಇರತಕ್ಕಂಥ ಅಧ್ಯಕ್ಷರು ಹೊಸ ಅಧ್ಯಕ್ಷರು ಚುನಾವಣೆಯಾಗಿ ಬರುವವರೆಗೆ ಮುಂದುವರಿಯತಕ್ಕಂಥ ಕಾನೂನಿನ ಒಂದು ವ್ಯವಸ್ಥೆಯು ಇದೆ. ಅದೇ ರೀತಿಯಲ್ಲಿ ಮಂಡಲ ಪಂಚಾಯಿತಿಯ ಪ್ರಧಾನರು ಹೊಸದಾಗಿ ಮರುಚುನಾವಣೆಯಾಗಿ ಹೊಸತಾಗಿ ಆಯ್ಕೆಯಾಗಿ ಬರುವವರೆಗೆ ಮುಂದುವರಿಯುವ ವ್ಯವಸ್ಥೆಯೂ ಇದೆ. ಹೀಗೆ ಜನತೆಯಿಂದ ಆಯ್ಕೆಯಾದಂಥ ಪ್ರಜಾಪ್ರತಿನಿಧಿಗಳು ಇವೊತ್ತು ಹೀಗೆ ಮುಂದುವರಿಯತಕ್ಕಂಥ ವ್ಯವಸ್ಥೆಯು ಈ ಕಾನೂನಿನಲ್ಲಿ ಇದೆ. ಆದರೆ ಈಗ ನೀವು ಯಾರು ಮಂಡಳಗಳಲ್ಲಿ ಜಿಲ್ಲಾಪರಿಷತ್‌ನಲ್ಲಿ ಮತದಾರರಿಂದ ಆಯ್ಕೆಯಾಗಿ ಬಂದಿದ್ದಾರೆ,ಅವರಿಗೆ ಇರತಕ್ಕಂಥ ಅಧಿಕಾರವನ್ನು ಈ ತಿದ್ದುಪಡಿಯ ಮೂಲಕ ನೀವು ಶಾಸಕರಿಗೆ ಸಂಪೂರ್ಣವಾದ ಅಧಿಕಾರವನ್ನು ವರ್ಗಾಯಿಸತಕ್ಕಂಥ ಒಂದು ಸರ್ವಾಧಿಕಾರ ಮನೋಭಾವವನ್ನು ಪ್ರದರ್ಶಿಸಿ ಈ ತಿದ್ದುಪಡಿಯನ್ನು ತಂದಿದ್ದೀರಿ. ಇದನ್ನು ನೋಡಿದರೆ ಜನತೆಯಿಂದ ಆಯ್ಕೆಯಾಗಿ ಬಂದಂಥ ಮಂಡಲ ಪ್ರಧಾನರ ಮೇಲೆ ಜಿಲ್ಲಾಪರಿಷತ್‌ನ ಅಧ್ಯಕ್ಷರುಗಳ ಬಗ್ಗೆ ಈ ಸರಕಾರಕ್ಕೆ ವಿಶ್ವಾಸ ಇಲ್ಲ, ತಮ್ಮ ಹಸ್ತಕರಾಗಿ ಕೀ ಸರಕಾರದ ಕೈಗೊಂಬೆಯಾಗಿ ಕೆಲಸ ಮಾಡತಕ್ಕಂಥ ಸರಕಾರಿ ಅಧಿಕಾರಿಗಳನ್ನು ಈ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನಾಗಿ ನೇಮಿಸಿ ಅದರ ಸಂಪೂರ್ಣವಾದ ಹತೋಟಿಯನ್ನು ತಾವೇ ತೆಗೆದುಕೊಳ್ಳ ಬೇಕೆಂಬ ದುರುದ್ದೇಶದಿಂದ ಮಾತ್ರ ಈ ತಿದ್ದುಪಡಿಯನ್ನು ತಂದಿದ್ದೀರಿ. ಇದರಲ್ಲಿ ಯಾವುದೇ ಸದುದ್ದೇಶವೂ ಇಲ್ಲ. ಈ ಸಂಸ್ಥೆಗಳ ಅಧ್ಯಕ್ಷರಾಗಿ ಹಾಗೂ ಪ್ರಧಾನವಾಗಿ ಕಾಂಗ್ರೆಸ್‌ನವರು ಇದ್ದರು, ಪಕ್ಷೇತರರೂ

ಇದ್ದರು, ಮತ್ತು ಬೇರೆಯವರು ಕೂಡ ಇದ್ದರು. ಅವರನ್ನು ಮುಂದುವರಿಸಿದ್ದರೆ ಯಾವ ತೊಂದರೆಯೂ ಇರಲಿಲ್ಲ. ಮಾನ್ಯ ಖರ್ಗೆಯವರು ಮಂಡಲ ಪಂಚಾಯತ್‌ಗಳ ಬಗ್ಗೆ ಆಡಳಿತಾಧಿಕಾರಿಗಳನ್ನು ನೇಮಿಸುವ ಅವಕಾಶ ಇತ್ತು ಎಂದು ಹೇಳಿದ್ದರು. ಆದರೆ ಇಡೀ ರಾಜ್ಯದಲ್ಲಿ ಸಾರಾಸಗಟಾಗಿ ಆಡಳಿತಾಧಿಕಾರಿಗಳನ್ನು ನೇಮಿಸಲಿಕ್ಕೆ ಅಧಿಕಾರ ಇರಲಿಲ್ಲ. ಅಲ್ಲಿ ಏನಾದರೂ ದುರ್ವ್ಯವಹಾರವಾಗಿದ್ದರೆ, ಅವ್ಯವಹಾರವಾಗಿದ್ದರೆ, ಏನಾದರೂ ಜನವಿರೋಧಿಕೆಲಸ ಮಾಡಿದ್ದರೆ, ಅಂಥ ಮಂಡಳಿಗಳನ್ನು ಮಾತ್ರ ರದ್ದುಪಡಿಸಿ ಆಡಳಿತಾಧಿಕಾರಿಗಳನ್ನು ನೇಮಿಸಲು ಅವಕಾಶ ಮಾಡಿಕೊಡಬೇಕೇ ವಿನಹ ಸಮಗ್ರ ರಾಜ್ಯದಲ್ಲಿರತಕ್ಕಂಥ ಜನಪ್ರತಿನಿಧಿಗಳನ್ನು ತೆಗೆದುಹಾಕತಕ್ಕಂಥ ಅವಕಾಶ ಇರಲಿಲ್ಲ. ಈಗ ಚುನಾವಣೆಗಳನ್ನು ಮಾಡದೇ ಇರಲು ಯಾವುದೇ ಸಕಾರಣಗಳನ್ನು ಸರಕಾರದವರು ಕೊಟ್ಟಿಲ್ಲ. ಸಕಾಲದಲ್ಲಿ ಇವರು ಚುನಾವಣೆಗಳನ್ನು ಮಾಡಬಹುದಾಗಿತ್ತು. ಚುನಾಯಿತ ಪ್ರತಿನಿಧಿಗಳ ಕೈಗೆ ಅಧಿಕಾರವನ್ನು ಕೊಡಬಹುದಾಗಿತ್ತು. ಆಡಳಿತಾಧಿಕಾರಿಗಳ ಮುಖಾಂತರ ಅಧಿಕಾರವನ್ನು ಶಾಸಕರ ಕೈಗೆ ಕೊಟ್ಟು ತನ್ನ ಶಕ್ತಿಯನ್ನು ಬಳಸಿಕೊಳ್ಳ ಬೇಕೆನ್ನುವ ಉದ್ದೇಶ ಸರಕಾರದ್ದು. ಅಧಿಕಾರವನ್ನು ಕೇಂದ್ರೀಕರಣ ಮಾಡುವ ಉದ್ದೇಶದಿಂದ ಅದನ್ನು ತಂದಿದ್ದಾರೆ. ಹೀಗೆ ಜನವಿರೋಧಿಯಾದಂಥ ನೀತಿಯನ್ನು ಇಲ್ಲಿ ತಿದ್ದುಪಡಿ ಮೂಲಕ ತಂದಿದ್ದಾರೆ. ಹಿಂದೆ ಮಹಾರಾಜರುಗಳು ವಿರೋಧಿಗಳನ್ನು ಸ್ನೇಹಮಯವಾಗಿ ಕರೆದುಕೊಳ್ಳುತ್ತಾ ಇದ್ದರಂತೆ. ಅವರಿಗೆ ಆಮಂತ್ರಣ ಕೊಟ್ಟು ಆಹ್ವಾನ ನೀಡುತ್ತಿದ್ದರು. ಊಟ ಕೊಡುತ್ತಿದ್ದರು, ಆ ಊಟ ಆದ ನಂತರ ತಾಂಬೂಲವನ್ನು ಕೊಡುವಾಗ ವಿಷದ ಗುಳಿಗೆಗಳನ್ನು ವಿರೋಧಿಗಳಿಗೆ ಕೊಡುತ್ತಾ ಇದ್ದರು. ತಾನೂ ಅದೇ ತರಹದ ಗುಳಿಗೆಯನ್ನು ತಿನ್ನುತ್ತಿದ್ದರು. ಆದರೆ ಅವನಿಗೆ ಗೊತ್ತಿತ್ತು ಇದು ಮಸಾಲ ಗುಳಿಗೆ, ಸಾಯುವ ಗುಳಿಗೆ ಅಲ್ಲ ಎಂದು. ಅದೇ ರೀತಿಯಲ್ಲಿ ಈ ಸರಕಾರದವರು ವಿರೋಧಿಗಳಿಗೆ ವಿಷದ ಗುಳಿಗೆಯನ್ನು ಮಸಾಲ ಗುಳಿಗೆ ಎಂದು ಕೊಡಲು ಹೊರಟಿದೆ. ತಾನು ಮಾತ್ರ ಮಸಾಲ ಗುಳಿಗೆಯನ್ನು ತಿನ್ನುತ್ತಿದ್ದೇನೆ ಅದು ವಿಷದ ಗುಳಿಗೆ ಅಲ್ಲ ಎಂದು ಅವರು ಹೊರಟಿದ್ದಾರೆ, ಇದರಿಂದ ಒಂದು ದಿವಸ ಇದೇ ರೀತಿಯಲ್ಲಿ ಆ ರಾಜನು ಮಸಾಲ ಗುಳಿಗೆ ಎಂದು ವಿಷದ ಗುಳಿಗೆಗಳನ್ನು ವೈರಿಗಳಿಗೆ ತಿನ್ನಿಸಿ ಅನೇಕರನ್ನು ಸಂಹಾರ ಮಾಡಿದನು. ಜೊತೆಗೆ ತಾನು ಕೂಡ ಮೋಸ ಹೋಗಿ ವಿಷದ ಗುಳಿಗೆಯನ್ನು ತಾನೇ ತಿಂದು ತನ್ನ ಮೋಸಕ್ಕೆ ತಾನೇ ಒಳಗಾಗಿ ಪ್ರಾಣವನ್ನು ಬಿಡತಕ್ಕ ಕೆಲಸ ಆಯಿತು. ಈ ರೀತಿಯಲ್ಲಿ ವಿಷದ ಗುಳಿಗೆಗಳನ್ನು ವಿರೋಧಿಗಳಿಗೆ ಕೊಡಲು ಹೊರಟಿದ್ದಾರೆ, ಪ್ರಜಾಪ್ರಭುತ್ವದ ಕೊಲೆ ಮಾಡಲು ಏನು ಹೊರಟಿದ್ದಾರೆ, ಇದು ಸರಿಯಲ್ಲ, ತನ್ನ ಒಂದು ದರ್ಪದಿಂದ, ಹಾಗು ಅಹಂಕಾರದಿಂದ ಒಂದು ದಿನ ಸಂಪೂರ್ಣ ಪತನವಾಗುವುದರಲ್ಲಿ ಯಾವುದೇ ಸಂದೇಹವಿಲ್ಲ, ಇದನ್ನು ರಾಜ್ಯದ ಜನರು ಸಂಪೂರ್ಣವಾಗಿ ನೋಡುತ್ತಾ ಇದ್ದಾರೆ, ಈ ಸರ್ಕಾರವನ್ನು ಅರ್ಥಮಾಡಿಕೊಂಡಿದ್ದಾರೆ. ಈ ಸರಕಾರದ ಬಲವನ್ನು ತೆಗೆಯಲು ಜನರು ಸಿದ್ಧರಿದ್ದಾರೆ. ಅದಕ್ಕಾಗಿ ಅವಕಾಶವನ್ನು ಕಾಯುತ್ತಾ ಇದ್ದಾರೆ. ಸರ್ಕಾರದ ಕೆಲಸ ಈವತ್ತು ಒಂದು ಬಸ್ಮಾಸುರನ ಭರತನಾಟ್ಯದಂತೆ ಇದೆ. ಹೀಗೆ ಬಸ್ಮಾಸುರನಿಗೆ ಇರತಕ್ಕಂಥ ಬಲದಿಂದ ತಾನೇ ಭರತನಾಟ್ಯ ಮಾಡಿ ಕೈಯನ್ನು ತನ್ನ ತಲೆಯ ಮೇಲೆ ತಂದಾಗ ಯಾವರೀತಿಯಲ್ಲಿ ಭಸ್ಮಾಸುರ ಭಸ್ಮವಾದ, ಅದೇ ರೀತಿಯಲ್ಲಿ ಈ ಸರಕಾರವೂ ಕೂಡ ತನ್ನದೇ ಆದಂಥ ಗ್ರಾನೈಟ್ ಹಗರಣ, ಸಾರಾಯಿ ದೊರೆಗಳ ಲಾಭಿ, ತನ್ನದೇ ಆದ ಅಧಿಕಾರದ ಕೇಂದ್ರೀಕರಣದ ಮೂಲಕ ಸಮಗ್ರವಾದಂಥ ಈ ರಾಜ್ಯದ ಆಡಳಿತವನ್ನು ಹದಗೆಡಿಸಿ, ತಾನೇ ತನ್ನ ಬಾಣದಿಂದ ತನ್ನ ಭ್ರಷ್ಟತೆಯಿಂದ ಅವನತಿ ಹೊಂದಲು ಈ ಒಂದು ತಿದ್ದುಪಡಿಯು ಕಾರಣವಾದೀತು

ಎಂದು ಹೇಳ ಬೇಕಾಗುತ್ತದೆ. ಈಗಲಾದರೂ ಸರ್ಕಾರ ಯೋಚನೆಯನ್ನು ಮಾಡಲಿ, ಈ ತಿದ್ದುಪಡಿಯನ್ನು ವಾಪಸ್ ತೆಗೆದುಕೊಂಡು ಜನರ ಕೈಯಲ್ಲಿ, ಪ್ರತಿನಿಧಿಗಳ ಕೈಯಲ್ಲಿ ಅಧಿಕಾರವನ್ನು ಮುಂದುವರಿಸಲಿ. ಕೂಡಲೇ ಚುನಾವಣೆಯನ್ನು ಮಾಡಲಿ, ನನಗೆ ಗೊತ್ತಿಗೆ ಇವರು ಇನ್ನು ಆರು ತಿಂಗಳಿಗೂ ಚುನಾವಣೆಯನ್ನು ಮಾಡುವುದಿಲ್ಲ. ವರ್ಷದನಂತರವೂ ಮಾಡುವುದಿಲ್ಲ, ಈ ಸರಕಾರವು ತನ್ನ ಅಧಿಕಾರವನ್ನು ಕಳೆದುಕೊಂಡು ಹೊಸ ಸರಕಾರ ಚುನಾಯಿತವಾಗಿ ಬಂದು ಈ ಚುನಾವಣೆಯನ್ನು ಮಾಡಬೇಕೇ ವಿನಃ ಈ ಸರ್ಕಾರದವರು ಸರ್ವತಾ ಚುನಾವಣೆಯನ್ನು ಮಾಡತಕ್ಕಂಥ ವಿಚಾರದಲ್ಲಿಲ್ಲ ನಾವು ಚುನಾವಣಾ ಕಾಲದಲ್ಲಿ ಹೇಳಿದ್ದೇವೆ. ನಾವು ಅಧಿಕಾರಕ್ಕೆ ಬಂದರೆ ಜನರ ಕೈಗೆ ಅಧಿಕಾರವನ್ನು ಕೊಡುತ್ತೇವೆ ಎಂದು. ನಾವು ಕಾನೂನನ್ನು ಜಾರಿಗೆ ಕೊಟ್ಟು ಜನರಿಗೆ ಅಧಿಕಾರವನ್ನು ಕೊಟ್ಟಿದ್ದೆವು. ಆದರೆ ಇವರು ಜನರ ಕೈಗೆ ಕೊಟ್ಟಂಥ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಲ್ಲದಂಥ, ಪ್ರಜಾಪ್ರಭುತ್ವದ ವಿರೋಧಿಯಾದಂಥ ಈ ಒಂದು ನೀತಿಯು ಯಾವ ಸರಕಾರಕ್ಕೂ ಸರಿಹೋಗುವಂಥಾದ್ದು ಅಲ್ಲ. ಮತದಾರರಿಂದ ಆಯ್ಕೆಯಾದಂಥ ನಾವು ಅದೇ ಮತದಾರರ ಆಯ್ಕೆಯಾದಂಥ ಪ್ರತಿನಿಧಿಗಳ ಮೇಲೆ ವಿಶ್ವಾಸವನ್ನು ಇಡದೇ ಹೋದರೆ ಈ ಸರಕಾರಕ್ಕೆ ಪ್ರಜಾಪ್ರಭುತ್ವದ ಮೇಲೆ ಎಷ್ಟು ವಿಶ್ವಾಸ ಇದೆ ಎಂಬುದನ್ನು ನಾವು ಇಂದು ಸ್ಪಷ್ಟವಾಗಿ ಕಾಣುತ್ತಾ ಇದ್ದೇವೆ. ಮಾನ್ಯ ಖರ್ಗೆಯವರು ಬಹುತೇಕ ಈ ತಿದ್ದುಪಡಿಯನ್ನು ತರುವಾಗ ವೈಯಕ್ತಿಕವಾಗಿ ಅವರು ಇದಕ್ಕೆ ಮನಸ್ಸು ಇಲ್ಲದೇ ಇದ್ದರೂ ವೈಯಕ್ತಿಕವಾಗಿ ಪ್ರತಿನಿಧಿಗಳಿಗೆ ಅಧಿಕಾರವನ್ನು ಕೊಡುವುದರಲ್ಲಿ ಅವರಿಗೆ ಮನಸ್ಸು ಇದ್ದರೂ ಒತ್ತಡದಿಂದ ಈ ತಿದ್ದುಪಡಿಯನ್ನು ತಂದಿದ್ದಾರೆ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಅವರ ಆದೇಶದ ಪ್ರಕಾರ ಮಾಡಬೇಕಾಗುತ್ತದೆ. ಆ ರೀತಿ ತಮ್ಮ ಮನಸ್ಸಿನ ವಿರುದ್ಧ ಈ ತಿದ್ದುಪಡಿಯನ್ನು ತಂದಿರಬೇಕು ಎಂದು ನಾನು ಭಾವಿಸುತ್ತಿದ್ದೇನೆ. ಈಗಲಾದರೂ ಸಹಾ ಜನರ ಪ್ರತಿನಿಧಿಗಳಿಗೆ ಅಧಿಕಾರ ಕೊಡುವುದು ನಮ್ಮ ನಿಮ್ಮೆಲ್ಲರಿಗೂ ಗೌರವ. ಈ ರೀತಿ ಮಾಡಿದರೆ ಇಡೀ ಸದನಕ್ಕೆ ಈ ಸರ್ಕಾರಕ್ಕೆ, ಇಡೀ ಸದನಕ್ಕೆ ಗೌರವವನ್ನು ಕೊಟ್ಟಂತಾಗುತ್ತದೆ. ದಯವಿಟ್ಟು ಇದೊಂದು ಹೆಮ್ಮೆಯ ವಿಷಯ ಹಾಗೂ ಇದೊಂದು ಸರ್ಕಾರದ ಮರ್ಯಾದೆಯ ವಿಷಯ ಎಂದು ತೆಗೆದುಕೊಳ್ಳದೇ ಇದು ಜನಪರವಾದ ವಿಚಾರ ಎಂದು ತಿಳಿದುಕೊಂಡು ಈಗಲಾದರೂ ಮರುಪರಿಶೀಲನೆಯನ್ನು ಮಾಡಿ ಈ ವಿಧೇಯಕವನ್ನು ತಾವು ದಯುವಿಟ್ಟು ವಾಪಸ್ ತೆಗೆದುಕೊಳ್ಳಬೇಕು. ಇಲ್ಲಿದಿದ್ದರೆ ಅನಿವಾರ್ಯವಾಗಿ ನಾವು ಇದನ್ನು ವಿರೋಧ ಮಾಡಬೇಕಾಗುತ್ತದೆ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು:- ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಎಸ್.ಹೆಚ್.ಕೌಜಲಗಿ:- ನಾನು ಒಂದೆರಡು ನಿಮಿಷ ಮಾತನಾಡುತ್ತೇನೆ.

ಉಪಾಧ್ಯಕ್ಷಿಣಿಯವರು: ಎಲ್ಲರೂ ಮಾತನಾಡಿದ್ದೀರಿಲ್ಲಾ, ಮಾನ್ಯ ಚಂದ್ರೇಗೌಡರು ಎಲ್ಲ ವಿಷಯವನ್ನು ಕವರ್ ಮಾಡಿಬಿಟ್ಟಿದ್ದಾರೆ.

ಶ್ರೀ ಎಸ್.ಹೆಚ್.ಕೌಜಲಗಿ: ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು: ಎರಡು ನಿಮಿಷದಲ್ಲೇ ಮುಗಿಸಬೇಕು.

ಶ್ರೀ ಎಸ್.ಹೆಚ್.ಕೌಜಲಗಿ:-(ಬೈಲಹೊಂಗಲ):-ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತಿನ ದಿವಸ ಈ ಗ್ರಾಮೀಣಾಭಿವೃದ್ಧಿ ಸಚಿವರು ತಂದಿರತಕ್ಕಂಥ ಬಿಲ್ಲನ್ನು ನಾನು ವಿರೋಧಿಸುತ್ತಾ ಇವತ್ತಿನ ದಿವಸ ನಮ್ಮ ವಿಧಾನಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವರು ಈ ಕರಾಳ ತಿದ್ದುಪಡಿಯನ್ನು ತಂದಿರುವುದರ ಬಗ್ಗೆ

ಹೇಳಬಯಸುತ್ತೇನೆ. ನಿಜವಾಗಿಯೂ ಇವತ್ತಿನ ದಿವಸ ಈ ಗ್ರಾಮೀಣಾಭಿವೃದ್ಧಿ ಸಚಿವರು ತಂದಿರತಕ್ಕಂಥ ಈ ತಿದ್ದುಪಡಿಯ ಅವಶ್ಯಕತೆ ಇರಲಿಲ್ಲ. ಅವಶ್ಯ ಇಲ್ಲದಂಥ ಈ ತಿದ್ದುಪಡಿಯನ್ನು ತಂದು ಇವತ್ತಿನ ದಿವಸ ಅವರು ಮಾಡುತ್ತಿರುವಂಥ ಈ ಒಂದು ಕಾರ್ಯದ ವೈಖರಿಯನ್ನು ವಿರೋಧಿಸುತ್ತೇನೆ. ತಮ್ಮ ಸರ್ಕಾರದಲ್ಲಿ ಹೆಚ್ಚಿಗೆ ಒಂದು ಮೆಜಾರಿಟಿ ಇದೆ ಎಂದು ಹೇಳಿ ತೋರಿಸುವ ಉದ್ದೇಶದಿಂದ ಇಂಥ ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಒಂದು ಆಕ್ಟ್‌ನಲ್ಲಿ ಈಗಾಗಲೇ ಆರು ತಿಂಗಳವರೆಗೆ ಈಗ ಇದ್ದಂಥ ಒಂದು ವಾಡಿಯನ್ನು ಮುಂದುವರೆಸಲು ಜಿಲ್ಲಾ ಪರಿಷತ್ತಿನ ಹಾಗೂ ಮಂಡಲ ಪಂಚಾಯತಿಯಲ್ಲಿಯ ಆಕ್ಟ್‌ನಲ್ಲಿ ಇದೆ. ಅಂಥ ಸನ್ನಿವೇಶ ಇರುವಾಗ ಇವತ್ತಿನ ದಿವಸ ಈ ತಿದ್ದುಪಡಿಯನ್ನು ತರುವ ಅವಶ್ಯಕತೆ ಇದ್ದಿದ್ದಲ್ಲ. ಆದರೆ ತಮಗೆ ಬೇಕಾದಂಥವರನ್ನು ಇವತ್ತಿನ ದಿವಸ ಈ ತಿದ್ದುಪಡಿಯಿಂದ ನಾಮಿನೇಷನ್ ಮುಖಾಂತರ ಅಡ್ಮಿನಿಸ್ಟ್ರೇಟರ್ ಎಂದು ಹಾಕುವ ಉದ್ದೇಶದಿಂದ ಈ ತಿದ್ದುಪಡಿಯನ್ನು ತರಲಾಗಿದೆ. ತಾವು ವಿಚಾರ ಮಾಡಬಹುದು. ಈಗಾಗಲೇ ಅವರು ನಾಮಿನೇಷನ್ ಮುಖಾಂತರ ಅಡ್ಮಿನಿಸ್ಟ್ರೇಟರ್ ಎಂದು ಯಾರ್‍ಯಾರನ್ನು ಅಪಾಯಿಂಟ್ ಮಾಡಿದ್ದಾರೆ ಎಂದು ಹೇಳಿದರೆ ಎ.ಇ.ಓ., ಬಿ.ಡಿ.ಓ. ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್, ಮೆಡಿಕಲ್ ಆಫೀಸರ್ ಮತ್ತು ಪಶುವೈದ್ಯಾಧಿಕಾರಿಗಳು. ಇವತ್ತಿನ ದಿವಸ ಈ ಪಶು ವೈದ್ಯಾಧಿಕಾರಿಗಳು ಮೊದಲೇ ರಾಜ್ಯದಲ್ಲಿ ಷಾರ್ಟೇಜ್ ಇರುವ ಕಾಲಕ್ಕೆ ನಮ್ಮ ಬೈಲಹೊಂಗಲದಲ್ಲಿ ಇದ್ದಂಥ ಒಬ್ಬ ಪಶು ವೈದ್ಯಾಧಿಕಾರಿಯನ್ನು ಕಿತ್ತೂರಿಗೆ ಹಾಕಿದ್ದಾರೆ. ಅಲ್ಲಿ ಕಿತ್ತೂರಿಗೆ ಎಂದರೆ 48 ಕಿಲೋಮೀಟರ್ ಅವರು ಹೋಗುವುದು ಯಾವಾಗ ? ಅಡ್ಮಿನಿಸ್ಟ್ರೇಷನ್ ಮಾಡುವುದು ಯಾವಾಗ ? ಇದನ್ನು ತಾವು ವಿಚಾರ ಮಾಡಬೇಕು. ಅದೇ ಪಶು ವೈದ್ಯಾಧಿಕಾರಿಗಳು ಮೂರು ಕೆಲಸಗಳಿಗೆ ಇನ್‌ಛಾರ್ಜ್ ಇದ್ದಾರೆ. ವೈದ್ಯಾಧಿಕಾರಿಗಳು ಕಡಿಮೆ ಎಂದು ಹೇಳಿ ಮೂರು ಜನ ವೈದ್ಯಾಧಿಕಾರಿಗಳು ಕಡಿಮೆ ಇದ್ದರೂ ಸಹಾ ಇವರು ಅಲ್ಲಿಗೆ ಹೋಗಿ ಕೆಲಸವನ್ನು ಮಾಡಬೇಕಾಗುತ್ತದೆ. ಆತನ ಜ್ಞಾನ ಏನು ? ಅವನಿಗೆ ಪ್ಲಾನಿಂಗ್ ಜ್ಞಾನ ಇದೆಯೇ? ಅಥವಾ ಕೆಲಸವನ್ನು ಮಾಡಿಸತಕ್ಕಂಥ ಜ್ಞಾನ ಇದೆಯೇ ? He will have to entirely depend upon the Secretary. ಆಧ ಕಾರಣ ಇದರಿಂದ ಏನಾಗುತ್ತಿದೆ ಎಂದರೆ ಇದ್ದಂಥ ನಾಲ್ಕು ಮಂದಿ ಒಂದು ಕಮಿಟಿ ಎಂದು ಹೇಳಿದರೆ ಅವರು ವಿಚಾರ ಮಾಡಿಕೊಂಡು ಛೇರ್ಮನ್, ವೈಸ್ ಛೇರ್ಮನ್ ಇದ್ದರೆ ಒಂದು ಬಿಗಿ ಇರುತ್ತದೆ. ಯಾರೊಬ್ಬರೂ ತಪ್ಪು ಮಾಡಿದರೆ ಕೇಳತಕ್ಕಂಥವರು ಇರುತ್ತಾರೆ. ಅವತ್ತಿನ ದಿವಸ ಅಡ್ಮಿನಿಸ್ಟ್ರೇಟರೇ ತಪ್ಪು ಮಾಡಿದರೆ ಇವರನ್ನು ಹೇಳುವವರು ಯಾರು ? ಕೇಳುವವರುಯಾರು? ಮತ್ತೆ ಯಾವ ರೀತಿ ಅಲ್ಲಿ ಕೆಲಸವಾಗುತ್ತದೆ? ಇವತ್ತಿನ ದಿವಸ ಈ ರೀತಿ ಆಗುವುದರಿಂದ ಇದ್ದಂಥ ಮಂಡಲ ಪಂಚಾಯಿತಿ ಹಾಗೂ ಜಿಲ್ಲಾಪರಿಷತ್ತಿನ ವ್ಯವಸ್ಥೆ ಸಂಪೂರ್ಣವಾಗಿ ನಾಶವಾಗುತ್ತಿದೆ. ಆದಕಾರಣ ದಯಮಾಡಿ ಇಂಥ ಒಂದು ಕ್ರಮವನ್ನು ಸರ್ಕಾರದವರು ಕೈಗೊಳ್ಳಬಾರದು. ಈಗ ತಂದಿರತಕ್ಕಂಥ ಬಿಲ್ಲನ್ನು ತಾವು ಹಿಂತೆಗೆದುಕೊಳ್ಳಬೇಕು ಎಂದು ಅವರಲ್ಲಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ತಾವು ವಿಚಾರ ಮಾಡಬೇಕಾಗುತ್ತದೆ. ಮೊಟ್ಟಮೊದಲು ಅವರು ಹೇಳಿದರು, ಡಿವಿಜಿನಲ್ ಕಮೀಷನರ್ ಎಂದು ಇದ್ದವರನ್ನು ಅಡ್ಮಿನಿಸ್ಟ್ರೇಟರ್ ಎಂದು ಅಪಾಯಿಂಟ್ ಮಾಡುತ್ತೇವೆ ಎಂದು ಹೇಳಿ ಡಿವಿಜನಲ್ ಕಮೀಷನರ್ ಇದ್ದವರು ಇದ್ದ ಚೀಫ್ ಸೆಕ್ರೆಟರಿ ಅವರನ್ನು ಅಡ್ಮಿನಿಸ್ಟ್ರೇಟರ್ ಎಂದು ತಾವು ಮಾಡಿ ಅಂದರೆ ಮೋದಲೇ ಡೆಪ್ಯುಟಿ ಸೆಕ್ರೆಟರಿ, ಚೀಫ್ ಸೆಕ್ರೆಟರಿ ಎಂದು ಹೇಳಿದರು. ಅಂದರೆ ಒಂದಕ್ಕೊಂದು ಯಾವುದೇ ಒಂದು ಸರ್ಕಾರದ ಆಜ್ಞೆ ಯಾವ ಪ್ರಕಾರ ಜಾರಿ ಆಗುತ್ತಾ ಹೋಗುತ್ತದೆ ಎಂಬುದನ್ನು ನೋಡಬಹುದು. ತಾವು ಇವತ್ತಿನ ದಿವಸ ನಿಜವಾಗಿಯೂ ಮೊದಲು ವಿಚಾರ ಮಾಡದೇ ಒಂದು ಆಜ್ಞೆಯನ್ನು ಮಾಡುವುದು. ಆದು ಆದನಂತರ ಡಿಫಿಕಲ್ಟ್ ಬಂದಾಗ ಕೂಡಲೇ ಅದಕ್ಕೆ ಮತ್ತೊಂದು ಅಮೆಂಡ್‌ಮೆಂಟನ್ನು ಮಾಡುವುದು. ಹೀಗಾಗಿ ಈ ರೀತಿ ತಂದಂಥ ಆಜ್ಞೆಗೆ ಯಾವುದೇ ರೀತಿಯ ಬೆಲೆ ಇರುವುದಿಲ್ಲ. ಆದಕಾರಣ ಈಗಾಗಲೇ ಇದು ಜನತಂತ್ರ ವಿರೋಧವಾಗಿದೆ. ಆದ ಕಾರಣ ಆಗಿನ ಸದಸ್ಯರನ್ನೇ ಮುಂದುವರಿಸಬೇಕು. ಹೀಗೆ ಮುಂದುವರಿಸುವುದರಿಂದ ಕೇವಲ ಆರು ತಿಂಗಳು ಇರುತ್ತಾರೆ , ಅನಂತರ ಮುಂದೆ ಎಲೆಕ್ಷನ್ ಮಾಡಬಹುದು

ಅಥವಾ ಅಮೆಂಡ್‌ಮೆಂಟ್ ತರಬಹುದು, ಆಗ ಅಮೆಂಡ್‌ಮೆಂಟ್ ತರುವುದಕ್ಕೆ ನಾವು ನೀವು ಯಾರೂ ಬೇಡ ಅನ್ನುವುದಿಲ್ಲ. ಮಾನ್ಯ ದಿ.ಕೆ.ಎಚ್.ಪಾಟೀಲರು ಹಿಂದಿನ ಅಧಿವೇಶನದಲ್ಲಿ ನಾನು ಅಮೆಂಡ್‌ಮೆಂಟ್ ತರುತ್ತೇನೆಂದು ಹೇಳಿದ್ದರು. ಮತ್ತು ಅಮೆಂಡ್ ಮೆಂಟ್ ತಂದು ಆದಷ್ಟು ಬೇಗನೆ ಎಲೆಕ್ಷನ್ ಮಾಡುತ್ತೇವೆಂದು ಹೇಳಿದ್ದರು. ಅದಕ್ಕೆ ನಾವೂ ಸಹಿತ ಸ್ವಾಗತ ಮಾಡಿದ್ದೆವು. ಏಕೆಂದರೆ ಇದಕ್ಕೆ ಕೆಲವು ಅಮೆಂಡ್‌ಮೆಂಟ್‌ಗಳು ಅತಿ ಅವಶ್ಯವಿದ್ದು ಯಾವುದು ಯೋಗ್ಯವಿದೆ ಅವುಗಳನ್ನು ತರುವುದಕ್ಕೆ ನಾವು ಯಾರೂ ಸಹ ಬೇಡ ಅನ್ನುವುದಿಲ್ಲ. ಈಗಾಗಲೇ ಅನೇಕ ತಾಲ್ಲೂಕುಗಳಲ್ಲಿ ಎಷ್ಟೋ ತಾಲ್ಲೂಕ್ ಆಫೀಸರ್‌ಗಳ ಹುದ್ದೆಗಳು ಖಾಲಿ ಇವೆ. ನಾಲ್ಕು ನಾಲ್ಕು ಮಂಡಳಿಗಳಿಗೆ ಒಬ್ಬ ಮೆಡಿಕಲ್ ಆಫೀಸರ್ ಅನ್ನು ನೇಮಿಸಿದ್ದೀರಿ. ಇದ್ದ ಮೆಡಿಕಲ್ ಆಸ್ಪತ್ರೆಗಳು ಈಗಾಗಲೇ ಕೆಟ್ಟವೆ. ಅಂತಹದ್ದರಲ್ಲಿ ಮಂಡಲ್ ಪಂಚಾಯಿತಿಗಳನ್ನು ಇನ್ನೂ ಕೆಡಿಸಿ ಸರ್ಕಾರಕ್ಕೂ ಸಹಿತ ಕೆಟ್ಟ ಹೆಸರನ್ನು ತೆಗೆದುಕೊಳ್ಳಬಾರದು. ದಯಮಾಡಿ ಮಾನ್ಯ ಖರ್ಗೆಯವರು ಈ ತಿದ್ದುಪಡಿ ತರುವುದನ್ನು ಬಿಟ್ಟು ಇದನ್ನು ವಿತ್‌ಡ್ರಾ ಮಾಡಿಕೊಂಡು ಈಗಿನ ಸದಸ್ಯರನ್ನೇ ಮುಂದುವರಿಸಬೇಕೆಂದು ಕೇಳಿಕೊಂಡು ನನ್ನ ಎರಡು ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ-(ಕಂದಾಯ ಹಾಗೂ ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಚಂದ್ರೇಗೌಡರು, ಮಾನ್ಯ ಬನ್ನಿಕೋಡ್‌ರವರು ಹಾಗೂ ಕೌಜಲಗಿಯವರು ಈ ಸಣ್ಣ ಅಮೆಂಡ್‌ಮೆಂಟ್ ಮೇಲೆ ದೀರ್ಘವಾಗಿ ಚರ್ಚೆ ಮಾಡಿದ್ದಾರೆ. ಮತ್ತು ಈ ಮನೆಯಲ್ಲಿ ಈ ಹಿಂದೆಯೂ ಕೂಡ ಈ ತಿದ್ದುಪಡಿ ಬಿಲ್ಲನ್ನು ಮಂಡನೆ ಮಾಡಿದಾಗ ನಮ್ಮ ಪಕ್ಷದ ಸದಸ್ಯರು ಸಾಕಷ್ಟು ಬೆಳಕನ್ನು ಇದರ ಮೇಲೆ ಚೆಲ್ಲಿದ್ದಾರೆ. ವಿರೋಧ ಪಕ್ಷದವರ ಮೊದಲನೆಯ ಅನಿಸಿಕೆ ಅಥವಾ ಸಂಶಯವೇನೆಂದರೆ ಮಂಡಲ್ ಪಂಚಾಯತ್ ಮತ್ತು ಜಿಲ್ಲಾಪರಿಷತ್ತುಗಳ ಚುನಾವಣೆಯು ನಡೆಯುವುದಿಲ್ಲ. ಮತ್ತು ಈ ಪಂಚಾಯತ್ ರಾಜ್ಯದ ವ್ಯವಸ್ಥೆಯನ್ನು ಇವರು ಹಾಳು ಮಾಡುತ್ತಾರೆನ್ನುವುದು, ಈ ಒಂದು ವಾದವನ್ನು ಇಟ್ಟಿದ್ದಾರೆ. ಅದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದಂತಹ ವಿಷಯವಾಗಿದೆ. ನಾನು ಈಗಾಗಲೇ ಅದರ ಬಗ್ಗೆ ಹೇಳಿದ್ದೇನೆ. ಕೆಲವು ಅಮೆಂಡ್‌ಮೆಂಟ್‌ಗಳನ್ನು ಮುಂದೆ ನಾವು ತರುತ್ತೇವೆ. 1991ನೇ ಸೆನ್‌ಸಸ್ ಪ್ರಕಾರ ಕೆಲವು ಡಿ-ಲಿಮಿಟೇಷನ್ ಆಫ್ ಕಾನ್ಸಟಿಟ್ಯುಯೆನ್ಸಿ ಮಾಡಬೇಕಾಗುತ್ತದೆ. 1978 ಮತ್ತು 1991 ರಲ್ಲಿ ಕೆಲವು ಜಾತಿಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಸೇರಿವೆ. ಅದರ ಪ್ರಕಾರ ಅವರ ಪಾಪ್ಯುಲೇಷನ್ ಕೂಡ ಹೆಚ್ಚಾಗುತ್ತದೆ. ಇದರ ಆಧಾರದ ಮೇಲೆ ರಿಸರ್ವೇಷನ್ ಕೂಡ ಹೆಚ್ಚಿಗೆ ಮಾಡಬೇಕಾಗುತ್ತದೆ. ಈ ಒಂದು ಕ್ಷೇತ್ರವನ್ನು ನಾವು ಹುಡುಕಬೇಕಾಗುತ್ತದೆ. ಮೂರನೆಯದಾಗಿ 1972ರ ಅಮೆಂಡ್‌ಮೆಂಟ್ ಕೂಡ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದಿದೆ. ಆ ಅಮೆಂಡ್‌ಮೆಂಟ್ ಜಾರಿಗೆ ಬಂದಮೇಲೆ ಕೆಲವು ತಿದ್ದುಪಡಿಗಳನ್ನು ಜಿಲ್ಲಾಪರಿಷತ್ತು ಮತ್ತು ಮಂಡಲ್ ಪಂಚಾಯತಿಯ ಕಾನೂನಿಗೆ ತರಬೇಕಾಗುತ್ತದೆ. ಅದು ಕೂಡ ನಮ್ಮ ಮುಂದಿದೆ. ಆಮೇಲೆ ಅವರು ಹೇಳಿದಹಾಗೆ ಇದರಲ್ಲಿ ಅನೇಕ ಲೋಪದೋಷಗಳಿವೆ. ಅಂದರೆ 5 ವರ್ಷ ಮುಗಿದ ನಂತರ ಒಂದು ಆರು ತಿಂಗಳು ಮುಂದುವರಿಸತಕ್ಕ ಪ್ರಾವಿಷನ್ ಇದೆ. ಆದರೆ ಕಾರಣಾಂತರದಿಂದ 7 ಅಥವಾ 8 ತಿಂಗಳು ಇತ್ತು ಅಂದರೆ ಪುನ: ಏನು ಮಾಡಬೇಕು ? ಅದನ್ನು ಮುಂದುವರಿಸಬೇಕಾಗಿದ್ದರೆ ತಮ್ಮ ಸರ್ಕಾರವೇ ಇದ್ದಾಗ ಸೆಕ್ಷನ್ 8 (3) ರಲ್ಲಿ ಈ ರೀತಿ ಹೇಳಿದ್ದೀರಿ. "If the term of outgoing members of the Mandal Panchayat has expired and it has not been possible to complete the General Elections of the Mandal Panchayat before the expiry of the term, the Deputy Commissioner shall be notification either appoint an Administrative Committee consisting of the persons qualified to be elected or number of such persons be

equalled to them number of members determined under sub- section 1 of Section 5" ಅಂದರೆ ಅಡ್ಮಿನಿಸ್ಟ್ರೇಟಿವ್ ಕಮಿಟಿಗೆ ಕೂಡ ತಾವು ಒಪ್ಪಿಗೆ ಕೊಟ್ಟಿದ್ದೀರಿ. ಆದರೆ ಅವರು ಎಲೆಕ್ಟೆಡ್ ಆದವರಲ್ಲ. ಎಲೆಕ್ಷನ್ ಮಾಡುವುದಕ್ಕೆ ಆರ್ಡ್‌ರ್ ಇದ್ದರೆ ಕ್ವಾಲಿಫೈಡ್ ಇದ್ದರೆ ಅಂತಹ ಮೆಂಬರ್ಸ್ ಅನ್ನು ನಾಮಿನೇಟ್ ಮಾಡಿ ಅಡ್ಮಿನಿಸ್ಟ್ರೇಟಿವ್ ಕಮಿಟಿ ಮಾಡಬಹುದು ಅನ್ನತಕ್ಕಂಥದ್ದನ್ನು ಹೇಳಿದ್ದೀರಿ. ಜೊತೆಯಲ್ಲಿ ಇನ್ನೊಂದನ್ನು ಏನು ಹೇಳಿದ್ದೀರಿ ಅಂದರೆ to appoint an Administrator also. ಅಂದರೆ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡುವುದಕ್ಕೂ ಅವಕಾಶ ಇದೆ. ಅಡ್ಮಿನಿಸ್ಟ್ರೇಟಿವ್ ಕಮಿಟಿ ಮಾಡುವುದಕ್ಕೂ ಮಂಡಲ್ ಪಂಚಾಯತಿಯವರಿಗೆ ಅವಕಾಶ ಇದೆ. ಆದರೆ ಜಿಲ್ಲಾ ಪರಿಷತ್ತಿನಲ್ಲಿ ಯಾವಾಗ ಈ ಅವಕಾಶ ಇಲ್ಲ , ಅದನ್ನು ಅಮೆಂಡ್‌ಮೆಂಟ್ ಮಾಡಿ ತಂದರೆ ನಾವು Anti-Democratic ಆಂಟಿ ಪಂಚಾಯತ್ ರಾಜ್ ಮತ್ತು ಜಿಲ್ಲಾಪರಿಷತ್ತಿನ ವಿರೋಧಿಗಳು ಎಂದು ಇವೆಲ್ಲಾ ಹೇಳುತ್ತೀರಿ, ಅಂದರೆ ನೀವು ತಂದಾಗ ನಾವು ವಿರೋಧ ಮಾಡಿದ್ದೇವೆಯೇ ?

ಶ್ರೀ ಬಿ.ಹೆಚ್.ಬನ್ನಿಕೋಡ್:- ನೂರು ಸಾರಿ ಸುಳ್ಳನ್ನು ಹೇಳಿ ಅದೇ ಸತ್ಯ ಎಂದು ಹೇಳುವ ಜನರು ನೀವು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇವರಿಗೆ ಪ್ರತಿಯೊಂದು ರೂಲಿಗೂ exception ಬೇಕು. ನಾವು ಯಾವುದೋ ಒಂದು ರೀತಿಯ ರೂಲ್ ಮಾಡಿಕೊಂಡು ನಿಮ್ಮ ಮಂಡಲ ಪಂಚಾಯಿತಿ ವ್ಯವಸ್ಥೆ ಹಾಗೆಯೇ ಜಿಲ್ಲಾ ಪರಿಷತ್‌ನಲ್ಲೂ ನಾವು ವ್ಯವಸ್ಥೆ ಮಾಡಿಕೊಳ್ಳುತ್ತೇವೆಂದರೆ ನಮ್ಮ ಮೇಲೆ murderer of democracy, murderer of Panchayat Raj ಎಂದೆಲ್ಲಾ ಪದವನ್ನು ಉಪಯೋಗ ಮಾಡಿದರು. ಅಂದರೆ, ನೀವು ಇದರಲ್ಲಿ ಈ ಸೆಕ್ಷನ್ ಇನ್‌ಕ್ಲೂಡ್ ಮಾಡಿ ಆ ವ್ಯವಸ್ಥೆ ಮಾಡಿಕೊಂಡು ಇಟ್ಟುಕೊಂಡಿದ್ದರೆ ಅದಕ್ಕೆ ನಾವೇನು ಹೇಳಬೇಕು? ನೀವೂ ಮರ್ಡರರ್ ಅಲ್ಲವೇ ? ನೀವು ಆದರೆ ನಾವೂ ಹೌದು. ಏಕೆಂದರೆ, ಇದಕ್ಕೆ ಮೊದಲೇ ನಾವು ಈ ಕಾನೂನು ಮಾಡಿದ್ದು. ಅದನ್ನು ನಾವು ಎಕ್ಸ್‌ಟೆಂಡ್ ಮಾಡಿ ಬೇರೆ ಪ್ರಾವಿಷನ್ ಮಾಡಿದ್ದರೆ ಇವರು ಆ ಮಾತನ್ನು ಇವತ್ತು ಹೇಳುತ್ತಿದ್ದಾರೆ. ಅದಕ್ಕೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾವು ಪ್ರಜಾಪ್ರಭುತ್ವದ ಮೇಲೆ ವಿಶ್ವಾಸವಿಟ್ಟು ಆ ಒಂದು ತತ್ವದ ಮೇಲೆ ಚುನಾವಣೆ ಮಾಡಬೇಕು ಮತ್ತು ಕಾಂಪ್ರಹೆನ್ಸಿವ್ ಆಗಿ ಅಮೆಂಡ್‌ಮೆಂಟ್ ತರಬೇಕು ಮತ್ತು ಇದರ ಪ್ರಯೋಜನ ಸಾಮಾನ್ಯ ವಾದಂಥ ಜನತೆಗೆ ಪರ್ಟಿಕ್ಯುಲರ್‌ಲಿ ವೀಕರ್ ಸೆಕ್ಷನ್‌ಗೆ ಆಗಬೇಕು ಎನ್ನತಕ್ಕಂಥ ಭಾವನೆಯಿಂದ ಇವೂತ್ತು ಸಧ್ಯಕ್ಕೆ adhoc basis ಮೇಲೆ ಅಡ್ಮಿನಿಸ್ಟ್ರೇಟರ್ಸ್‌ನ್ನು ಹಾಕಿದ್ದೇವೆ. It is not a permanent arrangement. It is for a few days for a few days only. ಕೆಲವು ದಿವಸಗಳಿಗಾಗಿ ಕೆಲವು ತಿಂಗಳುಗಳಿಗಾಗಿ ಇವರನ್ನು ಹಾಕಿದ್ದೇವೆಯೇ ಹೊರತು, ಇದು ಪರ್ಮನೆಂಟ್ ಅರೇಂಜ್‌ಮೆಂಟ್ ಅಲ್ಲ ಅಥವಾ ಪರ್ಮನೆಂಟ್ ವ್ಯವಸ್ಥೆಯೂ ಅಲ್ಲ. ಅದಕ್ಕಾಗಿ ತಾವು ಇದನ್ನು ಒಪ್ಪುತ್ತೀರೆಂದು ಭಾವಿಸಿದ್ದೇನೆ. ಈಗಲಾದರೂ ನಿಮ್ಮ ಮನಸ್ಸು ಬದಲಾಗಿರಬಹುದು, ಪರಿವರ್ತನೆಯಾಗಿರಬಹುದು. ಏಕೆಂದರೆ, ಈ ವ್ಯವಸ್ಥೆಯು ಮಂಡಲ್ ಪಂಚಾಯಿತಿಯಲ್ಲಿ ಅಷ್ಟೇ ಅಲ್ಲ, ಇವೊತ್ತು ಕಾರ್ಪೊರೇಷನ್‌ನಲ್ಲಿದೆ,ಮುನ್ಸಿಪಾಲಿಟಿ ಆಕ್ಟ್‌ನಲ್ಲಿದೆ, ಕೋ ಆಪರೇಟಿವ್ ಆಕ್ಟ್‌ನಲ್ಲಿದೆ. ಇವುಗಳೆಲ್ಲವೂ ಕೂಡ ಲೋಕಲ್ ಅಥಾರಿಟೀಸ್, ಲೋಕಲ್ ಬಾಡೀಸ್. ಅವುಗಳಲ್ಲಿರುವ ಈ ವ್ಯವಸ್ಥೆಯನ್ನು ಜಿಲ್ಲಾಪರಿಷತ್ತಿನಲ್ಲೂ ನಾವು ಅಳವಡಿಸಿಕೊಂಡಾಗ ಬಹುಶ: ತಾವು ಇದನ್ನು ಒಪ್ಪಬಹುದೆಂಬುದು ನನ್ನ . ಭಾವನೆ ಏಕೆಂದರೆ 8(ಸಿ) ಸೆಕ್ಷನ್ ಅನ್ನು ನೀವು ನೋಡಿರಲಿಲ್ಲ. ಈಗ ಅದು ಇದ್ದ ಮೇಲೆ ನೀವು ಮಾಡಿದ ಕಾನೂನಿನ ವಿರುದ್ಧ ನೀವೇ ಹೋಗುವ ಹಾಗಿಲ್ಲ. ಅದಕ್ಕೋಸ್ಕರ, ತಾವು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪುನ: ತಮ್ಮ ಮುಖಾಂತರ ಅವರಲ್ಲಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು :- ಪ್ರಸ್ತಾವ ಏನೆಂದರೆ ವಿಧಾನ ಪರಿಷತ್ತಿನಿಂದ ತಿರಸ್ಕೃತವಾಗಿರುವ

1992ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ(ತಿದ್ದುಪಡಿ) ವಿಧೇಯಕವನ್ನು ಪುನಃ ಪರ್ಯಾಲೋಚಿಸುವುದು. . . .

ಶ್ರೀ ಡಿ.ಬಿ.ಚಂದ್ರೇಗೌಡ :- ಪರ್ಯಾಲೋಚನೆ ಮಾಡುವುದಕ್ಕಿಂತ ಮುಂಚೆ ಮತಕ್ಕೆ ಹೇಗೆ ಹಾಕುತ್ತೀರಿ ? ಇದು ಜನತಂತ್ರ ವಿರೋಧಿ ಶಾಸನ. ವಿಕೇಂದ್ರೀಕೃತ ವ್ಯವಸ್ಥೆಯ ಕೊಲೆ. ಪ್ರಜಾಪ್ರಭುತ್ವಕ್ಕೆ ಹಾಡು ಹಗಲಿನಲ್ಲಿ ವಿಷ ಉಣಿಸುತ್ತಿದ್ದಾರೆ. ಆದುದರಿಂದ, ಈ ದೈತ್ಯ ಶಕ್ತಿಯ ವಿರುದ್ಧ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಕಾನೂನು ಪ್ರಜಾಪ್ರಭುತ್ವದ ಕೊನೆಯ ಪಾಠವೆಂದು ನೀವು ಹೇಳುವುದಾದರೆ, ಇದನ್ನು ನೀವು ಒಪ್ಪಿಕೊಳ್ಳಬೇಕಾಗುತ್ತದೆ.

(ಈ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಡಿ.ಬಿ.ಚಂದ್ರೇಗೌಡರ ನೇತೃತ್ವದಲ್ಲಿ ಜನತಾ ದಳ ಸದಸ್ಯರು ಸಭಾತ್ಯಾಗ ಮಾಡಿದರು)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 7ರವರೆಗೆ, ಎರಡೂ ಸೇರಿದಂತೆ.

ಉಪಾಧ್ಯಕ್ಷಿಣಿಯವರು: ಖಂಡ 2ರಿಂದ 7ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 7ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ:-

ಉಪಾಧ್ಯಕ್ಷಿಣಿಯವರು:- "ಪ್ರಸ್ತಾಪ ಏನೆಂದರೆ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಕಂದಾಯ ಸಚಿವರು):- ಉಪಾಧ್ಯಕ್ಷಿಣಿಯವರೆ, ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1992ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಿಣಿಯವರು:- ಪ್ರಸ್ತಾಪ ಏನೆಂದರೆ ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1992ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯಿತಿ ಸಮಿತಿಗಳು, ಮಂಡಲ ಪಂಚಾಯಿತಿಗಳು ಮತ್ತು ನ್ಯಾಯ ಪಂಚಾಯಿತಿಗಳ ತಿದ್ದಪಡಿ ವಿಧೇಯಕವನ್ನು ಸಭೆಯು ಪುನ: ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ವಿತ್ತೀಯ ಕಾರ್ಯಕಲಾಪಗಳು

1992-93ನೇ ಸಾಲಿನ ಇಲಾಖಾ ಬೇಡಿಕೆಗಳ ಮಂಡನೆ ಹಾಗೂ ಚರ್ಚೆ.